# ಮುಸ್ಲಿಮ್ ಮಕ್ಕಳು

## ಅರಿಯಲೇಬೇಕಾದ ವಿಷಯಗಳು

ಲೇಖಕರು

ಯಝೀನ್ ಅಲ್-ಘಾನಿಮ್

شركاء التنفيذ:

دار الإسلام جمعية الربوة رواد الترجمة المحتوى الإسلامي

يتاح طباعة هذا الإصدار ونشره بأي وسيلة مع الالتزام بالإشارة إلى المصدر وعدم التغيير في النص.

Telephone: +966114454900
ceo@rabwah.sa
P.O.BOX: 29465
RIYADH: 11557
www.islamhouse.com

**ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ**

# ಪೀಠಿಕೆ

ಅಲ್ಲಾಹನ ನಾಮದಿಂದ. ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು ಹೇಳುವುದೇನೆಂದರೆ : ಇವು ಸರ್ವಶಕ್ತನಾದ ಅಲ್ಲಾಹನ ಧರ್ಮದ ಮುಸ್ಲಿಂ ಮಕ್ಕಳು ತಿಳಿದಿರಲೇಬೇಕಾದ ವಿಷಯಗಳಾಗಿವೆ. ತಂದೆ-ತಾಯಿಗಳು ಚಿಕ್ಕಂದಿನಿಂದಲೇ ಮಕ್ಕಳಿಗೆ ಇವುಗಳನ್ನು ಕಲಿಸಿಕೊಡಬೇಕು. ಇದು ಅಕೀದ (ವಿಶ್ವಾಸಶಾಸ್ತ್ರ), ಕರ್ಮಶಾಸ್ತ್ರ, ಜೀವನಚರಿತ್ರೆ, ಶಿಷ್ಟಾಚಾರ, ಕುರ್‌ಆನ್ ವ್ಯಾಖ್ಯಾನ, ಹದೀಸ್, ಗುಣನಡವಳಿಕೆ ಮತ್ತು ದಿಕ್ರ್‌ಗಳ ಬಗ್ಗೆಯಿರುವ ಸರಳ, ಸುಲಭ ಮತ್ತು ಸಮಗ್ರ ಪಠ್ಯಕ್ರಮವಾಗಿದೆ.ಇದು ಮಕ್ಕಳಿಗೆ, ಎಲ್ಲಾ ವಯೋಮಾನದವರಿಗೆ ಹಾಗೂ ನವಮುಸ್ಲಿಮರಿಗೆ ಸೂಕ್ತವಾಗಿದೆ. ಇದನ್ನು ಮನೆಗಳಲ್ಲಿ, ಪೂರ್ವಪ್ರಾಥಮಿಕ ಶಾಲೆಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸಲಾಗುತ್ತದೆ, ಕಂಠಪಾಠ ಮಾಡಿಸಲಾಗುತ್ತದೆ ಮತ್ತು ವಿವರಿಸಿಕೊಡಲಾಗುತ್ತದೆ. ನಾನು ಅವುಗಳನ್ನು ವಿಷಯಾನುಕ್ರಮದಲ್ಲಿ, ಪ್ರಶ್ನೋತ್ತರ ಶೈಲಿಯಲ್ಲಿ ರಚಿಸಿದ್ದೇನೆ. ಏಕೆಂದರೆ ಈ ಶೈಲಿಯು ಮೆದುಳನ್ನು ಚುರುಕುಗೊಳಿಸುತ್ತದೆ ಮತ್ತು ಕಂಠಪಾಠವನ್ನು ಆಳವಾಗಿ ಬೇರೂರಿಸುತ್ತದೆ. ಬೋಧಕರು ತಮ್ಮ ವಿದ್ಯಾರ್ಥಿಗಳ ವಯೋಮಾನಕ್ಕೆ ಅನುಗುಣವಾಗಿ ಪಠ್ಯಗಳನ್ನು ಆರಿಸಿಕೊಳ್ಳಬೇಕು. ಇದನ್ನು ಪ್ರಯೋಜನಕಾರಿಯನ್ನಾಗಿ ಮಾಡಲು ಮತ್ತು ಸ್ವೀಕರಿಸಲು ನಾನು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ.

ಇವುಗಳ ಮೂಲಾಧಾರವು ಅಲ್ಲಾಹನ ಈ ವಚನವಾಗಿದೆ:

يَٰٓأَيُّهَا ٱلَّذِينَ ءَامَنُواْ قُوٓاْ أَنفُسَكُمۡ وَأَهۡلِيكُمۡ نَارٗا وَقُودُهَا ٱلنَّاسُ وَٱلۡحِجَارَةُ عَلَيۡهَا مَلَٰٓئِكَةٌ غِلَاظٞ شِدَادٞ لَّا يَعۡصُونَ ٱللَّهَ مَآ أَمَرَهُمۡ وَيَفۡعَلُونَ مَا يُؤۡمَرُونَ ٦

"ಓ ಸತ್ಯವಿಶ್ವಾಸಿಗಳೇ ! ಮನುಷ್ಯರನ್ನು ಮತ್ತು ಕಲ್ಲುಗಳನ್ನು ಇಂಧನವಾಗಿ ಬಳಸುವ ನರಕಾಗ್ನಿಯಿಂದ ಸ್ವತಃ ನಿಮ್ಮನ್ನೂ, ನಿಮ್ಮ ಕುಟುಂಬದವರನ್ನೂ ರಕ್ಷಿಸಿರಿ . ಅದರ ಮೇಲ್ನೋಟ

ವಹಿಸಲು ಕಠೋರ ಸ್ವಭಾವದವರೂ , ಅತಿ ಬಲಿಷ್ಠರೂ ಆಗಿರುವ ಮಲಕ್‌ಗಳಿರುವರು . ಅಲ್ಲಾಹು ಅವರೊಂದಿಗೆ ಆಜ್ಞಾಪಿಸಿದ ಯಾವುದೇ ವಿಷಯವನ್ನೂ ಅವರು ಧಿಕ್ಕರಿಸಲಾರರು . ಅವರೊಂದಿಗೆಆಜ್ಞಾಪಿಸಲಾಗುವ ಆಜ್ಞೆಯನ್ನೇ ಅವರು ಪಾಲಿಸುವರು." [ಸೂರ ಅತ್ತಹ್ರೀಮ್:6].

ಅಬ್ದುಲ್ಲಾ ಬಿನ್ ಅಬ್ಬಾಸ್ (ರ) ರಿಂದ ವರದಿ. ಅವರು ಹೇಳಿದರು: ಒಂದು ದಿನ ನಾನು ಪ್ರವಾದಿ(ﷺ) ರ ಹಿಂದೆ ಸವಾರಿ ಮಾಡುತ್ತಿದ್ದೆ. ಆಗ ಅವರು ಹೇಳಿದರು: "ಪುಟ್ಟಾ, ನಾನು ನಿನಗೆ ಕೆಲವು ವಚನಗಳನ್ನು ಕಲಿಸುತ್ತೇನೆ. ನೀನು ಅಲ್ಲಾಹನ ಆದೇಶಗಳನ್ನು ಸಂರಕ್ಷಿಸು. ಅವನು ನಿನ್ನನ್ನು ಸಂರಕ್ಷಿಸುವನು. ಅಲ್ಲಾಹನ ಹಕ್ಕುಗಳ ಬಗ್ಗೆ ಪ್ರಜ್ಞಾವಂತನಾಗಿರು . ನೀನು ಅವನನ್ನು ನಿನ್ನ ಮುಂಭಾಗದಲ್ಲಿ ಕಾಣುವೆ. ನೀನು ಬೇಡುವುದಾದರೆ ಅಲ್ಲಾಹನಲ್ಲಿ ಮಾತ್ರ ಬೇಡು. ನೀನು ಸಹಾಯ ಯಾಚಿಸುವುದಾದರೆ ಅಲ್ಲಾಹನಲ್ಲಿ ಮಾತ್ರ ಸಹಾಯಯಾಚಿಸು . ತಿಳಿದುಕೋ! ನಿನಗೆ ಏನಾದರೂ ಪ್ರಯೋಜನವನ್ನು ತರಲು ಜನರೆಲ್ಲರೂ ಒಟ್ಟುಗೂಡಿದರೂ, ಅಲ್ಲಾಹು ನಿನಗೆ ವಿಧಿಸಿದ್ದನ್ನಲ್ಲದೆ ಬೇರೆ ಯಾವ ಪ್ರಯೋಜನವನ್ನು ತರಲು ಅವರಿಗೆ ಸಾಧ್ಯವಿಲ್ಲ . ನಿಮಗೆ ಏನಾದರೂ ಹಾನಿ ಮಾಡಲು ಅವರೆಲ್ಲರೂ ಒಟ್ಟುಗೂಡಿದರೂ, ಅಲ್ಲಾಹು ನಿನಗೆ ವಿಧಿಸಿದ್ದನ್ನಲ್ಲದೆ ಬೇರೆ ಯಾವುದೇ ಹಾನಿಯನ್ನುಂಟು ಮಾಡಲು ಅವರಿಗೆ ಸಾಧ್ಯವಿಲ್ಲ, ಲೇಖನಿಗಳನ್ನು ಎತ್ತಲಾಗಿದೆ ಮತ್ತು ದಾಖಲೆಗಳು ಒಣಗಿವೆ. [ತಿರ್ಮಿದಿ, ಅಹ್ಮದ್]

### ಮಕ್ಕಳಿಗೆ ಶಿಕ್ಷಣ ನೀಡುವುದರ ಮಹತ್ವ:

ಮಕ್ಕಳು ತಮ್ಮ ಧರ್ಮದ ಬಗ್ಗೆ ಕಡ್ಡಾಯವಾಗಿ ಕಲಿಯಬೇಕಾದುದನ್ನು ಕಲಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ. ಇದರಿಂದ ಮಕ್ಕಳು ಇಸ್ಲಾಂ ಧರ್ಮದ ಸಹಜ ಪ್ರಕೃತಿಯಲ್ಲಿ ಬೆಳೆದು ಪೂರ್ಣ ಮಾನವರಾಗುತ್ತಾರೆ. ವಿಶ್ವಾಸದ ಮಾರ್ಗದಲ್ಲಿ ಉತ್ತಮ ಏಕದೇವವಿಸ್ವಾಸಿಯಾಗುತ್ತಾರೆ. ಇಮಾಮ್ ಇಬ್ನ್ ಅಬೂ ಝೈದ್ ಅಲ್ -ಖೈರವಾನಿ(ರ) ಹೇಳುತ್ತಾರೆ:

"ಮಕ್ಕಳಿಗೆ ಏಳು ವರ್ಷ ಪ್ರಾಯವಾಗುವಾಗ ಅವರಿಗೆ ನಮಾಝ್ ಮಾಡಲು ಆದೇಶಿಸಬೇಕು. ಹತ್ತನೇ ವಯಸ್ಸಿನಲ್ಲೂ ನಮಾಝ್ ಮಾಡದಿದ್ದರೆ ಹೊಡೆಯಬೇಕು. ಅವರನ್ನು

ಬೇರೆ ಬೇರೆಯಾಗಿ ಮಲಗಿಸಬೇಕು . ಅಂತೆಯೇ, ಅವರು ಪ್ರೌಢಾವಸ್ಥೆಯನ್ನು ತಲುಪುವ ಮೊದಲೇ, ಅಲ್ಲಾಹು ದಾಸರಿಗೆ ಕಡ್ಡಾಯಗೊಳಿಸಿದ ಮಾತು ಮತ್ತು ಪ್ರವೃತ್ತಿಗಳನ್ನು ಅವರು ತಿಳಿದಿರುವಂತೆ ನೋಡಿಕೊಳ್ಳಬೇಕು. ಏಕೆಂದರೆ ಅವರು ಪ್ರೌಢಾವಸ್ಥೆಗೆ ಬರುವ ಮೊದಲೇ ಅದು ಅವರ ಹೃದಯದಲ್ಲಿ ನೆಲೆಗೊಂಡಿರುವುದಕ್ಕಾಗಿ,ಅವರ ಮನಸ್ಸುಗಳು ಶಾಂತವಾಗುವುದಕ್ಕಾಗಿ ಮತ್ತು ಅವರು ತಮ್ಮ ಅಂಗಾಂಗಗಳು ಅವರು ಕಲಿತದ್ದನ್ನು ಸುಗಮವಾಗಿ ನಿರ್ವಹಿಸುವುದಕ್ಕಾಗಿ." (ಮುಕದ್ದಿಮ ಅಬೂ ಝೈದ್ ಅಲ್-ಖೈರವಾನಿ ಪುಟ 5).

*****

# ಅಕೀದ ವಿಭಾಗ

**ಪ್ರಶ್ನೆ 1. ನಿನ್ನ ರಬ್ಬ್ ಯಾರು?**

**ಉತ್ತರ:** ನನ್ನನ್ನು ಪೋಷಿಸಿ ಬೆಳೆಸಿದವನು ಮತ್ತು ತನ್ನ ಅನುಗ್ರಹದಿಂದ ಸರ್ವಲೋಕಗಳನ್ನು ಪೋಷಿಸಿ ಬೆಳೆಸುವವನೇ ನನ್ನ ರಬ್ಬ್.

ಪುರಾವೆ ಅಲ್ಲಾಹನ ವಚನ :﴿الْحَمْدُ لِلَّهِ رَبِّ الْعَالَمِينَ﴾

**"ಸರ್ವಲೋಕಗಳ ಪರಿಪಾಲಕನಾಗಿರುವ ಅಲ್ಲಾಹನಿಗೆ ಸ್ತುತಿ."** [ಸೂರ ಅಲ್-ಫಾತಿಹ:2].

**ಪ್ರಶ್ನೆ 2. ನಿನ್ನ ಧರ್ಮ ಯಾವುದು?**

**ಉತ್ತರ:** ನನ್ನ ಧರ್ಮ ಇಸ್ಲಾಂ. ಇಸ್ಲಾಮ್ ಎಂದರೆ ತೌಹೀದ್ (ಏಕದೇವವಿಶ್ವಾಸ) ನ ಮೂಲಕ ಅಲ್ಲಾಹನಿಗೆ ಸಂಪೂರ್ಣ ಶರಣಾಗುವುದು, ಅನುಸರಣೆಯ ಮೂಲಕ ಅವನಿಗೆ ವಿಧೇಯವಾಗಿರುವುದು ಮತ್ತು ಶಿರ್ಕ್ (ಬಹುದೇವವಿಶ್ವಾಸ) ಹಾಗೂ ಅದರ ಜನರಿಂದ ದೂರವಿರುವುದು. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ

﴿إِنَّ الدِّينَ عِنْدَ اللَّهِ الْإِسْلَامُ... ﴾

**"ಖಂಡಿತವಾಗಿಯೂ ಅಲ್ಲಾಹನ ಬಳಿ ಧರ್ಮವೆಂದರೆ ಇಸ್ಲಾಮ್ ಮಾತ್ರವಾಗಿದೆ."** [ಸೂರ ಆಲು ಇಮ್ರಾನ್:19].

**ಪ್ರಶ್ನೆ 3. ನಿನ್ನ ಪ್ರವಾದಿ ಯಾರು?**

**ಉತ್ತರ:** ನನ್ನ ಪ್ರವಾದಿ ಮುಹಮ್ಮದ್ ﷺ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: ﴿مُّحَمَّدٌ رَّسُولُ ٱللَّهِۚ ...﴾

**"ಮುಹಮ್ಮದ್ ಅಲ್ಲಾಹುವಿನ ಸಂದೇಶವಾಹಕರಾಗಿರುವರು."** [ಸೂರ ಅಲ್-ಫತ್ಹ್:29].

**ಪ್ರಶ್ನೆ 4. ಕಲಿಮತು-ತೌಹೀದ್ ಅನ್ನು ಮತ್ತು ಅದರ ಅರ್ಥವನ್ನು ತಿಳಿಸಿ?**

**ಉತ್ತರ:** ಕಲಿಮತು-ತೌಹೀದ್ ಎಂದರೆ **"ಲಾ ಇಲಾಹ ಇಲ್ಲಲ್ಲಾಹ್".** ಅದರ ಅರ್ಥ: ಅಲ್ಲಾಹನನ್ನು ಹೊರತುಪಡಿಸಿ ಆರಾಧನೆಗೆ ಯಾರೂ ನೈಜ ಹಕ್ಕುದಾರರಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿فَاعْلَمْ أَنَّهُ لَا إِلَهَ إِلَّا اللَّهُ...﴾

**"ಅಲ್ಲಾಹನನ ಹೊರತು ಅನ್ಯ ಆರಾಧ್ಯರಿಲ್ಲ ಎಂಬುದನ್ನು ಅರಿತುಕೊಳ್ಳಿರಿ ."** [ಸೂರ ಮುಹಮ್ಮದ್:19].

**ಪ್ರಶ್ನೆ 5. ಸರ್ವಶಕ್ತನಾದ ಅಲ್ಲಾಹು ಎಲ್ಲಿದ್ದಾನೆ?**

**ಉತ್ತರ:** ಅಲ್ಲಾಹನು ಆಕಾಶಗಳ ಮೇಲೆ , ಅವನ ಎಲ್ಲಾ ಸೃಷ್ಟಿಗಳ ಮೇಲೆ ಅರ್ಶ್‌ನಲ್ಲಿ ಆರೂಢನಾಗಿದ್ದಾನೆ. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿الرَّحْمَنُ عَلَى الْعَرْشِ اسْتَوَى﴾

**"ಪರಮ ದಯಾಮಯನು (ಅಲ್ಲಾಹು) ಅರ್ಶ್‌ನಲ್ಲಿ ಆರೂಢನಾದನು."** [ಸೂರ ತ್ವಾಹಾ:5].

ಅಲ್ಲಾಹನು ಹೇಳುತ್ತಾನೆ:

﴿وَهُوَ ٱلْقَاهِرُ فَوْقَ عِبَادِهِۦۚ وَهُوَ ٱلْحَكِيمُ ٱلْخَبِيرُ18﴾

**"ಅವನು ತನ್ನ ದಾಸರ ಮೇಲೆ ಪರಮಾಧಿಕಾರವುಳ್ಳವನಾಗಿರುವನು. ಅವನು ಯುಕ್ತಿಪೂರ್ಣನೂ ಸೂಕ್ಷ್ಮ ಜ್ಞಾನಿಯೂ ಆಗಿರುವನು."** [ಸೂರ ಅಲ್-ಅನ್ಆಮ್:18].

**ಪ್ರಶ್ನೆ 6. ಮುಹಮ್ಮದ್ ﷺ ಅಲ್ಲಾಹನ ಸಂದೇಶವಾಹಕರು ಎಂಬ ಸಾಕ್ಷ್ಯದ ಅರ್ಥವೇನು?**

**ಉತ್ತರ:** ಅದರ ಅರ್ಥ: ಅಲ್ಲಾಹು ಅವರನ್ನು ಸರ್ವಲೋಕಗಳಿಗೆ ಸುವಾರ್ತೆ ನೀಡುವವರಾಗಿ ಮತ್ತು ಎಚ್ಚರಿಕೆ ನೀಡುವವರಾಗಿ ಕಳುಹಿಸಿದನು.

**ಇವುಗಳನ್ನು ಕಡ್ಡಾಯವಾಗಿ ಪಾಲಿಸಬೇಕು:**

1- ಅವರು ಆಜ್ಞಾಪಿಸಿದ ವಿಷಯಗಳನ್ನು ಅನುಸರಿಸುವುದು.

2- ಅವರು ತಿಳಿಸಿಕೊಟ್ಟದ್ದರಲ್ಲಿ ವಿಶ್ವಾಸವಿಡುವುದು.

3- ಅವರನ್ನು ಧಿಕ್ಕರಿಸದಿರುವುದು.

4- ಅವರ ಆದೇಶದ ಪ್ರಕಾರವಲ್ಲದೆ ಅಲ್ಲಾಹನನ್ನು ಆರಾಧಿಸದಿರುವುದು. ಅಂದರೆ ಸುನ್ನತ್ತನ್ನು ಅನುಸರಿಸುವುದು ಮತ್ತು ಬಿದ್ಅತ್‌ಗಳನ್ನು ತ್ಯಜಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ : **"(ಅಲ್ಲಾಹುವಿನ) ಸಂದೇಶವಾಹಕರನ್ನು ಯಾರು ಅನುಸರಿಸುವನೋ ಖಂಡಿತವಾಗಿಯೂ ಅವನು ಅಲ್ಲಾಹುವನ್ನು ಅನುಸರಿಸಿರುವನು ."** [ ಸೂರ ಅನ್ನಿಸಾಅ್:80].

ಮತ್ತೊಂದೆಡೆ ಅವನು ಹೇಳುತ್ತಾನೆ: ﴿وَمَا يَنْطِقُ عَنِ الْهَوَى إِنْ هُوَ إِلَّا وَحْيٌ يُوحَى﴾

**"ಅವರು ತಮ್ಮಿಷ್ಟದಂತೆ ಮಾತನಾಡುವುದಿಲ್ಲ . ಅದು ಅವರಿಗೆ ದಿವ್ಯಸಂದೇಶವಾಗಿ ನೀಡಲಾಗುವ ಒಂದು ಸಂದೇಶ ಮಾತ್ರವಾಗಿದೆ."** [ಸೂರ ಅನ್ನಜ್ಮ್: 3-4]

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿لَقَدْ كَانَ لَكُمْ فِي رَسُولِ اللَّهِ أُسْوَةٌ حَسَنَةٌ لِمَنْ كَانَ يَرْجُو اللَّهَ وَالْيَوْمَ الْآخِرَ وَذَكَرَ اللَّهَ كَثِيرًا21 ﴾

**“ಖಂಡಿತವಾಗಿಯೂ ನಿಮಗೆ ಅಲ್ಲಾಹುವಿನ ಸಂದೇಶವಾಹಕರಲ್ಲಿ ಅತ್ಯುತ್ತಮ ಮಾದರಿಯಿದೆ. ಅಂದರೆ ಅಲ್ಲಾಹುವನ್ನು ಮತ್ತು ಅಂತ್ಯದಿನವನ್ನು ನಿರೀಕ್ಷಿಸುವವರಿಗೆ ಹಾಗೂ ಅಲ್ಲಾಹುವನ್ನು ಅತ್ಯಧಿಕವಾಗಿ ಸ್ಮರಿಸುವವರಿಗೆ.”** [ಸೂರ ಅಲ್-ಅಹ್ಝಾಬ್:21].

**ಪ್ರಶ್ನೆ 7. ಸರ್ವಶಕ್ತನಾದ ಅಲ್ಲಾಹು ನಮ್ಮನ್ನು ಏಕೆ ಸೃಷ್ಟಿಸಿದನು?**

**ಉತ್ತರ:** ಸರ್ವಶಕ್ತನಾದ ಅಲ್ಲಾಹು ಅವನನ್ನು ಮಾತ್ರ ಆರಾಧಿಸಲು ನಮ್ಮನ್ನು ಸೃಷ್ಟಿಸಿದನು. ಆಟ ಮತ್ತು ವಿನೋದಗಳಿಗೆ ಅಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَمَا خَلَقْتُ الْجِنَّ وَالْإِنْسَ إِلَّا لِيَعْبُدُونِ**56**﴾

**"ನನ್ನನ್ನು ಆರಾಧಿಸುವುದಕ್ಕಾಗಿಯೇ ವಿನಾ ನಾನು ಜಿನ್‌ನ್‌ಗಳನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿಲ್ಲ."** [ಸೂರ ಅದ್ದಾರಿಯಾತ್:56].

**ಪ್ರಶ್ನೆ 8. ಆರಾಧನೆ ಎಂದರೇನು?**

ಆರಾಧನೆ ಎಂದರೆ ಅಲ್ಲಾಹು ಇಷ್ಟಪಡುವ ಹಾಗೂ ಸಂಪ್ರೀತನಾಗುವ ಎಲ್ಲಾ ಮಾತುಗಳು ಮತ್ತು ಎಲ್ಲಾ ಬಾಹ್ಯ ಹಾಗೂ ಆಂತರಿಕ ಕರ್ಮಗಳು ಅಡಕವಾಗಿರುವ ಸಮಗ್ರ ಹೆಸರಾಗಿದೆ.

- ಬಾಹ್ಯ ಕರ್ಮಗಳು ಎಂದರೆ , ಉದಾಹರಣೆಗೆ ನಾಲಿಗೆಯಿಂದ ಅಲ್ಲಾಹನ ಸ್ಮರಣೆ ಮಾಡುವುದು, ಅಂದರೆ ತಸ್ಬೀಹ್, ತಹ್ಮೀದ್, ತಕ್ಬೀರ್, ನಮಾಝ್ ಮತ್ತು ಹಜ್ಜ್.
- ಆಂತರಿಕ ಕರ್ಮಗಳು ಎಂದರೆ, ಉದಾಹರಣೆಗೆ ಭರವಸೆ, ಭಯ ಮತ್ತು ನಿರೀಕ್ಷೆ.

**ಪ್ರಶ್ನೆ 9. ನಮ್ಮ ಅತಿದೊಡ್ಡ ಕರ್ತವ್ಯ ಯಾವುದು?**

**ಉತ್ತರ:** ನಮ್ಮ ದೊಡ್ಡ ಕರ್ತವ್ಯ ಸರ್ವಶಕ್ತ ಅಲ್ಲಾಹನನ್ನು ಏಕೈಕಗೊಳಿಸುವುದು (ತೌಹೀದ್).

**ಪ್ರಶ್ನೆ 10. ತೌಹೀದಿನ ವಿಧಗಳು ಯಾವುವು?**

**ಉತ್ತರ:**

- ತೌಹೀದೆ ರುಬೂಬಿಯ್ಯ: ಅಂದರೆ, ಅಲ್ಲಾಹನು ಮಾತ್ರ ಸೃಷ್ಟಿಕರ್ತನು , ಅನ್ನಾಧಾರ ಒದಗಿಸುವವನು, ಮಾಲೀಕನು ಮತ್ತು ನಿಯಂತ್ರಕನೆಂದು ನಂಬುವುದು.
- ತೌಹೀದೆ ಉಲೂಹಿಯ್ಯ: ಅಂದರೆ ಆರಾಧನೆಯಲ್ಲಿ ಅಲ್ಲಾಹನನ್ನು ಏಕನಾಗಿಸುವುದು. ಅಂದರೆ ಸರ್ವಶಕ್ತನಾದ ಅಲ್ಲಾಹನನ್ನು ಹೊರತುಪಡಿಸಿ ಯಾರನ್ನೂ ಆರಾಧಿಸದಿರುವುದು.
- ತೌಹೀದೆ ಅಸ್ಮಾವಸ್ಸಿಫಾತ್: ಇದು ಕುರ್‌ಆನ್ ಮತ್ತು ಸಹೀಹ್ ಹದೀಸಿನಲ್ಲಿ ಬಂದಿರುವ ಅಲ್ಲಾಹನ ನಾಮಗಳು ಮತ್ತು ಗುಣವಿಶೇಷಣಗಳಲ್ಲಿ, ಅವುಗಳನ್ನು ಉಪಮಿಸದೆ, ಹೋಲಿಸದೆ, ನಿರಾಕರಿಸದೆ ವಿಶ್ವಾಸವಿಡುವುದು.

ಈ ಮೂರು ವಿಧದ ತೌಹೀದ್‌ಗೆ ಪುರಾವೆ ಅಲ್ಲಾಹನ ಈ ವಚನ:

(رَّبُّ ٱلسَّمَـٰوَٰتِ وَٱلْأَرْضِ وَمَا بَيْنَهُمَا فَٱعْبُدْهُ وَٱصْطَبِرْ لِعِبَـٰدَتِهِۦ ۚ هَلْ تَعْلَمُ لَهُۥ سَمِيًّا ﴾

"ಅವನು ಆಕಾಶಗಳ , ಭೂಮಿಯ ಮತ್ತು ಅವೆರಡರ ಮಧ್ಯೆಯಿರುವವುಗಳ ಪ್ರಭುವಾಗಿರುವನು. ಆದ್ದರಿಂದ ಅವನನ್ನು (ಮಾತ್ರ) ಆರಾಧಿಸಿರಿ ಮತ್ತು ಅವನ ಆರಾಧನೆಯಲ್ಲಿ ತಾವು ತಾಳ್ಮೆಯಿಂದ ಅಚಲರಾಗಿ ನಿಲ್ಲಿರಿ . ಅವನಿಗೆ ಸರಿಸಮಾನರಾಗಿರುವ ಯಾರನ್ನಾದರೂ ತಾವು ಅರಿತಿರುವಿರಾ ?" [ಸೂರ ಮರ್ಯಮ್:65].

**ಪ್ರಶ್ನೆ 11. ಅತಿ ದೊಡ್ಡ ಪಾಪ ಯಾವುದು?**

**ಉತ್ತರ:** ಅಲ್ಲಾಹನೊಡನೆ ಶಿರ್ಕ್ (ಸಹಭಾಗಿತ್ವ) ಮಾಡುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿إِنَّ اللَّهَ لَا يَغْفِرُ أَنْ يُشْرَكَ بِهِ وَيَغْفِرُ مَا دُونَ ذَلِكَ لِمَنْ يَشَاءُ وَمَنْ يُشْرِكْ بِاللَّهِ فَقَدِ افْتَرَى إِثْمًا عَظِيمًا ﴾

"ತನ್ನೊಂದಿಗೆ ಸಹಭಾಗಿತ್ವ ಮಾಡಲಾಗುವುದನ್ನು ಅಲ್ಲಾಹು ಎಂದಿಗೂ ಕ್ಷಮಿಸಲಾರನು . ಅದರ ಹೊರತಾಗಿರುವುದನ್ನು ಅವನು ಇಚ್ಛಿಸುವವರಿಗೆ ಕ್ಷಮಿಸುವನು. ಯಾರು ಅಲ್ಲಾಹುವಿನೊಂದಿಗೆ

**ಸಹಭಾಗಿತ್ವ ಮಾಡುವನೋ ಖಂಡಿತವಾಗಿಯೂ ಅವನು ಘೋರವಾದ ಒಂದು ಪಾಪವನ್ನು ಹೆಣೆದಿರುವನು.”** [ಸೂರ ಅನ್ನಿಸಾ:48]

**ಪ್ರಶ್ನೆ 12. ಶಿರ್ಕ್ ಮತ್ತು ಅದರ ವಿಧಗಳನ್ನು ತಿಳಿಸಿ.**

**ಉತ್ತರ:** ಶಿರ್ಕ್ ಎಂದರೆ ಅಲ್ಲಾಹನಲ್ಲದವರಿಗೆ ಆರಾಧನೆಗಳನ್ನು ಅರ್ಪಿಸುವುದು.

ಅದರ ವಿಧಗಳು:

- **ದೊಡ್ಡ ಶಿರ್ಕ್:** ಉದಾಹರಣೆಗೆ: ಅಲ್ಲಾಹು ಅಲ್ಲದವರನ್ನು ಕರೆದು ಪ್ರಾರ್ಥಿಸುವುದು , ಅಲ್ಲಾಹು ಅಲ್ಲದವರಿಗೆ ಸುಜೂದ್ (ಸಾಷ್ಟಾಂಗ ನಮನ) ಮಾಡುವುದು, ಅಥವಾ ಅಲ್ಲಾಹು ಅಲ್ಲದವರಿಗೆ ಬಲಿ ಅರ್ಪಿಸುವುದು.
- **ಸಣ್ಣ ಶಿರ್ಕ್:** ಉದಾಹರಣೆಗೆ: ಅಲ್ಲಾಹು ಅಲ್ಲದವರ ಮೇಲೆ ಆಣೆ ಹಾಕುವುದು , ಪ್ರಯೋಜನವನ್ನು ತರಲು ಅಥವಾ ಹಾನಿಯನ್ನು ತಡೆಗಟ್ಟಲು ತಾಯಿತಗಳನ್ನು ಕಟ್ಟುವುದು, ಲಘುವಾದ ರೀತಿಯಲ್ಲಿರುವ ತೋರಿಕೆ, ಅಂದರೆ ಒಬ್ಬರು ತನ್ನ ನಮಾಝನ್ನು ನೋಡುತ್ತಿದ್ದಾರೆ ಎಂದು ಭಾಸವಾಗುವಾಗ ನಮಾಝನ್ನು ಸುಂದರವಾಗಿ ನಿರ್ವಹಿಸುವುದು.

**ಪ್ರಶ್ನೆ 13. ಸರ್ವಶಕ್ತನಾದ ಅಲ್ಲಾಹನನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಅಗೋಚರ ಜ್ಞಾನವಿದೆಯೇ?**

**ಉತ್ತರ:** ಅಲ್ಲಾಹನಿಗಲ್ಲದೆ ಯಾರಿಗೂ ಅಗೋಚರ ಜ್ಞಾನವಿಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿قُل لَّا يَعۡلَمُ مَن فِي ٱلسَّمَٰوَٰتِ وَٱلۡأَرۡضِ ٱلۡغَيۡبَ إِلَّا ٱللَّهُۚ وَمَا يَشۡعُرُونَ أَيَّانَ يُبۡعَثُونَ﴾

**“ಹೇಳಿರಿ: ಭೂಮಿ-ಆಕಾಶಗಳಲ್ಲಿ, ಅಲ್ಲಾಹನ ಹೊರತು ಯಾರೂ ಅಗೋಚರ ಜ್ಞಾನವನ್ನು ತಿಳಿದವರಿಲ್ಲ. ತಮ್ಮನ್ನು ಯಾವಾಗ ಎಬ್ಬಿಸಲಾಗುವುದೆಂದೂ ಅವರಿಗೆ (ಆ ನಿಮ್ಮ ಆರಾಧ್ಯರಿಗೆ) ತಿಳಿದಿಲ್ಲ.”** [ಸೂರ ಅನ್ನಮ್ಲ್:65].

**ಪ್ರಶ್ನೆ 14. ಈಮಾನಿನ ಸ್ತಂಭಗಳು ಎಷ್ಟು?**

**ಉತ್ತರ:**

1. ಸರ್ವಶಕ್ತನಾದ ಅಲ್ಲಾಹನಲ್ಲಿ ವಿಶ್ವಾಸವಿಡುವುದು.
2. ಅವನ ಮಲಕ್(ದೇವಚರ)ರಲ್ಲಿ ವಿಶ್ವಾಸವಿಡುವುದು.
3. ಅವನು ಅವತೀರ್ಣಗೊಳಿಸಿದ ಗ್ರಂಥಗಳಲ್ಲಿ ವಿಶ್ವಾಸವಿಡುವುದು.
4. ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು.
5. 5- ಅಂತ್ಯ ದಿನದಲ್ಲಿ ವಿಶ್ವಾಸವಿಡುವುದು.
6. ವಿಧಿಯಲ್ಲಿ - ಅದರ ಒಳಿತು ಮತ್ತು ಕೆಡುಕುಗಳಲ್ಲಿ - ವಿಶ್ವಾಸವಿಡುವುದು.

ಇಮಾಂ ಮುಸ್ಲಿಂ ವರದಿ ಮಾಡಿದ ಹದೀಸ್ ಜಿಬ್ರೀಲ್ ಇದಕ್ಕೆ ಪುರಾವೆಯಾಗಿದೆ . ಜಿಬ್ರೀಲರು ಪ್ರವಾದಿﷺ ರೊಡನೆ ಹೇಳಿದರು :"ನನಗೆ ಈಮಾನಿನ ಬಗ್ಗೆ ತಿಳಿಸಿಕೊಡಿ ." **ಪ್ರವಾದಿ(ಸ) ರವರು ಉತ್ತರಿಸಿದರು: “ಈಮಾನ್ ಎಂದರೆ ಅಲ್ಲಾಹನಲ್ಲಿ, ಅವನ ದೇವದೂತರಲ್ಲಿ, ಅವನ ಗ್ರಂಥಗಳಲ್ಲಿ, ಅವನ ಸಂದೇಶವಾಹಕರಲ್ಲಿ, ಅವನ ಗ್ರಂಥಗಳಲ್ಲಿ, ಅಂತ್ಯದಿನದಲ್ಲಿ ಮತ್ತು ವಿಧಿಯಲ್ಲಿ ಅದರ ಒಳಿತು ಮತ್ತು ಕೆಡುಕುಗಳಲ್ಲಿ ವಿಶ್ವಾಸವಿಡುವುದು.”**

**ಪ್ರಶ್ನೆ 15. ಈಮಾನಿನ ಸ್ತಂಭಗಳನ್ನು ವಿವರಿಸಿ.**

ಉತ್ತರ:

- ❖ ಸರ್ವಶಕ್ತನಾದ ಅಲ್ಲಾಹನಲ್ಲಿ ವಿಶ್ವಾಸವಿಡುವುದು.

ನಿಮ್ಮನ್ನು ಸೃಷ್ಟಿಸಿದವನು ಮತ್ತು ನಿಮಗೆ ಅನ್ನಾಧಾರ ಒದಗಿಸಿದವನು ಅಲ್ಲಾಹನಾಗಿದ್ದಾನೆ ಮತ್ತು ಅವನು ಸರ್ವ ಜೀವರಾಶಿಗಳ ಮಾಲೀಕ ಮತ್ತು ನಿಯಂತ್ರಕನಾಗಿದ್ದಾನೆಂದು ವಿಶ್ವಾಸವಿಡುವುದು.ಅವನೇ ನೈಜ ಆರಾಧ್ಯ . ಅವನಲ್ಲದೆ ಬೇರೆ ಸತ್ಯವಾದ ಆರಾಧ್ಯರಿಲ್ಲ.

ಅವನು ಮಹಾನನು, ಶ್ರೇಷ್ಠನು ಮತ್ತು ಸಂಪೂರ್ಣನು. ಸರ್ವಸ್ತುತಿಗಳು ಅವನಿಗೆ ಮಾತ್ರ ಮೀಸಲು. ಅವನಿಗೆ ಅತ್ಯಂತ ಸುಂದರವಾದ ಹೆಸರುಗಳು ಹಾಗು ಅತ್ಯುತ್ತಮ ಗುಣವಿಶೇಷಣಗಳಿವೆ. ಆತನ ಸರಿಸಾಟಿಯಾಗಿ ಯಾರೂ ಇಲ್ಲ . ಅವನಿಗೆ ಹೋಲಿಕೆಯಾಗಿ ಯಾರೂ ಇಲ್ಲ.

❖ <u>ಮಲಕ್ (ದೇವದೂತ) ಗಳಲ್ಲಿ ವಿಶ್ವಾಸವಿಡುವುದು:</u>

ಅವರು ಸೃಷ್ಟಿಗಳಾಗಿದ್ದಾರೆ. ತನ್ನ ಆರಾಧನೆ ಮಾಡಲು ಮತ್ತು ತನ್ನ ಆಜ್ಞೆಗಳಿಗೆ ಸಂಪೂರ್ಣ ವಿಧೇಯರಾಗಲು ಅಲ್ಲಾಹು ಅವರನ್ನು ಬೆಳಕಿನಿಂದ ಸೃಷ್ಟಿಸಿದನು.ಅವರ ಪೈಕಿ ಒಬ್ಬರು ಜಿಬ್ರೀಲ್(ಅ). ಅವರು ಪ್ರವಾದಿಗಳಿಗೆ ದಿವ್ಯವಾಣಿಯನ್ನು ತಲುಪಿಸುವ ಕೆಲಸ ಮಾಡುತ್ತಾರೆ.

❖ <u>ಗ್ರಂಥಗಳಲ್ಲಿ ವಿಶ್ವಾಸವಿಡುವುದು:</u>

ಇವು ಅಲ್ಲಾಹು ತನ್ನ ಸಂದೇಶವಾಹಕರಿಗೆ ಅವತೀರ್ಣಗೊಳಿಸಿದ ಗ್ರಂಥಗಳು.ಉದಾ: ಮುಹಮ್ಮದ್ ﷺ ರಿಗೆ ಅವತೀರ್ಣವಾದ ಪವಿತ್ರ ಕುರ್ಆನ್.ಈಸಾ(ಅ) ರಿಗೆ ಅವತೀರ್ಣವಾದ ಇಂಜೀಲ್.ಮೂಸಾ(ಅ) ರಿಗೆ ಅವತೀರ್ಣವಾದ ತೌರಾತ್ .ದಾವೂದ್(ಅ) ರಿಗೆ ಅವತೀರ್ಣವಾದ ಝುಬೂರ್.ಇಬ್ರಾಹಿಂ(ಅ) ಮತ್ತು ಮೂಸಾ(ಅ) ರಿಗೆ ಅವತೀರ್ಣವಾದ ಕಿರು ಪುಸ್ತಕಗಳು.

❖ <u>ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು:</u>

ಸಂದೇಶವಾಹಕರು ಎಂದರೆ ಅಲ್ಲಾಹು ತನ್ನ ದಾಸರ ಕಡೆಗೆ, ಅವರಿಗೆ ಕಲಿಸಲು, ಒಳಿತು ಮತ್ತು ಸ್ವರ್ಗದ ಶುಭವಾರ್ತೆ ತಿಳಿಸಲು, ಕೆಡುಕು ಮತ್ತು ನರಕದ ಬಗ್ಗೆ ಎಚ್ಚರಿಸಲು ಕಳುಹಿಸಿದವರಾಗಿದ್ದಾರೆ.

❖ ಅವರಲ್ಲಿ ಶ್ರೇಷ್ಠರು ಉಲುಲ್-ಅಝ್ಮ್ ಎಂದು ಕರೆಯಲ್ಪಡುವವರು. ಅವರು:

- ನೂಹ್(ಅ).
- ಇಬ್ರಾಹೀಂ(ಅ).
- ಮೂಸಾ(ಅ).
- ಈಸಾ(ಅ).
- ಮುಹಮ್ಮದ್ ﷺ.

❖ <u>ಅಂತ್ಯದಿನದಲ್ಲಿ ವಿಶ್ವಾಸವಿಡುವುದು:</u>

ಅಂತ್ಯದಿನದಲ್ಲಿ ವಿಶ್ವಾಸವಿಡುವುದು ಎಂದರೆ ಮರಣಾನಂತರದ ಸಮಾಧಿಯಲ್ಲಿ , ಪುನರುತ್ಥಾನದ ದಿನದಲ್ಲಿ, ಪುನರ್ಜೀವ ಮತ್ತು ವಿಚಾರಣೆಯ ದಿನದಲ್ಲಿ , ಸ್ವರ್ಗದವರು ಸ್ವರ್ಗದಲ್ಲಿ ಮತ್ತು ನರಕದವರು ನರಕದಲ್ಲಿ ನೆಲೆಸುವುದರಲ್ಲಿ ವಿಶ್ವಾಸವಿಡುವುದು.

❖ <u>ವಿಧಿಯಲ್ಲಿ - ಅದರ ಒಳಿತು ಮತ್ತು ಕೆಡುಕುಗಳಲ್ಲಿ - ವಿಶ್ವಾಸವಿಡುವುದು.</u>

ವಿಧಿ ಎಂದರೆ ವಿಶ್ವದಲ್ಲಿ ನಡೆಯುವ ಎಲ್ಲವನ್ನೂ ಅಲ್ಲಾಹು ಅರಿಯುತ್ತಾನೆ , ಅವೆಲ್ಲವನ್ನೂ ಅವನು ಲೌಹೆ ಮಹ್ಫೂಝ್ (ಸಂರಕ್ಷಿತ ಫಲಕ) ನಲ್ಲಿ ಬರೆದಿದ್ದಾನೆ ಮತ್ತು ಅವೆಲ್ಲವೂ ಅಸ್ತಿತ್ವಕ್ಕೆ ಬರಬೇಕು ಮತ್ತು ಸೃಷ್ಟಿಸಲ್ಪಡಬೇಕೆಂದು ಅವನು ಬಯಸಿದ್ದಾನೆ ಎಂದು ವಿಶ್ವಾಸವಿಡುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ : **"ಖಂಡಿತವಾಗಿಯೂ ಪ್ರತಿಯೊಂದು ವಸ್ತುವನ್ನೂ ನಾವು ಒಂದು ನಿರ್ಣಯದ ಪ್ರಕಾರ ಸೃಷ್ಟಿಸಿರುವೆವು."** [ಸೂರ ಅಲ್-ಕಮರ್:49].

**ಇದು ನಾಲ್ಕು ಹಂತಗಳನ್ನು ಹೊಂದಿದೆ:**

**<u>ಮೊದಲನೆಯದು:</u>** ಅಲ್ಲಾಹನ ಜ್ಞಾನ. ಎಲ್ಲಾ ವಸ್ತುಗಳ ಬಗ್ಗೆ ಅಲ್ಲಾಹನಿಗಿರುವ ಪೂರ್ವಜ್ಞಾನವು ಇದರಲ್ಲಿ ಒಳಪಡುತ್ತದೆ. ಅವು ಸಂಭವಿಸುವ ಮೊದಲು ಮತ್ತು ಅವು ಸಂಭವಿಸಿದ ನಂತರ ಅಲ್ಲಾಹು ಅವುಗಳ ಬಗ್ಗೆ ಸ್ಪಷ್ಟಜ್ಞಾನವನ್ನು ಹೊಂದಿದ್ದಾನೆ.

ಪುರಾವೆ ಅಲ್ಲಾಹನ ವಚನ:

﴿إِنَّ اللَّهَ عِنْدَهُ عِلْمُ السَّاعَةِ وَيُنَزِّلُ الْغَيْثَ وَيَعْلَمُ مَا فِي الْأَرْحَامِ وَمَا تَدْرِي نَفْسٌ مَاذَا تَكْسِبُ غَدًا وَمَا تَدْرِي نَفْسٌ بِأَيِّ أَرْضٍ تَمُوتُ إِنَّ اللَّهَ عَلِيمٌ خَبِيرٌ﴾

“ಅಂತ್ಯಘಳಿಗೆಯ ಜ್ಞಾನವಿರುವುದು ಖಂಡಿತವಾಗಿಯೂ ಅಲ್ಲಾಹುವಿನ ಬಳಿಯಲ್ಲಾಗಿದೆ. ಅವನು ಮಳೆಯನ್ನು ಸುರಿಸುವನು . ಅವನು ಗರ್ಭಾಶಯಗಳಲ್ಲಿರುವುದನ್ನು ಅರಿಯುವನು. ತಾನು ನಾಳೆ ಏನು ಮಾಡುವೆನೆಂದು ಯಾರೂ ಅರಿಯಲಾರರು. ತಾನು ಯಾವ ಪ್ರದೇಶದಲ್ಲಿ ಮೃತಪಡುವೆನೆಂದು ಯಾರೂ ಅರಿಯಲಾರರು . ಖಂಡಿತವಾಗಿಯೂ ಅಲ್ಲಾಹು ಸರ್ವಜ್ಞನೂ , ಸೂಕ್ಷ್ಮ ಜ್ಞಾನಿಯೂ ಆಗಿರುವನು.” [ಸೂರ ಲುಕ್ಮಾನ್:34].

**ಎರಡನೆಯದು:** ಅಲ್ಲಾಹನು ಅವೆಲ್ಲವನ್ನೂ ಲೌಹೆ ಮಹ್ಫೂಝ್ (ಸಂರಕ್ಷಿತ ಫಲಕ) ದಲ್ಲಿ ದಾಖಲಿಸಿದ್ದಾನೆ. ಆದ್ದರಿಂದ ಸಂಭವಿಸಿದ ಮತ್ತು ಸಂಭವಿಸುವ ಎಲ್ಲವೂ ಅವನ ಬಳಿ ಒಂದು ಗ್ರಂಥದಲ್ಲಿ ದಾಖಲಾಗಿದೆ. ಪುರಾವೆ ಅಲ್ಲಾಹನ ವಚನ:

﴿وَعِنْدَهُ مَفَاتِحُ الْغَيْبِ لَا يَعْلَمُهَا إِلَّا هُوَ وَيَعْلَمُ مَا فِي الْبَرِّ وَالْبَحْرِ وَمَا تَسْقُطُ مِنْ وَرَقَةٍ إِلَّا يَعْلَمُهَا وَلَا حَبَّةٍ فِي ظُلُمَاتِ الْأَرْضِ وَلَا رَطْبٍ وَلَا يَابِسٍ إِلَّا فِي كِتَابٍ مُبِينٍ﴾

“ಅಗೋಚರ ವಿಷಯಗಳ ಖಜಾನೆಗಳಿರುವುದು ಅವನ ಬಳಿಯಲ್ಲಾಗಿವೆ . ಅವನ ಹೊರತು ಅವುಗಳನ್ನು ಯಾರೂ ಅರಿಯಲಾರರು . ನೆಲದಲ್ಲಿ ಮತ್ತು ಸಮುದ್ರದಲ್ಲಿರುವುದನ್ನು ಅವನು ಅರಿಯುವನು. ಅವನು ಅರಿಯುವ ವಿನಾ ಒಂದು ಎಲೆಯೂ ಉದುರದು . ಭೂಮಿಯ ಅಂಧಕಾರಗಳಲ್ಲಿರುವ ಒಂದು ಧಾನ್ಯವಾಗಿರಲಿ, ಹಸಿಯಾಗಿರುವ ಅಥವಾ ಒಣಗಿರುವ ಯಾವುದೇ ವಸ್ತುವಾಗಿರಲಿ ಸ್ಪಷ್ಟವಾದ ಒಂದು ಗ್ರಂಥದಲ್ಲಿ ದಾಖಲಿಸಲ್ಪಡದೆ ಇರಲಾರದು .” [ಸೂರ ಅಲ್-ಅನ್ಆಮ್:59].

**ಮೂರನೆಯದು:** ಎಲ್ಲವೂ ಅಲ್ಲಾಹನ ಇಚ್ಛೆಯಂತೆ ಸಂಭವಿಸುತ್ತದೆ. ಅವನು ಇಚ್ಛಿಸದೆ ಅವನಿಂದ ಅಥವಾ ಅವನ ಸೃಷ್ಟಿಯಿಂದ ಏನೂ ಸಂಭವಿಸುವುದಿಲ್ಲ. ಪುರಾವೆ ಅಲ್ಲಾಹನ ವಚನ:

﴿لِمَنْ شَاءَ مِنْكُمْ أَنْ يَسْتَقِيمَ - وَمَا تَشَاءُونَ إِلَّا أَنْ يَشَاءَ اللَّهُ رَبُّ الْعَالَمِينَ﴾

**"ಅಂದರೆ ನಿಮ್ಮ ಪೈಕಿ ನೇರವಾಗಿ ನೆಲೆಗೊಳ್ಳಲು ಇಚ್ಛಿಸುವವರಿಗಾಗಿ. ಸರ್ವ ಲೋಕಗಳ ಪ್ರಭುವಾದ ಅಲ್ಲಾಹು ಇಚ್ಛಿಸಿದ ಹೊರತು ನೀವು ಇಚ್ಛಿಸಲಾರಿರಿ."** [ಸೂರ ಅತ್ತಕ್ವೀರ್: 28-29]

**<u>ನಾಲ್ಕನೆಯದು:</u>** ಈ ಜಗತ್ತಿನಲ್ಲಿರುವ ಎಲ್ಲಾ ಸೃಷ್ಟಿಗಳು ಅಲ್ಲಾಹನ ಸೃಷ್ಟಿಗಳಾಗಿವೆ . ಅಲ್ಲಾಹು ಅವುಗಳ ದೇಹಗಳನ್ನು , ಗುಣಲಕ್ಷಣಗಳನ್ನು, ಚಲನೆಗಳನ್ನು ಮತ್ತು ಅವುಗಳಲ್ಲಿನ ಪ್ರತಿಯೊಂದನ್ನೂ ಅವನೇ ಸೃಷ್ಟಿಸಿದ್ದಾನೆ. ಪುರಾವೆ ಅಲ್ಲಾಹನ ವಚನ:

﴿وَاللَّهُ خَلَقَكُمْ وَمَا تَعْمَلُونَ ﴾

**"ನಿಮ್ಮನ್ನು ಮತ್ತು ನೀವು ನಿರ್ಮಿಸುತ್ತಿರುವುದನ್ನು ಸೃಷ್ಟಿಸಿದವನು ಅಲ್ಲಾಹುವಾಗಿರುವನು ."** [ಸೂರ ಅಸ್ಸಾಫ್ಫಾತ್:96].

**ಪ್ರಶ್ನೆ 16. ಕುರ್‌ಆನ್ ಎಂದರೇನು?**

**ಉತ್ತರ:** ಅದು ಸರ್ವಶಕ್ತನಾದ ಅಲ್ಲಾಹನ ವಚನ, ಅದು ಸೃಷ್ಟಿಯಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَإِنْ أَحَدٌ مِنَ الْمُشْرِكِينَ اسْتَجَارَكَ فَأَجِرْهُ حَتَّى يَسْمَعَ كَلَامَ اللَّهِ... ﴾

**"ಬಹುದೇವವಿಶ್ವಾಸಿಗಳ ಪೈಕಿ ಯಾರಾದರೂ ಆಶ್ರಯ ಕೋರಿ ತಮ್ಮ ಬಳಿಗೆ ಬಂದರೆ ಅವನು ಅಲ್ಲಾಹುವಿನ ವಚನವನ್ನು ಆಲಿಸುವುದಕ್ಕಾಗಿ ಅವನಿಗೆ ಆಶ್ರಯವನ್ನು ನೀಡಿರಿ."** [ಸೂರ ಅತ್ತೌಬ:6].

**ಪ್ರಶ್ನೆ 17. ಸುನ್ನತ್ ಎಂದರೇನು?**

**ಉತ್ತರ:** ಪ್ರವಾದಿ ಮುಹಮ್ಮದ್ ﷺ ರ ಮಾತುಗಳು , ಕ್ರಿಯೆಗಳು ಮತ್ತು ಮೌನಸಮ್ಮತಿಗಳು, ಜನ್ಮತಃ ಅವರಲ್ಲಿದ್ದ ಸ್ವಭಾವಗಳು ಮತ್ತು ಅವರ ನಡವಳಿಕೆ ವರ್ತನೆಗಳೆಲ್ಲವೂ ಸುನ್ನತ್ ಆಗಿವೆ.

**ಪ್ರಶ್ನೆ 18. ಬಿದ್‌ಅತ್ (ನೂತನವಾದ) ಎಂದರೇನು? ನಾವು ಅದನ್ನು ಸ್ವೀಕರಿಸಬಹುದೇ?**

**ಉತ್ತರ:** ಪ್ರವಾದಿ ﷺ ಮತ್ತು ಅವರ ಸಹಚರರ ಕಾಲದಲ್ಲಿ ಧರ್ಮದಲ್ಲಿಲ್ಲದ, ಮತ್ತು ನಂತರ ಜನರು ಧರ್ಮದಲ್ಲಿ ಹೊಸದಾಗಿ ಆವಿಷ್ಕರಿಸಿದ ವಿಷಯಗಳೆಲ್ಲವೂ ಬಿದ್‌ಅತ್ ಆಗಿವೆ.ನಾವು ಅದನ್ನು ಸ್ವೀಕರಿಸುವುದಿಲ್ಲ, ಬದಲಾಗಿ ಅವುಗಳನ್ನು ತಿರಸ್ಕರಿಸುತ್ತೇವೆ .ಏಕೆಂದರೆ ಪ್ರವಾದಿ ﷺ ರವರು ಹೇಳಿದರು: "**ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಗಳಾಗಿವೆ.**" [ಅಬೂದಾವೂದ್].

ಉದಾಹರಣೆಗೆ: ಆರಾಧನಾ ಕರ್ಮಗಳಲ್ಲಿ ಹೊಸದನ್ನು ಸೇರಿಸುವುದು . ಅಂದರೆ ವುದೂ ಮಾಡುವಾಗ ನಾಲ್ಕು ಬಾರಿ ತೊಳೆಯುವುದು, ಪ್ರವಾದಿ ﷺ ರವರ ಜನ್ಮದಿನ ಆಚರಿಸುವುದು . ಇದನ್ನು ಪ್ರವಾದಿ ﷺ ರವರಾಗಲಿ ಅವರ ಸಹಚರರಾಗಲಿ ಆಚರಿಸಿಲ್ಲ.

**ಪ್ರಶ್ನೆ 19. ವಲಾ ( ನಿಷ್ಠೆ) ಮತ್ತು ಬರಾ (ನಿರಾಕರಣೆ) ದ ವಿಶ್ವಾಸವನ್ನು ವಿವರಿಸಿ?**

ಉತ್ತರ:

- ❖ <u>ನಿಷ್ಠೆ</u> ಎಂದರೆ ಸತ್ಯವಿಶ್ವಾಸಿಗಳನ್ನು ಪ್ರೀತಿಸುವುದು ಮತ್ತು ಬೆಂಬಲಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَالْمُؤْمِنُونَ وَالْمُؤْمِنَاتُ بَعْضُهُمْ أَوْلِيَاءُ بَعْضٍ... ﴾

**"ಸತ್ಯವಿಶ್ವಾಸಿಗಳು ಮತ್ತು ಸತ್ಯವಿಶ್ವಾಸಿನಿಯರು ಪರಸ್ಪರ ಮಿತ್ರರಾಗಿರುವರು."** [ಸೂರ ಅತ್ತೌಬ:71].

- ❖ <u>ನಿರಾಕರಣೆ</u> ಎಂದರೆ ಸತ್ಯನಿಷೇಧಿಗಳನ್ನು ದ್ವೇಷಿಸುವುದು ಮತ್ತು ವಿರೋಧಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿قَدْ كَانَتْ لَكُمْ أُسْوَةٌ حَسَنَةٌ فِي إِبْرَاهِيمَ وَالَّذِينَ مَعَهُ إِذْ قَالُوا لِقَوْمِهِمْ إِنَّا بُرَآءُ مِنْكُمْ وَمِمَّا تَعْبُدُونَ مِنْ دُونِ اللَّهِ كَفَرْنَا بِكُمْ وَبَدَا بَيْنَنَا وَبَيْنَكُمُ الْعَدَاوَةُ وَالْبَغْضَاءُ أَبَدًا حَتَّى تُؤْمِنُوا بِاللَّهِ وَحْدَهُ﴾

**"ನಿಮಗೆ ಇಬ್ರಾಹೀಮ್ ರಲ್ಲಿ ಮತ್ತು ಅವರ ಜೊತೆಗಿದ್ದವರಲ್ಲಿ ಒಂದು ಉತ್ತಮ ಮಾದರಿಯಿದೆ. ಅವರು ತಮ್ಮ ಜನರೊಂದಿಗೆ ಹೇಳಿದ ಸಂದರ್ಭ: 'ಖಂಡಿತವಾಗಿಯೂ ನಾವು ನಿಮ್ಮಿಂದ ಮತ್ತು ಅಲ್ಲಾಹುವಿನ**

**ಹೊರತು ನೀವು ಆರಾಧಿಸುತ್ತಿರುವವುಗಳಿಂದ ಸಂಪೂರ್ಣ ವಿಮುಕ್ತರಾಗಿರುವೆವು . ನಾವು ನಿಮ್ಮಲ್ಲಿ ಅವಿಶ್ವಾಸವಿಟ್ಟಿರುವೆವು. ನೀವು ಅಲ್ಲಾಹುವಿನಲ್ಲಿ ಮಾತ್ರ ವಿಶ್ವಾಸವಿಡುವ ತನಕ ಎಂದೆಂದಿಗೂ ನಮ್ಮ ಮತ್ತು ನಿಮ್ಮ ನಡುವೆ ಶತ್ರುತ್ವ ಹಾಗೂ ವಿದ್ವೇಷವು ಬಹಿರಂಗವಾಗಿಬಿಟ್ಟಿದೆ ."** [ಸೂರ ಅಲ್-ಮುಮ್ತಹನ:4].

**ಪ್ರಶ್ನೆ 20. ಅಲ್ಲಾಹು ಇಸ್ಲಾಮ್ ಅಲ್ಲದ ಧರ್ಮವನ್ನು ಸ್ವೀಕರಿಸುತ್ತಾನೆಯೇ?**

**ಉತ್ತರ:** ಅಲ್ಲಾಹು ಇಸ್ಲಾಮ್ ಅಲ್ಲದ ಧರ್ಮವನ್ನು ಸ್ವೀಕರಿಸುವುದಿಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَمَن يَبۡتَغِ غَيۡرَ ٱلۡإِسۡلَٰمِ دِينٗا فَلَن يُقۡبَلَ مِنۡهُ وَهُوَ فِي ٱلۡأٓخِرَةِ مِنَ ٱلۡخَٰسِرِينَ﴾

**"ಯಾರಾದರೂ ಇಸ್ಲಾಮ್ ಧರ್ಮಕ್ಕೆ (ಅಲ್ಲಾಹುವಿಗಿರುವ ಶರಣಾಗತಿಗೆ) ಹೊರತಾಗಿರುವುದನ್ನು ಧರ್ಮವಾಗಿ ಅರಸುವುದಾದರೆ ಅದನ್ನು ಅವನಿಂದ ಎಂದಿಗೂ ಸ್ವೀಕರಿಸಲಾಗದು . ಪರಲೋಕದಲ್ಲಿ ಅವನು ನಷ್ಟ ಹೊಂದಿದದವರ ಪೈಕಿ ಸೇರಿದವನಾಗುವನು."** [ಸೂರ ಆಲು ಇಮ್ರಾನ್:85].

**ಪ್ರಶ್ನೆ 21. ಸತ್ಯನಿಷೇಧವು ಮಾತು, ಕ್ರಿಯೆ ಮತ್ತು ನಂಬಿಕೆಯಲ್ಲಿ ಸಂಭವಿಸುತ್ತದೆ . ಇದಕ್ಕೆ ಉದಾಹರಣೆ ನೀಡಿ.**

**ಉತ್ತರ:**

- <u>ಮಾತಿನಿಂದ ಸಂಭವಿಸುತ್ತದೆ ಎಂಬುದಕ್ಕೆ ಉದಾಹರಣೆ ಹೀಗಿದೆ:</u> ಅಲ್ಲಾಹನನ್ನು ಅಥವಾ ಅವನ ಸಂದೇಶವಾಹಕﷺ ರನ್ನು ನಿಂದಿಸುವುದು.
- <u>ಕ್ರಿಯೆಯಿಂದ ಸಂಭವಿಸುತ್ತದೆ ಎಂಬುದಕ್ಕೆ ಉದಾಹರಣೆ ಹೀಗಿದೆ:</u> ಕುರ್‌ಆನ್ ಗ್ರಂಥವನ್ನು ಅವಮಾನಿಸುವುದು ಅಥವಾ ಸರ್ವಶಕ್ತನಾದ ಅಲ್ಲಾಹನನ್ನು ಬಿಟ್ಟು ಇತರರಿಗೆ ಸುಜೂದ್ (ಸಾಷ್ಟಾಂಗ ನಮಸ್ಕಾರ) ಮಾಡುವುದು.

- ❖ ನಂಬಿಕೆಯಿಂದ ಸಂಭವಿಸುತ್ತದೆ ಎಂಬುದಕ್ಕೆ ಉದಾಹರಣೆ ಹೀಗಿದೆ : ಸರ್ವಶಕ್ತನಾದ ಅಲ್ಲಾಹನಲ್ಲದೆ ಇತರರೂ ಆರಾಧನೆಗೆ ಅರ್ಹರು ಎಂದು ನಂಬುವುದು. ಅಥವಾ ಸರ್ವಶಕ್ತ ಅಲ್ಲಾಹನಲ್ಲದೆ ಬೇರೆ ಸೃಷ್ಟಿಕರ್ತರಿದ್ದಾರೆ ಎಂದು ನಂಬುವುದು.

**ಪ್ರಶ್ನೆ 22. ಕಪಟವಿಶ್ವಾಸ ಎಂದರೇನು? ಅದರ ವಿಧಗಳು ಯಾವುವು?**

**ಉತ್ತರ:**

1. **ದೊಡ್ಡ ಕಪಟವಿಶ್ವಾಸ:**

ಇದು ಸತ್ಯನಿಷೇಧವನ್ನು ಮರೆಮಾಚಿ ಸತ್ಯವಿಶ್ವಾಸವನ್ನು ತೋರ್ಪಡಿಸುವುದು.

ದೊಡ್ಡ ಕಪಟವಿಶ್ವಾಸವಿರುವವನು ಇಸ್ಲಾಮ್ ಧರ್ಮದಿಂದ ಹೊರಹೋಗುತ್ತಾನೆ . ಇದು ದೊಡ್ಡ ಸತ್ಯನಿಷೇಧವಾಗಿದೆ. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿إِنَّ ٱلْمُنَـٰفِقِينَ فِى ٱلدَّرْكِ ٱلْأَسْفَلِ مِنَ ٱلنَّارِ وَلَن تَجِدَ لَهُمْ نَصِيرًا﴾

**"ಖಂಡಿತವಾಗಿಯೂ ಕಪಟ ವಿಶ್ವಾಸಿಗಳು ನರಕದ ಅತ್ಯಂತ ತಳಮಟ್ಟದಲ್ಲಿರುವರು . ಅವರಿಗೆ ಯಾವುದೇ ಸಹಾಯಕನನ್ನೂ ತಾವು ಕಾಣಲಾರಿರಿ."** [ಸೂರ ಅನ್ನಿಸಾ:145].

2. **ಸಣ್ಣ ಕಪಟವಿಶ್ವಾಸ:**

ಉದಾಹರಣೆಗೆ: ಸುಳ್ಳು ಹೇಳುವುದು, ಮಾತು ತಪ್ಪಿಸುವುದು ಮತ್ತು ನಂಬಿಕೆದ್ರೋಹ ಮಾಡುವುದು.ಸಣ್ಣ ಕಪಟವಿಶ್ವಾಸವಿರುವವನು ಇಸ್ಲಾಮ್ ಧರ್ಮದಿಂದ ಹೊರಹೋಗುವುದಿಲ್ಲ . ಅದೊಂದು ಪಾಪವಾಗಿದ್ದು, ಅದನ್ನು ಮಾಡುವವರು ಶಿಕ್ಷೆಗೆ ಅರ್ಹರಾಗುತ್ತಾರೆ.

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು:**"ಕಪಟವಿಶ್ವಾಸಿಗೆ ಮೂರು ಲಕ್ಷಣಗಳಿವೆ: ಬಾಯಿ ತೆರೆದರೆ ಸುಳ್ಳು ಹೇಳುವುದು , ಮಾತು ಕೊಟ್ಟರೆ ವಂಚಿಸುವುದು ಮತ್ತು ನಂಬಿಕೆಯಿಟ್ಟರೆ ನಂಬಿಕೆದ್ರೋಹ ಮಾಡುವುದು."**

[ಬುಖಾರಿ ಮತ್ತು ಮುಸ್ಲಿಮ್]

**ಪ್ರಶ್ನೆ 23. ಪ್ರವಾದಿಗಳಲ್ಲಿ ಮತ್ತು ಸಂದೇಶವಾಹಕರಲ್ಲಿ ಕೊನೆಯವರು ಯಾರು?**

**ಉತ್ತರ:** ಪ್ರವಾದಿ ಮುಹಮ್ಮದ್ ﷺ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿مَّا كَانَ مُحَمَّدٌ أَبَا أَحَدٍ مِّن رِّجَالِكُمْ وَلَٰكِن رَّسُولَ ٱللَّهِ وَخَاتَمَ النَّبِيِّينَ...﴾

**"ಮುಹಮ್ಮದ್ ನಿಮ್ಮ ಪುರುಷರ ಪೈಕಿ ಯಾರ ತಂದೆಯೂ ಅಲ್ಲ . ಆದರೆ ಅವರು ಅಲ್ಲಾಹುವಿನ ಸಂದೇಶವಾಹಕರು ಮತ್ತು ಪ್ರವಾದಿಗಳ ಪೈಕಿ ಕಟ್ಟಕಡೆಯವರಾಗಿರುವರು."**

[ಸೂರ ಅಲ್-ಅಹ್‌ಝಾಬ್:40].

- ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು:**"ನಾನು ಪ್ರವಾದಿಗಳ ಮುದ್ರೆಯಾಗಿದ್ದೇನೆ. ನನ್ನ ನಂತರ ಯಾವ ಪ್ರವಾದಿಯೂ ಇಲ್ಲ."**

[ಅಬು ದಾವೂದ್, ಅತ್ತಿರ್ಮಿದಿ ಹಾಗೂ ಇತರರೂ ವರದಿ ಮಾಡಿದ್ದಾರೆ].

**ಪ್ರಶ್ನೆ 24. ಮುಅಜಿಝ (ಪವಾಡ) ಎಂದರೇನು?**

**ಉತ್ತರ:** ಮುಅಜಿಝ (ಪವಾಡ) ಎಂದರೆ ಅಲ್ಲಾಹು ತನ್ನ ಪ್ರವಾದಿಗಳಿಗೆ ಅವರ ಪ್ರಾಮಾಣಿಕತೆಯನ್ನು ಸಾಬೀತುಪಡಿಸಲು ನೀಡುವ ಅಸಾಮಾನ್ಯ ಸಂಗತಿಗಳು. ಉದಾಹರಣೆಗೆ:

- ಪ್ರವಾದಿ ﷺ ರವರು ಚಂದ್ರನನ್ನು ಎರಡು ಹೋಳು ಮಾಡಿದ ಘಟನೆ.
- ಮೂಸಾ(ಅ)ರಿಗಾಗಿ ಸಮುದ್ರ ಎರಡು ಹೋಳಾಗುವುದು , ಫಿರ್‌ಔನ್ ಮತ್ತು ಅವನ ಸೈನಿಕರನ್ನು ಮುಳುಗಿಸಿ ನಾಶಮಾಡಿದ ಘಟನೆ.

**ಪ್ರಶ್ನೆ 25. ಸಹಾಬಿಗಳು (ಸಹಚರರು) ಎಂದರೆ ಯಾರು? ನಾನು ಅವರನ್ನು ಪ್ರೀತಿಸಬೇಕೇ?**

**ಉತ್ತರ:**

- **ಸಹಾಬಿಗಳು** ಎಂದರೆ ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಪ್ರವಾದಿ (ಸ) ರನ್ನು ಭೇಟಿಯಾಗಿ ಇಸ್ಲಾಮ್ ಧರ್ಮದಲ್ಲಿ ಮರಣಹೊಂದಿದವರು.

  ನಾವು ಅವರನ್ನು ಪ್ರೀತಿಸುತ್ತೇವೆ ಮತ್ತು ಅವರನ್ನು ಅನುಸರಿಸುತ್ತೇವೆ . ಅವರು ಪ್ರವಾದಿಗಳ ನಂತರ ಉತ್ತಮ ಮತ್ತು ಶ್ರೇಷ್ಠ ಜನರಾಗಿದ್ದಾರೆ.

**ಅವರಲ್ಲಿ ಅತಿಶ್ರೇಷ್ಠರು ನಾಲ್ವರು ಖಲೀಫರು:**

- ಅಬೂಬಕರ್ رَضِيَ ٱللَّهُ عَنْهُ.
- ಉಮರ್ رَضِيَ ٱللَّهُ عَنْهُ.
- ಉಸ್ಮಾನ್ رَضِيَ ٱللَّهُ عَنْهُ.
- ಅಲಿ رَضِيَ ٱللَّهُ عَنْهُ.

**ಪ್ರಶ್ನೆ 26. ಉಮ್ಮಹಾತುಲ್ ಮೂಮಿನೀನ್ (ಸತ್ಯವಿಶ್ವಾಸಿಗಳ ಮಾತೆಯರು) ಎಂದರೆ ಯಾರು?**

**ಉತ್ತರ:** ಅವರು ಪ್ರವಾದಿ ﷺ ರವರ ಪತ್ನಿಯರು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿ٱلنَّبِيُّ أَوۡلَىٰ بِٱلۡمُؤۡمِنِينَ مِنۡ أَنفُسِهِمۡۖ وَأَزۡوَٰجُهُۥٓ أُمَّهَٰتُهُمۡ﴾

**"ಸತ್ಯವಿಶ್ವಾಸಿಗಳಿಗೆ ಅವರ ಶರೀರಗಳಿಗಿಂತಲೂ ಹೆಚ್ಚು ಆಪ್ತರು ಸಂದೇಶವಾಹಕರಾಗಿರುವರು. ಅವರ ಮಡದಿಯರು ಅವರಿಗೆ ಮಾತೆಯರಾಗಿರುವರು."** [ಸೂರ ಅಲ್-ಅಹ್ಝಾಬ್:6].

**ಪ್ರಶ್ನೆ 27. ಪ್ರವಾದಿ ﷺ ಕುಟುಂಬಕ್ಕೆ ನಮ್ಮ ಮೇಲಿರುವ ಹಕ್ಕುಗಳು ಯಾವುವು?**

**ಉತ್ತರ:** ಅವರನ್ನು ಪ್ರೀತಿಸುಸುವುದು, ಅವರನ್ನು ಅನುಸರಿಸುಸುವುದು ಮತ್ತು ಅವರನ್ನು ದ್ವೇಷಿಸುವವರನ್ನು ದ್ವೇಷಿಸುವುದು. ಅವರ ವಿಷಯದಲ್ಲಿ ಹದ್ದು ಮೀರದಿರುವುದು. ಪ್ರವಾದಿ ಕುಟುಂಬ ಎಂದರೆ ಪ್ರವಾದಿಯ ಮಡದಿಯರು , ಸಂತಾನ ಮತ್ತು ಬನೂ ಹಾಶಿಮ್ ಮತ್ತು ಬನೂ ಮುತ್ತಲಿಬ್ ಬುಡಕಟ್ಟಿಗೆ ಸೇರಿದ ಸತ್ಯವಿಶ್ವಾಸಿಗಳು.

**ಪ್ರಶ್ನೆ 28. ಮುಸ್ಲಿಮ್ ಆಡಳಿತಗಾರರೊಂದಿಗೆ ನಮಗಿರುವ ಕರ್ತವ್ಯಗಳೇನು?**

**ಉತ್ತರ:** ಅವರನ್ನು ಗೌರವಿಸುವುದು, ಅವರಿಗೆ ಅವಿಧೇಯತೆ ತೋರದೆ ಅವರ ಆದೇಶಗಳನ್ನು ಪಾಲಿಸುವುದು, ಅವರ ವಿರುದ್ಧ ದಂಗೆ ಏಳದಿರುವುದು ಮತ್ತು ರಹಸ್ಯವಾಗಿ ಅವರಿಗೋಸ್ಕರ ಪ್ರಾರ್ಥಿಸುವುದು ಹಾಗೂ ಅವರ ಬಗ್ಗೆ ಹಿತಾಕಾಂಕ್ಷೆಯನ್ನು ಹೊಂದಿರುವುದು.

**ಪ್ರಶ್ನೆ 29. ಸತ್ಯವಿಶ್ವಾಸಿಗಳ ವಾಸಸ್ಥಾನ ಯಾವುದು?**

ಉತ್ತರ: ಸ್ವರ್ಗವು ಸತ್ಯವಿಶ್ವಾಸಿಗಳ ವಾಸಸ್ಥಾನವಾಗಿದೆ. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿إِنَّ اللَّهَ يُدْخِلُ الَّذِينَ آمَنُوا وَعَمِلُوا الصَّالِحَاتِ جَنَّاتٍ تَجْرِي مِنْ تَحْتِهَا الْأَنْهَارُ... ﴾

**"ಖಂಡಿತವಾಗಿಯೂ ಅಲ್ಲಾಹು ಸತ್ಯವಿಶ್ವಾಸವಿಟ್ಟವರನ್ನು ಮತ್ತು ಸತ್ಕರ್ಮವೆಸಗಿದವರನ್ನು ತಳಭಾಗದಿಂದ ನದಿಗಳು ಹರಿಯುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಮಾಡಿಸುವನು."** [ಸೂರ ಮುಹಮ್ಮದ್:12].

**ಪ್ರಶ್ನೆ 30. ಸತ್ಯನಿಷೇಧಿಗಳ ವಾಸಸ್ಥಾನ ಯಾವುದು?**

ಉತ್ತರ: ನರಕವು ಸತ್ಯನಿಷೇಧಿಗಳ ವಾಸಸ್ಥಾನವಾಗಿದೆ. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿فَاتَّقُوا النَّارَ الَّتِي وَقُودُهَا النَّاسُ وَالْحِجَارَةُ أُعِدَّتْ لِلْكَافِرِينَ ﴾

**"ನಿಮಗೆ ಅದನ್ನು ಮಾಡಲು ಸಾಧ್ಯವಾಗದಿದ್ದಲ್ಲಿ -ಅದನ್ನು ಮಾಡಲು ನಿಮಗೆಂದೂ ಸಾಧ್ಯವಾಗದು- ಮನುಷ್ಯರನ್ನು ಮತ್ತು ಕಲ್ಲುಗಳನ್ನು ಇಂಧನವಾಗಿ ಉರಿಸಲಾಗುವ ನರಕಾಗ್ನಿಯನ್ನು ಭಯಪಡಿರಿ. ಅದನ್ನು ಸತ್ಯನಿಷೇಧಿಗಳಿಗಾಗಿ ಸಿದ್ಧಗೊಳಿಸಲಾಗಿದೆ."** [ಸೂರ ಅಲ್-ಬಕರ:24].

**ಪ್ರಶ್ನೆ 31. ಭಯ ಎಂದರೇನು? ನಿರೀಕ್ಷೆ ಎಂದರೇನು? ಪುರಾವೆ ಸಹಿತ ತಿಳಿಸಿ.**

**ಉತ್ತರ:** ಭಯ ಎಂದರೆ ಅಲ್ಲಾಹನನ್ನು ಮತ್ತು ಆತನ ಶಿಕ್ಷೆಯನ್ನು ಭಯಪಡುವುದು.

ನಿರೀಕ್ಷೆ ಎಂದರೆ ಅಲ್ಲಾಹನ ಪ್ರತಿಫಲ, ಕ್ಷಮೆ ಮತ್ತು ಕರುಣೆಯನ್ನು ನಿರೀಕ್ಷಿಸುವುದು.

ಪುರಾವೆ ಅಲ್ಲಾಹನ ವಚನ:

﴿أُولَئِكَ الَّذِينَ يَدْعُونَ يَبْتَغُونَ إِلَى رَبِّهِمُ الْوَسِيلَةَ أَيُّهُمْ أَقْرَبُ وَيَرْجُونَ رَحْمَتَهُ وَيَخَافُونَ عَذَابَهُ إِنَّ عَذَابَ رَبِّكَ كَانَ مَحْذُورًا﴾

**“ಅವರು ಯಾರನ್ನು ಕರೆದು ಪ್ರಾರ್ಥಿಸುತ್ತಿರುವರೋ ಅವರು ಸ್ವತಃ ತಮ್ಮ ಪ್ರಭುವಿನೆಡೆಗೆ ಹತ್ತಿರವಾಗಲು ಮಾರ್ಗಗಳನ್ನು ಅರಸುತ್ತಿರುವರು. ಅವರ ಪೈಕಿ ಅಲ್ಲಾಹುವಿನೊಂದಿಗೆ ಅತ್ಯಂತ ನಿಕಟವಾಗಿರುವವರು ಸಹ. ಅವರು ಅವನ ದಯೆಯನ್ನು ಆಶಿಸುತ್ತಿರುವರು ಮತ್ತು ಅವನ ಶಿಕ್ಷೆಯನ್ನು ಭಯಪಡುತ್ತಿರುವರು. ಖಂಡಿತವಾಗಿಯೂ ತಮ್ಮ ಪ್ರಭುವಿನ ಶಿಕ್ಷೆಯು ಭಯಪಡಬೇಕಾದುದೇ ಆಗಿದೆ.”** [ಸೂರ ಅಲ್-ಇಸ್ರಾ:57].

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿نَبِّئْ عِبَادِي أَنِّي أَنَا الْغَفُورُ الرَّحِيمُ - وَأَنَّ عَذَابِي هُوَ الْعَذَابُ الْأَلِيمُ﴾

**“(ಓ ಪ್ರವಾದಿಯವರೇ!) ಖಂಡಿತವಾಗಿಯೂ ನಾನು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವೆನೆಂದು ನನ್ನ ದಾಸರಿಗೆ ತಿಳಿಸಿಕೊಡಿರಿ . ಖಂಡಿತವಾಗಿಯೂ ನನ್ನ ಶಿಕ್ಷೆಯು ಅತ್ಯಧಿಕ ಯಾತನೆಯಿರುವ ಶಿಕ್ಷೆಯೆಂದೂ (ತಿಳಿಸಿಕೊಡಿರಿ).”** [ಸೂರ ಅಲ್-ಹಿಜ್ರ್: 49-50]

**ಪ್ರಶ್ನೆ 32. ಸರ್ವಶಕ್ತನಾದ ಅಲ್ಲಾಹನ ಕೆಲವು ಹೆಸರುಗಳು ಮತ್ತು ಗುಣಲಕ್ಷಣಗಳನ್ನು ಉಲ್ಲೇಖಿಸಿ.**

**ಉತ್ತರ:** ಅಲ್ಲಾಹ್, ಅರ್ರಬ್ಬ್ ಅರ್ರತಹ್ಮಾನ್ ಅಸ್ಸಮೀಅ್, ಅಲ್-ಬಸ್ವೀರ್, ಅಲ್-ಅಲೀಮ್, ಅರ್ರರಝ್ಝಾಕ್ಅಲ್-ಹಯ್, ಅಲ್-ಅಝೀಮ್ ಮುಂತಾದವುಗಳು ಅಲ್ಲಾಹನ ಅತ್ಯಂತ ಸುಂದರವಾದ ಹೆಸರುಗಳು ಮತ್ತು ಉನ್ನತ ಗುಣಲಕ್ಷಣಗಳಾಗಿವೆ.

**ಪ್ರಶ್ನೆ33. ಈ ಹೆಸರುಗಳನ್ನು ವಿವರಿಸಿ?**

**ಉತ್ತರ:**

- **ಅಲ್ಲಾಹ್** ಎಂದರೆ ನೈಜ ಆರಾಧ್ಯ. ಏಕೈಕನು ಮತ್ತು ಸಹಭಾಗಿಯಿಲ್ಲದವನು.
- **ಅರ್ರಾಬ್ಬ್** ಎಂದರೆ ಸೃಷ್ಟಿಕರ್ತ, ಮಾಲೀಕ, ಅನ್ನಾದಾರ ಒದಗಿಸುವವ ಮತ್ತು ನಿಯಂತ್ರಕ.
- **ಅಸ್ಸಮೀಅ್** ಎಂದರೆ ಎಲ್ಲವನ್ನೂ ಕೇಳುವವನು . ಎಲ್ಲಾ ವಿಭಿನ್ನ ಮತ್ತು ವೈವಿಧ್ಯಮಯ ಧ್ವನಿಗಳನ್ನು ಆಲಿಸುವವನು.
- **ಅಲ್-ಬಸ್ವೀರ್** ಎಂದರೆ ಎಲ್ಲವನ್ನೂ ನೋಡುವವನು . ಚಿಕ್ಕ ಮತ್ತು ದೊಡ್ಡದಾದ ಎಲ್ಲವನ್ನೂ ನೋಡುವವನು.
- **ಅಲ್-ಅಲೀಮ್** ಎಂದರೆ ಭೂತ , ವರ್ತಮಾನ ಮತ್ತು ಭವಿಷ್ಯ ಸೇರಿದಂತೆ ಎಲ್ಲವನ್ನೂ ತಿಳಿದಿರುವ ಸರ್ವಜ್ಞನು.
- **ಅರ್ರವಹ್ಮಾನ್** ಎಂದರೆ ಪ್ರತಿಯೊಂದು ಜೀವಿಗೂ ಕರುಣೆ ತೋರುವವನು . ಎಲ್ಲಾ ಮನುಷ್ಯರು ಮತ್ತು ಇತರ ಸೃಷ್ಟಿಗಳು ಅವನ ಕರುಣೆಯಲ್ಲಿ ಒಳಪಡುತ್ತಾರೆ.
- **ಅರ್ರ ಝ್ಝಾಕ್** ಎಂದರೆ ಮನುಷ್ಯರು , ಜಿನ್ನ್ ಮತ್ತು ಇತರೆಲ್ಲಾ ಜೀವಿಗಳು ಸೇರಿದಂತೆ ಎಲ್ಲರಿಗೂ ಆಹಾರವನ್ನು ಒದಗಿಸುವವನು.
- **ಅಲ್-ಹಯ್ಯ್** ಎಂದರೆ ಎಂದಿಗೂ ಸಾಯದೆ ಸದಾ ಜೀವಂತವಾಗಿರುವವನು. ಆದರೆ ಸೃಷ್ಟಿಗಳೆಲ್ಲವೂ ಒಂದಲ್ಲ ಒಂದು ದಿನ ಮರಣಹೊಂದಲಿವೆ.
- **ಅಲ್-ಅಝೀಮ್** ಎಂದರೆ ತನ್ನ ನಾಮ , ಗುಣಲಕ್ಷಣಗಳು ಮತ್ತು ಕ್ರಿಯೆಗಳಲ್ಲಿ ಸಂಪೂರ್ಣತೆಯನ್ನು ಮತ್ತು ಶ್ರೇಷ್ಠತೆಯನ್ನು ಹೊಂದಿರುವವನು.

**ಪ್ರಶ್ನೆ 34. ಮುಸ್ಲಿಮ್ ವಿದ್ವಾಂಸರೊಂದಿಗೆ ನಮಗಿರುವ ಕರ್ತವ್ಯಗಳೇನು?**

**ಉತ್ತರ:** ಅವರನ್ನು ಪ್ರೀತಿಸುವುದು, ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಮತ್ತು ಸಮಸ್ಯೆಗಳಲ್ಲಿ ಅವರನ್ನು ಅವಲಂಬಿಸುವುದು ಮತ್ತು ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿರುವುದು. ಅವರನ್ನು ಕೆಟ್ಟದಾಗಿ ಚಿತ್ರಿಸುವವರು ಸತ್ಯಮಾರ್ಗದಿಂದ ವಿಚಲಿತರಾದವರಾಗಿದ್ದಾರೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿يَرفَعِ ٱللَّهُ ٱلَّذِينَ ءَامَنُوا مِنكُم وَٱلَّذِينَ أُوتُوا ٱلعِلمَ دَرَجَٰت وَٱللَّهُ بِمَا تَعمَلُونَ خَبِير ﴾

"ನಿಮ್ಮ ಪೈಕಿ ವಿಶ್ವಾಸವಿಟ್ಟವರನ್ನು ಮತ್ತು ಜ್ಞಾನ ನೀಡಲಾದವರನ್ನು ಅಲ್ಲಾಹು ಹಲವು ಪದವಿಗಳಿಗೆ ಏರಿಸುವನು. ಅಲ್ಲಾಹು ನೀವು ಮಾಡುತ್ತಿರುವುದರ ಬಗ್ಗೆ ಸೂಕ್ಷ್ಮವಾಗಿ ಅರಿಯುವವನಾಗಿರುವನು." [ಸೂರ ಅಲ್-ಮುಜಾದಿಲ:11].

**ಪ್ರಶ್ನೆ 35. ಅಲ್ಲಾಹನ ಔಲಿಯಾಗಳು (ಆಪ್ತಮಿತ್ರರು) ಎಂದರೆ ಯಾರು?**

**ಉತ್ತರ:** ಅವರು ಭಯಭಕ್ತಿಯಿರುವ ಸತ್ಯವಿಶ್ವಾಸಿಗಳು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿أَلَا إِنَّ أَوْلِيَاءَ اللَّهِ لَا خَوْفٌ عَلَيْهِمْ وَلَا هُمْ يَحْزَنُونَ - الَّذِينَ آمَنُوا وَكَانُوا يَتَّقُونَ ﴾

"ಅರಿಯಿರಿ! ಖಂಡಿತವಾಗಿಯೂ ಅಲ್ಲಾಹುವಿನ ಮಿತ್ರರು ಯಾರೋ ಅವರಿಗೆ ಯಾವುದೇ ಭಯವಿಲ್ಲ. ಅವರು ದುಃಖಿಸಬೇಕಾಗಿಯೂ ಬರದು. ಅವರು ವಿಶ್ವಾಸವಿಟ್ಟವರೂ ಭಯಭಕ್ತಿ ಪಾಲಿಸುವವರೂ ಆಗಿರುವರು." [ಸೂರ ಯೂನುಸ್: 62-63]

**ಪ್ರಶ್ನೆ 36. ಈಮಾನ್ ಎಂದರೆ ಮಾತು ಮತ್ತು ಕ್ರಿಯೆಯೇ?**

**ಉತ್ತರ:** ಈಮಾನ್ ಎಂದರೆ ಮಾತು, ಕ್ರಿಯೆ ಮತ್ತು ವಿಶ್ವಾಸವಾಗಿದೆ.

**ಪ್ರಶ್ನೆ 37. ಈಮಾನ್ ಹೆಚ್ಚು ಕಡಿಮೆಯಾಗುತ್ತದೆಯೇ?**

**ಉತ್ತರ:** ಈಮಾನ್ ವಿಧೇಯತೆಯೊಂದಿಗೆ ಹೆಚ್ಚಾಗುತ್ತದೆ ಮತ್ತು ಅವಿಧೇಯತೆಯೊಂದಿಗೆ ಕಡಿಮೆಯಾಗುತ್ತದೆ. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿إِنَّمَا الْمُؤْمِنُونَ الَّذِينَ إِذَا ذُكِرَ اللَّهُ وَجِلَتْ قُلُوبُهُمْ وَإِذَا تُلِيَتْ عَلَيْهِمْ آيَاتُهُ زَادَتْهُمْ إِيمَانًا وَعَلَى رَبِّهِمْ يَتَوَكَّلُونَ ﴾

**"ಅಲ್ಲಾಹುವಿನ ಬಗ್ಗೆ ಪ್ರಸ್ತಾಪಿಸಲಾಗುವಾಗ ಹೃದಯಗಳು ಭಯದಿಂದ ನಡುಗುವವರು , ಅವನ ದೃಷ್ಟಾಂತಗಳನ್ನು ಓದಿಕೊಡಲಾದಾಗ ವಿಶ್ವಾಸವು ಅಧಿಕಗೊಳ್ಳುವವರು ಮತ್ತು ತಮ್ಮ ಪ್ರಭುವಿನ ಮೇಲೆ ಭರವಸೆಯಿಡುವವರು ಮಾತ್ರ ಸತ್ಯವಿಶ್ವಾಸಿಗಳಾಗಿರುವರು."** [ಸೂರ ಅಲ್-ಅನ್ಫಾಲ್:2].

**ಪ್ರಶ್ನೆ 38. ಇಹ್ಸಾನ್ ಎಂದರೇನು?**

**ಉತ್ತರ:** ನೀವು ಅಲ್ಲಾಹುವನ್ನು ನೋಡುವಂತೆ ಅವನನ್ನು ಆರಾಧಿಸುವುದು. ನೀವು ಅವನನ್ನು ನೋಡದಿದ್ದರೂ ಅವನು ನಿಮ್ಮನ್ನು ನೋಡುತ್ತಿದ್ದಾನೆಂದು ಭಾವಿಸಿ ಆರಾಧಿಸುವುದು.

**ಪ್ರಶ್ನೆ 39. ಸರ್ವಶಕ್ತನಾದ ಅಲ್ಲಾಹನು ಕರ್ಮಗಳನ್ನು ಯಾವಾಗ ಸ್ವೀಕರಿಸುತ್ತಾನೆ?**

**ಉತ್ತರ: ಕರ್ಮಗಳು ಈ ಎರಡು ಷರತ್ತುಗಳನ್ನು ಪೂರೈಸಿದರೆ:**

1- ಅದು ಸಂಪೂರ್ಣವಾಗಿ ಸರ್ವಶಕ್ತನಾದ ಅಲ್ಲಾಹನ ಸಂಪ್ರೀತಿಯನ್ನು ಬಯಸಿ ಮಾಡಿದ ಕರ್ಮವಾಗಿರಬೇಕು.

2- 2- ಅದು ಪ್ರವಾದಿ ﷺ ರವರ ಸುನ್ನತ್ ಪ್ರಕಾರವಿರಬೇಕು.

**ಪ್ರಶ್ನೆ 40. ಸರ್ವಶಕ್ತನಾದ ಅಲ್ಲಾಹನ ಮೇಲೆ ತವಕ್ಕುಲ್ (ಭರವಸೆ) ಮಾಡುವುದು ಎಂದರೇನು?**

**ಉತ್ತರ:** ಅದು ಪ್ರಯೋಜನಗಳನ್ನು ಪಡೆಯಲು ಮತ್ತು ಹಾನಿಯನ್ನು ತಡೆಗಟ್ಟಲು ಸರ್ವಶಕ್ತನಾದ ಅಲ್ಲಾಹನ ಮೇಲೆ ಅವಲಂಬಿತವಾಗುವುದು .ಆದರೆ ಅದರೊಂದಿಗೆ ಕಾರ್ಯಕಾರಣಗಳನ್ನು ಕೂಡ ನಿರ್ವಹಿಸಬೇಕು. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَمَنْ يَتَوَكَّلْ عَلَى اللَّهِ فَهُوَ حَسْبُهُ... ﴾

**"ಯಾರಾದರೂ ಅಲ್ಲಾಹು ವಿನ ಮೇಲೆ ಭರವಸೆಯಿಡುವುದಾದರೆ ಅವನಿಗೆ ಅಲ್ಲಾಹು ಸಾಕು."** [ಸೂರ ಅತ್ತಲಾಕ್:3].

**'ಹಸ್ಬುಹು'** ಅಂದರೆ ಅವನು ಸಾಕು ಎಂದರ್ಥ.

**ಪ್ರಶ್ನೆ 41. ಒಳ್ಳೆಯದನ್ನು ಆದೇಶಿಸುವುದು ಮತ್ತು ಕೆಟ್ಟದ್ದನ್ನು ವಿರೋಧಿಸುವುದು ಎಂದರೇನು?**

**ಉತ್ತರ:** ಒಳ್ಳೆಯದನ್ನು ಆದೇಶಿಸುವುದು ಎಂದರೆ ಅಲ್ಲಾಹನಿಗೆ ವಿಧೇಯತೆ ತೋರುವಂತಹ ಕರ್ಮಗಳೆಲ್ಲವನ್ನೂ ಆದೇಶಿಸುವುದು. ಕೆಟ್ಟದ್ದನ್ನು ವಿರೋಧಿಸುವುದು ಎಂದರೆ ಅಲ್ಲಾಹನಿಗೆ ಅವಿಧೇಯತೆ ತೋರುವಂತಹ ಕರ್ಮಗಳೆಲ್ಲವನ್ನೂ ವಿರೋಧಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿كُنتُم خَيرَ أُمَّةٍ أُخرِجَت لِلنَّاسِ تَأمُرُونَ بِٱلمَعرُوفِ وَتَنهَونَ عَنِ ٱلمُنكَرِ وَتُؤمِنُونَ بِٱللَّهِ... ﴾

**"ನೀವು ಮನುಕುಲಕ್ಕಾಗಿ ಹೊರತರಲಾಗಿರುವ ಉತ್ತಮ ಸಮುದಾಯವಾಗಿರುವಿರಿ . ನೀವು ಸದಾಚಾರವನ್ನು ಆದೇಶಿಸುತ್ತಿರುವಿರಿ , ದುರಾಚಾರವನ್ನು ವಿರೋಧಿಸುತ್ತಿರುವಿರಿ ಮತ್ತು ಅಲ್ಲಾಹುವಿನಲ್ಲಿ ವಿಶ್ವಾಸವಿಟ್ಟಿರುವಿರಿ."** [ಸೂರ ಆಲು ಇಮ್ರಾನ್:110].

**ಪ್ರಶ್ನೆ 42. ಅಹ್ಲುಸ್ಸುನ್ನ ವಲ್-ಜಮಾಅ ಎಂದರೆ ಯಾರು?**

**ಉತ್ತರ:**

- ಅಹ್ಲುಸ್ಸುನ್ನ ವಲ್-ಜಮಾಅ ಎಂದರೆ ಮಾತು, ಕ್ರಿಯೆ ಮತ್ತು ವಿಶ್ವಾಸದಲ್ಲಿ ಪ್ರವಾದಿ ﷺ ರವರು ಮತ್ತು ಅವರ ಸಂಗಡಿಗರು ಚಲಿಸಿದ ಮಾರ್ಗದಲ್ಲೇ ಚಲಿಸುವವರು.
- ಅವರನ್ನು ಅಹ್ಲುಸ್ಸುನ್ನ ಎಂದು ಕರೆಯುವುದು ಏಕೆಂದರೆ ಅವರು ಪ್ರವಾದಿಯ ﷺ ಸುನ್ನತ್ ಅನ್ನು ಅನುಸರಿಸಿ ಬಿದ್‌ಅತ್‌ಗಳನ್ನು ತ್ಯಜಿಸುವುದರಿಂದ.
- ಅಲ್ ಜಮಾಅ ಎಂದು ಕರೆಯುವುದು ಏಕೆಂದರೆ ಅವರು ಸತ್ಯದ ಆಧಾರದಲ್ಲಿ ಒಗ್ಗಟ್ಟಾಗಿದ್ದರು. ಅವರು ಹಲವು ಗುಂಪುಗಳಾಗಿ ವಿಭಜನೆಯಾಗಲಿಲ್ಲ.

*******

# ಕರ್ಮಶಾಸ್ತ್ರ ವಿಭಾಗ

**ಪ್ರಶ್ನೆ 1. ಶುದ್ಧೀಕರಣ ಎಂದರೇನು?**

**ಉತ್ತರ:** ಶುದ್ಧೀಕರಣ ಎಂದರೆ ಮಾಲಿನ್ಯವನ್ನು ಮತ್ತು ಹೊಲಸುಗಳನ್ನು ನಿವಾರಿಸುವುದು.

ಹೊಲಸನ್ನು ಶುದ್ಧೀಕರಿಸುವುದು ಎಂದರೆ ಮುಸಲ್ಮಾನನು ತನ್ನ ದೇಹ , ಬಟ್ಟೆ, ಅಥವಾ ನಮಾಝ್ ಮಾಡುವ ಸ್ಥಳದಲ್ಲಿರುವ ಹೊಲಸುಗಳನ್ನು ನಿವಾರಿಸುವುದು.

ಮಾಲಿನ್ಯವನ್ನು ಶುದ್ಧೀಕರಿಸುವುದು ಎಂದರೆ ಶುದ್ಧ ನೀರಿನಿಂದ ವುದೂ ಅಥವಾ ಸ್ನಾನ ಮಾಡುವುದು. ನೀರು ಲಭ್ಯವಿಲ್ಲದಿದ್ದರೆ, ಅಥವಾ ನೀರನ್ನು ಬಳಸಲು ಸಾಧ್ಯವಾಗದಿದ್ದರೆ ತಯಮ್ಮುಮ್ ಮಾಡುವುದು.

**ಪ್ರಶ್ನೆ 2. ಹೊಲಸು ತಾಗಿದರೆ ಅದನ್ನು ಶುಚೀಕರಿಸುವುದು ಹೇಗೆ?**

**ಉತ್ತರ:**

ಅದು ಶುದ್ಧವಾಗುವವರೆಗೆ ನೀರಿನಿಂದ ತೊಳೆಯುವ ಮುಖಾಂತರ.

**“ನಾಯಿ ಪಾತ್ರೆಯನ್ನು ನೆಕ್ಕಿದರೆ , ಅದನ್ನು ಏಳು ಬಾರಿ ನೀರಿನಿಂದ ಶುದ್ದಗೊಳಿಸಬೇಕು . ಮೊದಲ ಬಾರಿ ಮಣ್ಣಿನಿಂದ ತೊಳೆಯಬೇಕು.”**

**ಪ್ರಶ್ನೆ 3. ವುದೂವಿನ ಶ್ರೇಷ್ಠತೆಗಳನ್ನು ವಿವರಿಸಿ.**

**ಉತ್ತರ:** ಪ್ರವಾದಿ ﷺ ರವರು ಹೇಳಿದರು : **"ಮುಸಲ್ಮಾನ ದಾಸ" - ಅಥವಾ "ಸತ್ಯವಿಶ್ವಾಸಿ ದಾಸ" - ವುದೂ ಮಾಡುತ್ತಾ ತನ್ನ ಮುಖವನ್ನು ತೊಳೆಯುವಾಗ ಅದರ ನೀರಿನೊಂದಿಗೆ ಅವನು ತನ್ನ ಕಣ್ಣುಗಳಿಂದ ನೋಡಿದ ಪಾಪಗಳೆಲ್ಲವೂ ಅವನ ಮುಖದಿಂದ ನಿವಾರಣೆಯಾಗುತ್ತವೆ." - ಅಥವಾ " ನೀರಿನ ಕೊನೆಯ ಹನಿಯೊಂದಿಗೆ" - "ಅವನು ತನ್ನ ಕೈಗಳನ್ನು ತೊಳೆಯುವಾಗ ಅದರ ನೀರಿನೊಂದಿಗೆ ಅವನು ತನ್ನ ಕೈಗಳಿಂದ ಮಾಡಿದ ಪಾಪಗಳೆಲ್ಲವೂ ನಿವಾರಣೆಯಾಗುತ್ತವೆ ." - ಅಥವಾ " ನೀರಿನ ಕೊನೆಯ ಹನಿಯೊಂದಿಗೆ" - "ಅವನು ತನ್ನ ಕಾಲುಗಳನ್ನು ತೊಳೆಯುವಾಗ ಅದರ ನೀರಿನೊಂದಿಗೆ ಅವನು ತನ್ನ ಕಾಲುಗಳಿಂದ ಮಾಡಿದ ಪಾಪಗಳೆಲ್ಲವೂ**

**ನಿವಾರಣೆಯಾಗುತ್ತವೆ." - ಅಥವಾ " ನೀರಿನ ಕೊನೆಯ ಹನಿಯೊಂದಿಗೆ " - "ಹೀಗೆ ಅವನು ಪಾಪಗಳಿಂದ ಶುದ್ಧವಾಗಿ ಹೊರಬರುತ್ತಾನೆ."** [ಮುಸ್ಲಿಮ್].

**ಪ್ರಶ್ನೆ4. ನೀವು ಹೇಗೆ ವುದೂ ಮಾಡುತ್ತೀರಿ?**

**ಉತ್ತರ:**

- ಕೈಗಳನ್ನು ಮೂರು ಬಾರಿ ತೊಳೆಯುವುದು.
- ಮೂರು ಬಾರಿ ಬಾಯಿಯನ್ನು ಮುಕ್ಕಳಿಸುವುದು ಮತ್ತು ಮೂಗಿನೊಳಗೆ ನೀರನ್ನು ಎಳೆದು ಹೊರಬಿಡುವುದು.
- ಬಾಯಿ ಮುಕ್ಕಳಿಸುವುದು ಎಂದರೆ ಬಾಯಿಯಲ್ಲಿ ನೀರು ಹಾಕಿ ಚೆನ್ನಾಗಿ ಅಲ್ಲಾಡಿಸಿ ಹೊರಹಾಕುವುದು.
- ಮೂಗಿಗೆ ನೀರೆಳೆಯುವುದು ಎಂದರೆ ಬಲಗೈಯಿಂದ ಮೂಗಿನೊಳಗೆ ಶ್ವಾಸದೊಂದಿಗೆ ನೀರನ್ನು ಎಳೆಯುವುದು.
- ಮೂಗಿನಿಂದ ನೀರು ಹೊರಬಿಡುವುದು ಎಂದರೆ ಎಡಗೈಯಿಂದ ಮೂಗನ್ನು ಹಿಡಿದು ಬಲವಾಗಿ ಮೂಗಿನಿಂದ ನೀರನ್ನು ಹೊರಹಾಕುವುದು.
- ನಂತರ ಮುಖವನ್ನು ಮೂರು ಬಾರಿ ತೊಳೆಯುವುದು.
- ನಂತರ ಕೈಗಳನ್ನು ಮೊಣಕೈಗಳವರೆಗೆ ಮೂರು ಬಾರಿ ತೊಳೆಯುವುದು.
- ನಂತರ ಎರಡು ಕೈಗಳಿಂದ ತಲೆಯ ಮುಂಬದಿಯಿಂದ ಹಿಂಬದಿಯವರೆಗೆ ಮತ್ತು ಅಲ್ಲಿಂದ ಮುಂಬದಿಯವರೆಗೆ ಸವರುವುದು ಮತ್ತು ಕಿವಿಗಳನ್ನು ಸವರುವುದು.
- ನಂತರ ಕಾಲುಗಳನ್ನು ಹರಡುಗಂಟುಗಳವರೆಗೆ ಮೂರು ಬಾರಿ ತೊಳೆಯುವುದು.
- ಇದು ವುದೂ ಮಾಡುವ ಸಂಪೂರ್ಣ ವಿಧಾನ ವಾಗಿದೆ. ಪ್ರವಾದಿ ﷺ ರಿಂದ ವರದಿಯಾದ ಈ ವಿಧಾನವು ಬುಖಾರಿ ಮತ್ತು ಮುಸ್ಲಿಂನ ಹದೀಸ್‌ಗಳಲ್ಲಿ ಸಾಬೀತಾಗಿದೆ. ಉಸ್ಮಾನ್, ಅಬ್ದುಲ್ಲಾ ಬಿನ್ ಝ್ಯೆದ್ ಮತ್ತು ಇತರರು ಇದನ್ನು ವರದಿ ಮಾಡಿದ್ದಾರೆ.ಅದೇ

ರೀತಿ ಈ ಕೆಳಗಿನ ವಿಧಾನವು ಕೂಡ ಪ್ರವಾದಿ(ಸ) ರಿಂದ ಬುಖಾರಿ ಮತ್ತು ಇತರ ಹದೀಸ್ ಗ್ರಂಥಗಳಲ್ಲೂ ಸಾಬೀತಾಗಿದೆ : **"ಅವರು ಒಂದೊಂದು ಬಾರಿ ಅಂಗಾಂಗಗಳನ್ನು ತೊಳೆಯುತ್ತಾ ವುದೂ ಮಾಡಿದರು . ಅವರು ಎರಡೆರಡು ಬಾರಿ ಅಂಗಾಂಗಗಳನ್ನು ತೊಳೆಯುತ್ತಾ ವುದೂ ಮಾಡಿದರು . ಅಂದರೆ ಅವರು ವುದೂವಿನ ಪ್ರತಿಯೊಂದು ಅಂಗಗಳನ್ನು ಒಂದು ಅಥವಾ ಎರಡು ಬಾರಿ ತೊಳೆದರು."**

**ಪ್ರಶ್ನೆ 5. ವುದೂವಿನ ಕಡ್ಡಾಯಗಳು ಎಂದರೇನು? ಅವು ಎಷ್ಟಿವೆ?**

ಉತ್ತರ:ಯಾವುದನ್ನು ನಿರ್ವಹಿಸದಿದ್ದರೆ ವುದೂ ಅಸಿಂಧುವಾಗುತ್ತದೋ ಅವುಗಳನ್ನು ವುದೂವಿನ ಕಡ್ಡಾಯಗಳು ಎನ್ನಲಾಗುತ್ತದೆ.

1- ಮುಖವನ್ನು ತೊಳೆಯುವುದು. ಬಾಯಿ ಮುಕ್ಕಳಿಸುವುದು ಮತ್ತು ಮೂಗಿಗೆ ನೀರು ಎಳೆಯುವುದು ಇದರಲ್ಲಿ ಸೇರುತ್ತದೆ.

2- ಮೊಣಕೈಗಳವರೆಗೆ ಕೈಗಳನ್ನು ತೊಳೆಯುವುದು.

3- ತಲೆಯನ್ನು ಸವರುವುದು. ಎರಡು ಕಿವಿಗಳನ್ನು ಸವರುವುದು ಕೂಡ ಇದರಲ್ಲಿ ಸೇರುತ್ತದೆ.

4- ಕಾಲುಗಳನ್ನು ಹರಡುಗಂಟುಗಳವರೆಗೆ ತೊಳೆಯುವುದು.

5- ಅಂಗಾಂಗಗಳನ್ನು ಕ್ರಮಪ್ರಕಾರ ತೊಳೆಯುವುದು . ಅಂದರೆ ಮುಖ, ನಂತರ ಕೈ, ನಂತರ ತಲೆ ಸವರುವುದು, ನಂತರ ಕಾಲುಗಳನ್ನು ತೊಳೆಯುವುದು.

6- ಅಲ್-ಮುವಾಲತ್: ಅಂದರೆ ವುದೂವನ್ನು ನಿರಂತರವಾಗಿ ನಿರ್ವಹಿಸುವುದು. ಅಂಗಾಂಗಗಳ ನೀರು ಒಣಗುವ ತನಕ ಅವುಗಳ ಮಧ್ಯೆ ತಡ ಮಾಡದಿರುವುದು.

7- ಅಂದರೆ ಅರ್ಧ ವುದೂ ನಿರ್ವಹಿಸಿ ಸ್ವಲ್ಪ ಸಮಯದ ನಂತರ ಅದನ್ನು ಮುಂದುವರಿಸಿದರೆ, ಆ ವುದೂ ಸಿಂಧುವಾಗುವುದಿಲ್ಲ.

**ಪ್ರಶ್ನೆ 6. ವುದೂವಿನ ಸುನ್ನತ್‌ಗಳು ಎಂದರೇನು? ಅವು ಎಷ್ಟಿವೆ?**

**ಉತ್ತರ:** ವುದೂವಿನ ಸುನ್ನತ್‌ಗಳು ಎಂದರೆ ಅವುಗಳನ್ನು ನಿರ್ವಹಿಸಿದರೆ ಹೆಚ್ಚಿನ ಪುಣ್ಯ ಮತ್ತು ಪ್ರತಿಫಲ ಸಿಗುತ್ತದೆ . ಅವುಗಳನ್ನು ತೊರೆದರೆ ಯಾವುದೇ ಪಾಪವಿಲ್ಲ . ಅದರಿಂದ ವುದೂ ಅಸಿಂಧುವಾಗುವುದಿಲ್ಲ.

1- ಬಿಸ್ಮಿಲ್ಲ ಹೇಳುವುದು.

2- ಮಿಸ್ವಾಕ್ ಮಾಡುವುದು.

3- ಮುಂಗೈಗಳನ್ನು ತೊಳೆಯುವುದು.

4- ಬೆರಳುಗಳ ಮಧ್ಯಭಾಗಗಳನ್ನು ತೊಳೆಯುವುದು.

5- ಅಂಗಗಳನ್ನು ಎರಡನೇ ಮತ್ತು ಮೂರನೇ ಬಾರಿ ತೊಳೆಯುವುದು.

6- ಬಲಭಾಗದಿಂದ ಪ್ರಾರಂಭಿಸುವುದು.

7- ವುದೂ ನಿರ್ವಹಿಸಿದ ನಂತರ ಈ ದಿಕ್ರ್ ಪಠಿಸುವುದು:"**ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು ವಅಶ್ಹದು ಅನ್ನ ಮುಹಮ್ಮದನ್ ಅಬ್ದುಹು ವ ರಸೂಲುಹು**" **"ಅಲ್ಲಾಹನ ಹೊರತು ಬೇರೆ ದೇವರಿಲ್ಲ ಎಂದು ನಾನು ಸಾಕ್ಷಿ ಹೇಳುತ್ತೇನೆ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಮುಹಮ್ಮದ್ ಅವನ ದಾಸ ಮತ್ತು ಸಂದೇಶವಾಹಕರು ಎಂದು ನಾನು ಸಾಕ್ಷಿ ನುಡಿಯುತ್ತೇನೆ."**

8- ಅದರ ನಂತರ ಎರಡು ರಕಅತ್ ನಮಾಝ್ ನಿರ್ವಹಿಸುವುದು.

**ಪ್ರಶ್ನೆ 7. ವುದೂವನ್ನು ಅಸಿಂಧುಗೊಳಿಸುವ ಕಾರ್ಯಗಳನ್ನು ತಿಳಿಸಿ?**

**ಉತ್ತರ:**

- ಮಲಮೂತ್ರ ವಿಸರ್ಜನಾ ದ್ವಾರಗಳಿಂದ ಮೂತ್ರ , ಮಲ ಅಥವಾ ವಾಯು ಹೊರಬರುವುದು.
- ನಿದ್ರಿಸುವುದು, ಅಥವಾ ಹುಚ್ಚನಾಗುವುದು ಅಥವಾ ಮೂರ್ಛೆ ಹೋಗುವುದು.
- ಒಂಟೆ ಮಾಂಸ ಸೇವಿಸುವುದು.

- ಕೈಯಿಂದ ಮೂತ್ರದ್ವಾರ ಅಥವಾ ಗುದದ್ವಾರವನ್ನು ಪರದೆಯಿಲ್ಲದೆ ಸ್ಪರ್ಶಿಸುವುದು.

**ಪ್ರಶ್ನೆ 8. ತಯಮ್ಮುಮ್ ಎಂದರೇನು?**

**ಉತ್ತರ:** ತಯಮ್ಮುಮ್ ಎಂದರೆ ನೀರು ಸಿಗದಿರುವಾಗ ಅಥವಾ ಅದನ್ನು ಬಳಸಲು ಸಾಧ್ಯವಿಲ್ಲದಿರುವಾಗ ಮಣ್ಣು ಮತ್ತು ಶುದ್ಧವಾದ ಭೂಮಿಯ ಮೇಲ್ಭಾಗದ ಮುಂತಾದ ವಸ್ತುಗಳನ್ನು ಬಳಸುವುದು.

**ಪ್ರಶ್ನೆ 9. ತಯಮ್ಮುಮ್ ಮಾಡುವುದು ಹೇಗೆ?**

**ಉತ್ತರ:** ಅಂಗೈಗಳ ಒಳಭಾಗದಿಂದ ಮಣ್ಣಿಗೆ ಒಂದು ಬಾರಿ ಬಡಿದು ಮುಖ ಮತ್ತು ಕೈಗಳ ಹೊರಭಾಗವನ್ನು ಒಂದು ಬಾರಿ ಸವರುವುದು.

**ಪ್ರಶ್ನೆ 10. ತಯಮ್ಮುಮ್ ಅನ್ನು ಅಸಿಂಧುಗೊಳಿಸುವ ಕಾರ್ಯಗಳು ಯಾವುವು?**

**ಉತ್ತರ:** ವುದೂವನ್ನು ಅಸಿಂಧುಗೊಳಿಸುವ ಕಾರ್ಯಗಳೆಲ್ಲವೂ ತಯಮ್ಮುಮ್ ಅನ್ನು ಅಸಿಂಧುಗೊಳಿಸುತ್ತವೆ;ನೀರು ಲಭ್ಯವಾದರೆ.

**ಪ್ರಶ್ನೆ 11. ಪಾದರಕ್ಷೆ ಮತ್ತು ಕಾಲ್ಚೀಲಗಳು ಎಂದರೇನು? ಅವುಗಳ ಮೇಲೆ ಸವರಬಹುದೇ?**

**ಉತ್ತರ: ಪಾದರಕ್ಷೆಗಳು** ಎಂದರೆ ಕಾಲಿಗೆ ಧರಿಸುವ ಚರ್ಮದ ವಸ್ತು.

**ಉತ್ತರ: ಕಾಲ್ಚೀಲಗಳು** ಎಂದರೆ ಕಾಲಿಗೆ ಧರಿಸುವ ಚರ್ಮವಲ್ಲದ ವಸ್ತು.

ಕಾಲುಗಳನ್ನು ತೊಳೆಯುವ ಬದಲು ಅವುಗಳ ಮೇಲೆ ಸವರಬಹುದು.

**ಪ್ರಶ್ನೆ 12. ಪಾದರಕ್ಷೆಗಳ ಮೇಲೆ ಸವರುವುದರ ಯುಕ್ತಿಯನ್ನು ತಿಳಿಸಿ?**

**ಉತ್ತರ:** ವಿಶೇಷವಾಗಿ ತಂಪು ಮತ್ತು ಚಳಿಯಿರುವ , ಅಥವಾ ಪ್ರಯಾಣದ ಸಮಯದಲ್ಲಿ ಪಾದರಕ್ಷೆಗಳನ್ನು ಕಳಚುವುದು ಕಷ್ಟವಾಗುವುದರಿಂದ ಜನರಿಗೆ ಸುಲಭ ಮತ್ತು ಸರಳಗೊಳಿಸಲು ಪಾದರಕ್ಷೆಗಳ ಮೇಲೆ ಸವರುವ ನಿಯಮ ರಚಿಸಲಾಗಿದೆ.

**ಪ್ರಶ್ನೆ 13. ಪಾದರಕ್ಷೆಗಳ ಮೇಲೆ ಸವರುವುದು ಸಿಂಧುವಾಗಲು ಇರುವ ಷರತ್ತುಗಳು ಯಾವುವು?**

**ಉತ್ತರ:**

1- ವುದೂ ನಿರ್ವಹಿಸಿದ ನಂತರ ಪಾದರಕ್ಷೆಗಳನ್ನು ಧರಿಸಬೇಕು.
2- ಪಾದರಕ್ಷೆಗಳು ಶುಚಿಯಾಗಿರಬೇಕು, ಶುಚಿಯಿಲ್ಲದ ಪಾದರಕ್ಷೆಗಳ ಮೇಲೆ ಸವರಬಾರದು.
3- ವುದೂ ಮಾಡುವಾಗ ಕಾಲುಗಳನ್ನು ಕಡ್ಡಾಯವಾಗಿ ತೊಳೆಯಬೇಕಾದ ಭಾಗಗಳನ್ನು ಪಾದರಕ್ಷೆಯು ಮುಚ್ಚಿರಬೇಕು.
4- ಸವರುವುದು ನಿಗದಿತ ಅವಧಿಯೊಳಗೆ ಇರಬೇಕು . ಪ್ರಯಾಣಿಕರಲ್ಲದವರಿಗೆ: ಒಂದು ದಿನ ಮತ್ತು ಒಂದು ರಾತ್ರಿ , ಮತ್ತು ಪ್ರಯಾಣಿಕರಿಗೆ: ಮೂರು ದಿನಗಳು ಮತ್ತು ರಾತ್ರಿಗಳವರೆಗೆ ಸವರಬಹುದು.

**ಪ್ರಶ್ನೆ 14. ಪಾದರಕ್ಷೆಗಳ ಮೇಲೆ ಸವರುವುದು ಹೇಗೆ?**

**ಉತ್ತರ: ಸವರುವ ವಿಧಾನ ಹೀಗಿದೆ:** ಕೈಬೆರಳುಗಳನ್ನು ನೀರಿನಲ್ಲಿ ಒದ್ದೆ ಮಾಡಿ ಕಾಲು ಬೆರಳುಗಳ ಮೇಲಿರಿಸಿ, ಕಣಕಾಲಿನ ಬುಡದ ತನಕ ಸವರುವುದು . ಬಲಗಾಲನ್ನು ಬಲಗೈಯಿಂದ ಎಡಗಾಲನ್ನು ಎಡಗೈಯಿಂದ ಸವರಬೇಕು. ಸವರುವಾಗ ಕೈ ಬೆರಳುಗಳನ್ನು ಹರಡಬೇಕು . ಇದನ್ನು ಪುನರಾವರ್ತಿಸಬಾರದು.

**ಪ್ರಶ್ನೆ15. ಪಾದರಕ್ಷೆಗಳ ಮೇಲೆ ಸವರುವುದನ್ನು ಏನೆಲ್ಲಾ ಅಸಿಂಧುಗೊಳಿಸುತ್ತದೆ?**

ಉತ್ತರ:

1- ಸವರುವ ಅವಧಿ ಮುಗಿಯುವುದು. ಸವರಲು ಶರಿಯತ್ ನಿರ್ದೇಶಿಸಿದ ನಿಗದಿತ ಅವಧಿ ಮುಗಿದ ಬಳಿಕ ಪಾದರಕ್ಷೆಗಳ ಮೇಲೆ ಸವರುವಂತಿಲ್ಲ. ಪ್ರಯಾಣಿಕರಲ್ಲದವರಿಗೆ: ಒಂದು ದಿನ ಮತ್ತು ಒಂದು ರಾತ್ರಿ , ಮತ್ತು ಪ್ರಯಾಣಿಕರಿಗೆ: ಮೂರು ದಿನಗಳು ಮತ್ತು ರಾತ್ರಿಗಳವರೆಗೆ ಸವರಬಹುದು.

2- ಪಾದರಕ್ಷೆಗಳನ್ನು ಕಳಚುವುದು. ಸವರಿದ ನಂತರ ಪಾದರಕ್ಷೆಗಳನ್ನು ಅಥವಾ ಅವುಗಳಲ್ಲಿ ಒಂದನ್ನು ಕಳಚಿದರೆ ಸವರುವುದು ಅಸಿಂಧುವಾಗುತ್ತದೆ.

**ಪ್ರಶ್ನೆ 16. ನಮಾಝ್ ಎಂದರೇನು?**

**ಉತ್ತರ:** ನಮಾಝ್ ಎಂದರೆ ತಕ್ಬೀರ್‌ನಿಂದ ಪ್ರಾರಂಭಿಸಿ ಮತ್ತು ಸಲಾಂದೊಂದಿಗೆ ಮುಕ್ತಾಯಗೊಳ್ಳುವ ನಿರ್ದಿಷ್ಟ ಮಾತುಗಳು ಮತ್ತು ಕ್ರಿಯೆಗಳೊಂದಿಗೆ ಅಲ್ಲಾಹುವಿಗೆ ಸಲ್ಲಿಸುವ ಆರಾಧನೆಯಾಗಿದೆ.

**ಪ್ರಶ್ನೆ 17. ನಮಾಝ್‌ನ ವಿಧಿಯೇನು?**

**ಉತ್ತರ:** ನಮಾಝ್ ಪ್ರತಿಯೊಬ್ಬ ಮುಸಲ್ಮಾನನಿಗೆ ಕಡ್ಡಾಯವಾಗಿದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ :﴿ إِنَّ ٱلصَّلَوٰةَ كَانَتۡ عَلَى ٱلۡمُؤۡمِنِينَ كِتَٰبٗا مَّوۡقُوتٗا ﴾

**"ಖಂಡಿತವಾಗಿಯೂ ನಮಾಝ್ ಸತ್ಯವಿಶ್ವಾಸಿಗಳ ಮೇಲೆ ಸಮಯ ನಿಶ್ಚಯಿಸಲಾದ ಒಂದು ಕಡ್ಡಾಯ ಕರ್ಮವಾಗಿದೆ."** [ಸೂರ ಅನ್ನಿಸಾ: 103].

**ಪ್ರಶ್ನೆ 18. ನಮಾಝ್ ತೊರೆಯುವುದರ ವಿಧಿಯೇನು?**

**ಉತ್ತರ: ನಮಾಝನ್ನು ತೊರೆಯುವುದು ಸತ್ಯನಿಷೇಧವಾಗಿದೆ , ಪ್ರವಾದಿ عَلَيْهِ الصَّلَاةُ وَالسَّلَامُ ಹೇಳಿದರು:"ನಮ್ಮ ಮತ್ತು ಅವರ ನಡುವಿನ ಒಡಂಬಡಿಕೆಯು ನಮಾಝ್ ಆಗಿದೆ . ಆದ್ದರಿಂದ ಅದನ್ನು ತೊರೆಯುವವನು ಸತ್ಯನಿಷೇಧಿಯಾಗುವನು."**(ಅಹ್ಮದ್, ತಿರ್ಮಿದಿ ಮತ್ತು ಇತರರು)

**ಪ್ರಶ್ನೆ 19. ಹಗಲು ಮತ್ತು ರಾತ್ರಿ ಒಬ್ಬ ಮುಸಲ್ಮಾನನಿಗೆ ಎಷ್ಟು ನಮಾಝ್‌ಗಳು ಕಡ್ಡಾಯವಾಗಿವೆ ? ಪ್ರತಿ ನಮಾಝಿಗೆ ಎಷ್ಟು ರಕ್‌ಅತ್‌ಗಳಿವೆ?**

**ಉತ್ತರ:** ಹಗಲು ಮತ್ತು ರಾತ್ರಿಯಲ್ಲಿ ಐದು ನಮಾಝ್‌ಗಳು ಕಡ್ಡಾಯವಾಗಿವೆ. ಫಜ್ರ್ ನಮಾಝ್: ಎರಡು ರಕ್‌ಅತ್, ಝುಹ್ರ್ ನಮಾಝ್: ನಾಲ್ಕು ರಕ್‌ಅತ್, ಅಸ್ರ್ ನಮಾಝ್: ನಾಲ್ಕು ರಕ್‌ಅತ್, ಮಗ್ರಿಬ್ ನಮಾಝ್: ಮೂರು ರಕ್‌ಅತ್, ಮತ್ತು ಇಶಾ ನಮಾಝ್: ನಾಲ್ಕು ರಕ್‌ಅತ್.

**ಪ್ರಶ್ನೆ 20. ನಮಾಝಿನ ಷರತ್ತುಗಳನ್ನು ತಿಳಿಸಿ?**

**ಉತ್ತರ:**

1- ಇಸ್ಲಾಂ; ಸತ್ಯನಿಷೇಧಿಗಳ ನಮಾಝ್ ಸಿಂಧುವಲ್ಲ.
2- ಬುದ್ಧಿ; ಹುಚ್ಚರ ನಮಾಝ್ ಸಿಂಧುವಲ್ಲ.
3- 3. ವಿವೇಚನೆ; ವಿವೇಚನೆಯಿಲ್ಲದ ಮಕ್ಕಳ ನಮಾಝ್ ಸಿಂಧುವಲ್ಲ.
4- 4-ಸಂಕಲ್ಪ.
5- 5- ಸಮಯ ಪ್ರಾರಂಭವಾಗುವುದು.
6- 6- ವುದೂ ನಿರ್ವಹಿಸಿರುವುದು.
7- 7- ಮಾಲಿನ್ಯಗಳಿಂದ ಶುದ್ಧವಾಗಿರುವುದು.
8- 8- ಗುಪ್ತಾಂಗಗಳನ್ನು ಮುಚ್ಚುವುದು.
9- 9 - ಕಿಬ್ಲಾ ದೆಡೆಗೆ ತಿರುಗುವುದು.

**ಪ್ರಶ್ನೆ 21. ನಮಾಝಿಗೆ ಎಷ್ಟು ಸ್ತಂಭಗಳಿವೆ?**

**ಉತ್ತರ: ಹದಿನಾಲ್ಕು ಸ್ತಂಭಗಳು. ಅವು ಈ ಕೆಳಗಿನಂತಿವೆ:**

**ಒಂದು:** ನಿಲ್ಲುವ ಸಾಮರ್ಥ್ಯವಿರುವವರು ಕಡ್ಡಾಯ ನಮಾಝುನ್ನು ನಿಂತು ನಿರ್ವಹಿಸುವುದು.

- ಇಹ್ರಾಮ್‌ನ ತಕ್ಬೀರ್, ಅಂದರೆ: **ಅಲ್ಲಾಹು ಅಕ್ಬರ್** ಎಂದು ಹೇಳುವುದು.

- ಸೂರಃ ಅಲ್-ಫಾತಿಹಾ ಪಠಿಸುವುದು.
- ರುಕೂ ನಿರ್ವಹಿಸುವುದು. ಬೆನ್ನನ್ನು ನೇರವಾಗಿ ಬಗ್ಗಿಸುವುದು ಮತ್ತು ತಲೆಯನ್ನು ಅದಕ್ಕೆ ಸಮಾನಾಂತರದಲ್ಲಿಡುವುದು.
- ರೂಕೂ ನಿಂದ ತಲೆಯೆತ್ತುವುದು.
- ಶಾಂತವಾಗಿ ನಿಲ್ಲುವುದು.
- ಸುಜೂಜ್ ಮಾಡುವುದು. ಹಣೆ, ಮೂಗು, ಕೈಗಳು, ಮೊಣಕಾಲುಗಳು ಮತ್ತು ಕಾಲ್ಬೆರಳುಗಳ ತುದಿಗಳನ್ನು ನೆಲದಲ್ಲಿ ಒತ್ತಿ ಹಿಡಿಯುವುದು.
- ಸುಜೂದಿನಿಂದ ತಲೆಯೆತ್ತುವುದು.
- ಎರಡು ಸುಜೂದ್‌ಗಳ ನಡುವೆ ಕುಳಿತುಕೊಳ್ಳುವುದು.
- ಸುನ್ನತ್ತಿನ ಪ್ರಕಾರ, ಎಡ ಕಾಲಿನ ಮೇಲೆ ಕುಳಿತುಕೊಂಡು , ಬಲ ಪಾದವನ್ನು ನೆಟ್ಟಗೆ ಮಾಡಿ, ಕಿಬ್ಲಾದ ಕಡೆಗಿರಿಸಬೇಕು.
- ಶಾಂತತೆಯನ್ನು ಪಾಲಿಸುವುದು. ಅಂದರೆ ಪ್ರತಿಯೊಂದು ಕ್ರಿಯೆಯಲ್ಲೂ ಶಾಂತತೆಯನ್ನು ಪಾಲಿಸುವುದು.
- ಕೊನೆಯ ತಶಹ್ಹುದ್.
- ಅದಕ್ಕಾಗಿ ಕುಳಿತುಕೊಳ್ಳುವುದು.
- ಎರಡು ಸಲಾಂಗಳು. ಅಂದರೆ ಎರಡು ಬಾರಿ:

"السَّلام عليكم ورحمة الله."

**"ನಿಮ್ಮ ಮೇಲೆ ಶಾಂತಿ ಮತ್ತು ಅಲ್ಲಾಹನ ಕರುಣೆ ಇರಲಿ"** ಎಂದು ಹೇಳುವುದು.

ನಾವು ಈಗಾಗಲೇ ಹೇಳಿದಂತೆ ಸ್ತಂಭಗಳನ್ನು ಅನುಕ್ರಮವಾಗಿ ನಿರ್ವಹಿಸಬೇಕು . ಉದಾಹರಣೆಗೆ, ರುಕೂ ನಿರ್ವಹಿಸುವುದಕ್ಕೆ ಮುನ್ನ ಉದ್ದೇಶಪೂರ್ವಕ ಸುಜೂದ್ ನಿರ್ವಹಿಸಿದರೆ ನಮಾಝ್ ಅಸಿಂಧುವಾಗುತ್ತದೆ . ಮರೆತು ನಿರ್ವಹಿಸಿದರೆ, ರಕೂ ಮಾಡಲು ಮರಳಬೇಕು ಮತ್ತು ನಂತರ ಸುಜೂದ್ ನಿರ್ವಹಿಸಬೇಕು.

**ಪ್ರಶ್ನೆ 22. ನಮಾಝ್‌ನ ಕಡ್ಡಾಯ ಕಾರ್ಯಗಳನ್ನು ತಿಳಿಸಿ?**

**ಉತ್ತರ: ನಮಾಝ್‌ಗೆ ಎಂಟು ಕಡ್ಡಾಯ ಕಾರ್ಯಗಳಿವೆ. ಅವು:**

1- ತಕ್ಬೀರ್ ಇಹ್ರಾಮಿನ ಹೊರತು ಪಡಿಸಿ ಉಳಿದ ತಕ್ಬೀರ್‌ಗಳು.

2- ಇಮಾಮ್ ಮತ್ತು ಮುನ್ಫರಿದ್ **"ಸಮಿಅಲ್ಲಾಹು ಲಿಮನ್ ಹಮಿದ"** ಹೇಳುವುದು.

3- **"ರಬ್ಬನಾ ವಲಕಲ್ ಹಮ್ದ್"** ಎಂದು ಹೇಳುವುದು.

4- ರುಕೂನಲ್ಲಿ ಒಮ್ಮೆ ಸುಬ್‌ಹಾನ ರಬ್ಬಿಯಲ್ ಅಝೀಮ್ ಹೇಳುವುದು.

5- ಸುಜೂದಿನಲ್ಲಿ ಒಮ್ಮೆ **ಸುಬ್‌ಹಾನ ರಬ್ಬಿಯಲ್ ಅ'ಅಲಾ** ಹೇಳುವುದು.

6- ಎರಡು ಸುಜೂದ್‌ಗಳ ನಡುವೆ **"ರಬ್ಬಿಗ್‌ಫಿರ್ ಲೀ"** ಹೇಳುವುದು.

7- ಮೊದಲ ತಶಹ್ಹುದ್.

8- ಮೊದಲ ತಶಹ್ಹುದ್‌ಗಾಗಿ ಕುಳಿತುಕೊಳ್ಳುವುದು.

**ಪ್ರಶ್ನೆ 23. ನಮಾಝ್‌ನ ಸುನ್ನತ್‌ಗಳು ಯಾವುವು?**

**ಉತ್ತರ: ಹದಿನಾಲ್ಕು ಸುನ್ನತ್‌ಗಳು. ಅವು:**

1- ಪ್ರಾರಂಭದ ತಕ್ಬೀರ್ ನಂತರ **"ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ವತಬಾರಕಸ್ಮುಕ ವತಆಲಾ ಜದ್ದುಕ ವಲಾ ಇಲಾಹ ಗೈರುಕ"** ಹೇಳುವುದು. ಇದನ್ನು ದುಆ ಅಲ್-ಇಸ್ತಿಫ್ತಾಹ್ (ಪ್ರಾರಂಭದ ಪ್ರಾರ್ಥನೆ) ಎಂದು ಕರೆಯಲಾಗುತ್ತದೆ.

2- ಅಭಯ ಯಾಚಿಸುವುದು.

3- ಬಿಸ್ಮಿಲ್ಲಾ ಹೇಳುವುದು.

4- ಆಮೀನ್ ಹೇಳುವುದು.

5- ಸೂರಃ ಅಲ್-ಫಾತಿಹಾ ನಂತರ ಬೇರೆ ಸೂರಾವನ್ನು ಓದುವುದು.

6- ಇಮಾಮ್ ಜೋರಾಗಿ ಪಠಿಸುವುದು.

7- ಸಮಿಅಲ್ಲಾಹು ಲಿಮನ್ ಹಮಿದ ಹೇಳಿದ ಬಳಿಕ : **"ಮಿಲ್‌ಅ ಸ್ಸಮಾವಾತಿ ವಮಿಲ್‌ಅಲ್ ಅರ್ದಿ ವಮಿಲ್‌ಅ ಮಾ ಶಿಅ್‌ತ ಮಿನ್ ಶೈಇನ್ ಬಅ್‌ದ್"** ಹೇಳುವುದು.

8- ರುಕೂನಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಅಂದರೆ : ಎರಡನೆಯ ಮತ್ತು ಮೂರನೆಯ ಬಾರಿ ಮತ್ತು ಅದಕ್ಕಿಂತ ಹೆಚ್ಚು ಸುಬ್‌ಹಾನ ರಬ್ಬಿಯಲ್ ಅಝೀಮ್ ಹೇಳುವುದು.

9- ಸುಜೂದ್‌ನಲ್ಲಿ ಒಂದಕ್ಕಿಂತ ಹೆಚ್ಚು ಬಾರಿ **ಸುಬ್‌ಹಾನ ರಬ್ಬಿಯಲ್ ಅ'ಅಲಾ** ಹೇಳುವುದು.

10- ಎರಡು ಸುಜೂದ್‌ಗಳ ನಡುವೆ ಕುಳಿತುಕೊಳ್ಳುವಾಗ ಒಂದಕ್ಕಿಂತ ಹೆಚ್ಚು ಬಾರಿ **"ರಬ್ಬಿಗ್‌ಫಿರ್ ಲೀ"** ಹೇಳುವುದು.

11- ಕೊನೆಯ ತಶಹ್ಹುದ್‌ನಲ್ಲಿ ಪ್ರವಾದಿ(ಸ) ರವರ ಮೇಲೆ ಸಲಾತ್ (ದುರೂದ್) ಹೇಳುವುದು ನಂತರ ಪ್ರಾರ್ಥಿಸುವುದು.

**ನಾಲ್ಕನೆಯದು:** ಕ್ರಿಯೆಗಳಲ್ಲಿರುವ ಸುನ್ನತ್‌ಗಳು. ಅವುಗಳನ್ನು ಹೈಆತ್ ಎಂದು ಕರೆಯಲಾಗುತ್ತದೆ:

1- ತಕ್ಬೀರ್ -ಎ- ಇಹ್ರಾಮ್‌ನೊಂದಿಗೆ ಕೈಗಳನ್ನು ಎತ್ತುವುದು.

2- ರುಕೂ ಮಾಡುವಾಗ ಕೈಗಳನ್ನು ಎತ್ತುವುದು.

3- ರುಕೂನಿಂದ ತಲೆಯೆತ್ತುವಾಗ ಕೈಗಳನ್ನು ಎತ್ತುವುದು.

4- ಅದರ ನಂತರ ಅವುಗಳನ್ನು ಕೆಳಗೆ ಇರಿಸುವುದು.

5- ಬಲಗೈಯನ್ನು ಎಡಕೈ ಮೇಲೆ ಹಿಡಿಯುವುದು.

6- ಸುಜೂದ್ ಮಾಡುವ ಸ್ಥಳವನ್ನು ನೋಡುವುದು.

7- ನಿಂತಿರುವಾಗ ಪಾದಗಳನ್ನು ಪರಸ್ಪರ ದೂರವಿಡುವುದು.

8- ರುಕೂ ಮಾಡುವಾಗ, ಕೈ ಬೆರಳುಗಳನ್ನು ಹರಡಿಸಿಕೊಂಡು ಮೊಣಕಾಲುಗಳನ್ನು ಬಿಗಿಹಿಡಿಯುವುದು, ಬೆನ್ನನ್ನು ನೇರಕ್ಕೆ ಚಾಚುವುದು ಮತ್ತು ತಲೆಯನ್ನು ಅದರ ಸಮಾನಾಂತರದಲ್ಲಿ ಇರಿಸುವುದು.

9- ಸುಜೂದ್ ಮಾಡುವಾಗ ಸುಜೂದಿನ ಅಂಗಾಂಗಗಳು ನೆಲಕ್ಕೆ ತಾಗಿಕೊಂಡು ಸುಜೂದಿನ ಸ್ಥಳವನ್ನು ಸ್ಪರ್ಶಿಸುವುದು.

10- ಸುಜೂದ್ ಮಾಡುವಾಗ ಕೈಗಳನ್ನು ಪಾರ್ಶ್ವಗಳಿಂದ , ಹೊಟ್ಟೆ ಮತ್ತು ತೊಡೆಗಳಿಂದ ದೂರವಿಡುವುದು. ತೊಡೆಗಳನ್ನು ಕಣಕಾಲುಗಳಿಂದ ಬೇರ್ಪಡಿಸುವುದು , ಮೊಣಕಾಲುಗಳನ್ನು ಪರಸ್ಪರ ಬೇರ್ಪಡಿಸುವುದು , ಪಾದಗಳನ್ನು ನೇರಗೊಳಿಸುವುದು, ಅವರ ಕಾಲ್ಬೆರಳುಗಳ ಅಡಿಭಾಗವನ್ನು ನೆಲಕ್ಕೆ ತಾಗಿಸುವುದು ಮತ್ತು ಕೈಗಳನ್ನು ಭುಜಕ್ಕೆ ಸಮಾನಾಂತರದಲ್ಲಿ ಬೆರಳುಗಳನ್ನು ಜೋಡಿಸಿಕೊಂಡು ಇಡುವುದು.

11- ಎರಡು ಸಾಷ್ಟಾಂಗಗಳ ನಡುವೆ ಮತ್ತು ಮೊದಲ ತಶಹ್ಹುದ್‌ನಲ್ಲಿ ಕುಳಿತುಕೊಳ್ಳುವಾಗ ಇಫ್ತಿರಾಶ್ (ಕಾಲನ್ನು ಹಾಸಬೇಕು) ಮಾಡಬೇಕು, ಮತ್ತು ಎರಡನೆಯ ತಶಹ್ಹುದ್‌ನಲ್ಲಿ ತವರ್ರುಕ್ ಮಾಡಬೇಕು.

12- ಎರಡು ಸಾಷ್ಟಾಂಗಗಳ ನಡುವೆ ಎರಡು ಕೈಗಳನ್ನು ಚಾಚಿಕೊಂಡು, ಬೆರಳುಗಳನ್ನು ಮಡಚಿ ತೊಡೆಯ ಮೇಲೆ ಇಡುವುದು . ತಶಹ್ಹುದ್‌ನಲ್ಲೂ ಹೀಗೆಯೇ ಮಾಡಬೇಕು. ಆದರೆ ಅದರಲ್ಲಿ ಕಿರುಬೆರಳನ್ನು ಮತ್ತು ಉಂಗುರದ ಬೆರಳನ್ನು ಮಡಚಬೇಕು ಮತ್ತು ಹೆಬ್ಬೆರಳನ್ನು ಮಧ್ಯ ಬೆರಳಿನೊಂದಿಗೆ ವೃತ್ತಾಕಾರ ಮಾಡಿ, ಅಲ್ಲಾಹನನ್ನು ಸ್ಮರಿಸುವಾಗ ತೋರುಬೆರಳಿನಿಂದ ಸಂಜ್ಞೆ ಮಾಡಬೇಕು.

13- ಸಲಾಂ ಹೇಳುವಾಗ ಬಲ ಮತ್ತು ಎಡಕ್ಕೆ ತಿರುಗುವುದು.

**ಪ್ರಶ್ನೆ 24. ನಮಾಝನ್ನು ಅಸಿಂಧುಗೊಳಿಸುವ ಕಾರ್ಯಗಳು ಯಾವುವು?**

**ಉತ್ತರ:**

1- ನಮಾಝ್‌ನ ಒಂದು ರುಕ್ನ್ (ಸ್ಥಂಭ) ಅಥವಾ ಶರ್ತ್(ಷರತ್ತು) ಅನ್ನು ಬಿಡುವುದು.

2- ಉದ್ದೇಶಪೂರ್ವಕವಾಗಿ ಮಾತನಾಡುವುದು.

3- ತಿನ್ನುವುದು ಅಥವಾ ಕುಡಿಯುವುದು.

4- ಅನೇಕ ಸತತ ಚಲನೆಗಳು.

5- ನಮಾಝಿನ ಕಡ್ಡಾಯಕಾರ್ಯಗಳಲ್ಲಿ ಒಂದನ್ನು ಉದ್ದೇಶಪೂರ್ವಕವಾಗಿ ತೊರೆಯುವುದು.

**ಪ್ರಶ್ನೆ 25. ಮುಸ್ಲಿಂ ಹೇಗೆ ನಮಾಝ್ ಮಾಡಬೇಕು?**

**ಉತ್ತರ: ನಮಾಝ್‌ನ ವಿಧಾನ ಹೀಗಿರಬೇಕು:**

1- ಸಂಪೂರ್ಣ ದೇಹವನ್ನು ಯಾವುದೇ ವಿಚಲನೆ ಮಾಡದೆ ಅಥವಾ ತಿರುಗದೆ , ಕಿಬ್ಲಾಗೆ ಮುಖಮಾಡಬೇಕು.

2- ನಂತರ ನಿರ್ವಹಿಸಲು ಬಯಸುವ ನಮಾಝಿನ ನಿಯ್ಯತ್ತನ್ನು(ಸಂಕಲ್ಪ) ನಾಲಗೆಯಿಂದ ಹೇಳದೆ ಹೃದಯದಲ್ಲಿ ನಿಯ್ಯತ್ ಮಾಡಬೇಕು.

3- ನಂತರ ತಕ್ಬೀರ್-ಎ- ಇಹ್ರಾಮ್, ಅಂದರೆ ಅಲ್ಲಾಹು ಅಕ್ಬರ್ ಎಂದು ಹೇಳಬೇಕು. ತಕ್ಬೀರ್ ಹೇಳುವಾಗ ಕೈಗಳನ್ನು ಭುಜದ ಸಮಾನಾಂತರಕ್ಕೆ ಎತ್ತಬೇಕು.

4- ನಂತರ ಬಲಗೈಯ ಅಂಗೈಯನ್ನು ಎಡಗೈಯ ಹೊರಬಾಗದಲ್ಲಿಟ್ಟು ಎದೆಯ ಮೇಲಿಡಬೇಕು.

5- ನಂತರ ಪ್ರಾರಂಭದ ಪ್ರಾರ್ಥನೆ ಹೇಳಬೇಕು:**ಅಲ್ಲಾಹುಮ್ಮ ಬಾಯಿದ್ ಬೈನೀ ವ ಬೈನ ಖತಾಯಾಯಾ ಕಮಾ ಬಾಅತ್ತ ಬೈನಲ್ ಮಷ್ರಿಖಿ ವಲ್ ಮಗ್ರಿಬ್ ಅಲ್ಲಾಹುಮ್ಮ ನಖ್ಖಿನಿ ಮಿನ್ ಖತಾಯಾಯಾ ಕಮಾ ಯುನಖ್ಖಸ್ಸ್ ಸವ್ ಬುಲ್ ಅಬ್ಯದು ಮಿನದ್ದನಸ್ ಅಲ್ಲಾಹುಮ್ಮಘ್ಸಿಲ್ನಿ ಮಿನ್ ಖತಾಯಾಯಾ ಬಿಲ್ ಮಾಯಿ ವಸ್ಸಲ್ಜಿ ವಲ್ ಬರ್ದ್ . "ಓ ಅಲ್ಲಾಹ್! ಪೂರ್ವ ಮತ್ತು ಪಶ್ಚಿಮ (ದಿಕ್ಕು)ಗಳ ಮಧ್ಯೆ ಅಂತರವಿರಿಸಿದಂತೆ ನನ್ನ ಮತ್ತು ನನ್ನ ಪಾಪಗಳ ಮಧ್ಯೆ ಅಂತರವಿರಿಸು. ಓ ಅಲ್ಲಾಹ್! ಬಿಳಿ ಉಡುಪನ್ನು ಕೊಳೆಯಿಂದ ಶುದ್ಧೀಕರಿಸುವಂತೆ ನನ್ನನ್ನು ನನ್ನ ಪಾಪಗಳಿಂದ ಶುದ್ಧೀಕರಿಸು. ಓ ಅಲ್ಲಾಹ್! ಮಂಜು, ನೀರು ಮತ್ತು ಹಿಮಗಳಿಂದ ನನ್ನನ್ನು ನನ್ನ ಪಾಪಗಳಿಂದ ತೊಳೆದುಬಿಡು."**

ಅಥವಾ ಹೀಗೆ ಹೇಳಬೇಕು :"**ಸುಬ್ ಹಾನಕಲ್ಲಾಹುಮ್ಮ ವಬಿಹಮ್ದಿಕ ವತಬಾರಕಸ್ಮುಕ ವತಆಲಾ ಜದ್ದುಕ ವಲಾ ಇಲಾಹ ಗೈರುಕ** " **"ಓ ಅಲ್ಲಾಹ್! ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತಾ ನಿನ್ನ ಸ್ತುತಿಯೊಂದಿಗೆ , ನಿನ್ನ ನಾಮವು ಅನುಗ್ರಹೀತವಾಗಿದೆ , ನಿನ್ನ**

ಔನ್ನತ್ಯವು ಅತ್ಯುನ್ನತವಾಗಿದೆ ಮತ್ತು ನೀನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ."

6- ನಂತರ ಅಭಯಯಾಚನೆ ಮಾಡುತ್ತಾ ಹೀಗೆ ಹೇಳಬೇಕು:**ಅಊದು ಬಿಲ್ಲಾಹಿ ಮಿನ ಶ್ಶೈತಾನಿ ರ್ರಜೀಮ್** "ಶಾಪಗ್ರಸ್ತ ಸೈತಾನನಿಂದ ನಾನು ಅಲ್ಲಾಹನಲ್ಲಿ ಆಶ್ರಯ ಪಡೆಯುತ್ತೇನೆ."

7- ನಂತರ ಬಿಸ್ಮಿಲ್ಲಾ ಹೇಳಿ ಸೂರ ಫಾತಿಹ ಪಠಿಸಬೇಕು:

﴿بِسمِ ٱللَّهِ ٱلرَّحمَٰنِ ٱلرَّحِيمِ١ ٱلحَمدُ لِلَّهِ رَبِّ ٱلعَٰلَمِينَ٢ ٱلرَّحمَٰنِ ٱلرَّحِيمِ٣ مَٰلِكِ يَومِ ٱلدِّينِ٤ إِيَّاكَ نَعبُدُ وَإِيَّاكَ نَستَعِينُ٥
ٱهدِنَا ٱلصِّرَٰطَ ٱلمُستَقِيمَ٦ صِرَٰطَ ٱلَّذِينَ أَنعَمتَ عَلَيهِم غَيرِ ٱلمَغضُوبِ عَلَيهِم وَلَا ٱلضَّآلِّينَ﴾

**"ಬಿಸ್ಮಿಲ್ಲಾಹಿ ರ್ರಹ್ಮಾನಿ ರ್ರಹೀಮ್. ಅಲ್-ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್. ಅರ್ರಹ್ಮಾನಿರ್ರಹೀಮ್. ಮಾಲಿಕಿ ಯೌಮಿ ದ್ದೀನ್. ಇಯ್ಯಾಕ ನಅ್‌ಬುದು ವಇಯ್ಯಾಕ ನಸ್ತಈನ್. ಇಹ್ದಿನ ಸ್ಸಿರಾತಲ್ ಮುಸ್ತಕೀಮ್. ಸಿರಾತಲ್ಲದೀನ ಅನ್‌ಅಮ್ತ ಅಲೈಹಿಂ ಗೈರಿಲ್ ಮಗ್‌ದೂಬಿ ಅಲೈಹಿಂ ವಲದ್ದಾಲ್ಲೀನ್"**

(ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹುವಿನ ನಾಮದಿಂದ ಸರ್ವಲೋಕಗಳ ಪರಿಪಾಲಕ ಪ್ರಭುವಾದ ಅಲ್ಲಾಹನಿಗೆ ಸರ್ವಸ್ತುತಿ. ಪರಮ ದಯಾಮಯನೂ, ಕರುಣಾನಿಧಿಯೂ.ಪ್ರತಿಫಲ ದಿನದ ಒಡೆಯನಾದ . ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನೊಂದಿಗೆ ಮಾತ್ರ ಸಹಾಯ ಬೇಡುತ್ತೇವೆ .ನಮ್ಮನ್ನು ನೇರವಾದ ಮಾರ್ಗದಲ್ಲಿ ಮುನ್ನಡೆಸು. ನೀನು ಅನುಗ್ರಹಿಸಿದವರ ಮಾರ್ಗದಲ್ಲಿ; ಕ್ರೋಧಕ್ಕೆ ಪಾತ್ರರಾದವರ ಮಾರ್ಗದಲ್ಲಲ್ಲ. ಪಥಭ್ರಷ್ಟರಾದವರ ಮಾರ್ಗದಲ್ಲೂ ಅಲ್ಲ.) [ಸೂರ ಅಲ್-ಫಾತಿಹ: 1- 7].

ನಂತರ **"ಆಮೀನ್"** ಎಂದು ಹೇಳಬೇಕು. ಅರ್ಥ: **"ಓ ಅಲ್ಲಾಹ್! ನನ್ನಿಂದ ಸ್ವೀಕರಿಸು."**

8- ನಂತರ ಕುರ್‌ಆನಿನಲ್ಲಿ ತನಗೆ ಕಂಠಪಾಠವಿರುವುದನ್ನು ಪಠಿಸಬೇಕು . ಫಜ್ರ್ ನಮಾಝ್‌ನಲ್ಲಿ ಕುರ್‌ಆನ್ ಪಠಣವನ್ನು ದೀರ್ಘಿಸಬೇಕು.

9- **ನಂತರ ರಕೂ ಮಾಡಬೇಕು ಅಂದರೆ :** ಅಲ್ಲಾಹನ ಗೌರವಕ್ಕಾಗಿ ತನ್ನ ಬೆನ್ನನ್ನು ಬಾಗಿಸಬೇಕು, ಮತ್ತು ರುಕೂ ಮಾಡುವಾಗ ಅಲ್ಲಾಹು ಅಕ್ಬರ್ ಎಂದು ಹೇಳಬೇಕು ಮತ್ತು ತನ್ನ ಕೈಗಳನ್ನು ತನ್ನ ಭುಜದ ಮಟ್ಟಕ್ಕೆ ಎತ್ತಬೇಕು. ಬೆನ್ನನ್ನು ಚಾಚಿ ತಲೆಯನ್ನು ಕಡೆಗೆ ಇಡುವುದು.ಮತ್ತು ಮೊಣಕಾಲುಗಳ ಮೇಲೆ ತನ್ನ ಕೈಗಳನ್ನು ತೆರೆದ ಬೆರಳುಗಳಿಂದ ಇರಿಸುವುದು ಸುನ್ನತ್ ಆಗಿರುತ್ತದೆ.

10- ರುಕೂನಲ್ಲಿ ಮೂರು ಬಾರಿ **"ಸುಬ್‌ಹಾನ ರಬ್ಬಿಯಲ್ ಅದೀಮ್"** **(ಮಹೋನ್ನತನಾದ ನನ್ನ ರಬ್ಬಿನ ಪರಿಪಾವನತೆಯನ್ನು ಕೊಂಡಾಡುತ್ತೇನೆ)** ಎಂದು ಹೇಳಬೇಕು. ಅದಕ್ಕಿಂತ ಹೆಚ್ಚು ಹೇಳಲು ಬಯಸಿದರೆ , **"ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್ದಿಕ , ಅಲ್ಲಾಹುಮ್ಮಗ್‌ಫಿರ್ ಲೀ"** **(ಓ ಅಲ್ಲಾಹ್! ನಮ್ಮ ರಬ್ಬೇ! ನಿನ್ನ ಸ್ತುತಿಯೊಂದಿಗೆ ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತೇನೆ . ಓ ಅಲ್ಲಾಹ್! ನನಗೆ ಕ್ಷಮೆ ನೀಡು )** ಎಂದು ಹೇಳಬೇಕು.

11- ನಂತರ **"ಸಮಿಅಲ್ಲಾಹು ಲಿಮನ್ ಹಮಿದ"** **(ಸ್ತುತಿಸಿದವನ ಮಾತನ್ನು ಅಲ್ಲಾಹು ಆಲಿಸಲಿ)** ಎಂದು ಹೇಳುತ್ತಾ ರುಕೂವಿನಿಂದ ತಲೆ ಮೇಲೆತ್ತಬೇಕು ಮತ್ತು ಭುಜಗಳ ವರೆಗೆ ಕೈಗಳನ್ನು ಸಮವನ್ನಾಗಿಸಬೇಕು . ಇಮಾಮರ ಹಿಂದೆ ಇರುವವರು ಸಮಿಅಲ್ಲಾಹು ಲಿಮನ್ ಹಮಿದ ಹೇಳಬಾರದು . ಬದಲಾಗಿ, **"ರಬ್ಬನಾ ವಲಕಲ್ ಹಮ್ದು "** **(ಸ್ತುತಿ ಪ್ರಶಂಸೆಗಳ ಒಡೆಯನೇ! ನಿನಗೆ ಸ್ತುತಿ)** ಎಂದು ಹೇಳಬೇಕು.

12- ರುಕೂವಿನಿಂದ ಎದ್ದ ನಂತರ : **"ರಬ್ಬನಾ ವಲಕಲ್ ಹಮ್ದು ಮಿಲ್‌ಅ ಸ್ಸಮಾವಾತಿ ವಮಿಲ್‌ಅಲ್ ಅರ್‌ದಿ , ವಮಾ ಬೈನಹುಮಾ, ವಮಿಲ್‌ಅ ಮಾ ಶಿಅತ ಮಿನ್ ಶೈಇನ್ ಬಅದು"** **(ನಮ್ಮ ರಬ್ಬೇ! ಸ್ತುತಿ ಪ್ರಶಂಸೆಗಳ ಒಡೆಯನೇ ! ನಿನಗೆ ಸ್ತುತಿ, ಆಕಾಶಗಳು ತುಂಬುವಷ್ಟು, ಭೂಮಿ ತುಂಬುವಷ್ಟು ಮತ್ತು ನೀನು ಇಚ್ಛಿಸುವ ಪ್ರತಿಯೊಂದು ವಸ್ತು ತುಂಬುವಷ್ಟು ನಿನಗೆ ಸ್ತುತಿ)** ಎಂದು ಹೇಳಬೇಕು.

13- ನಂತರ ಮೊದಲನೆಯ ಸುಜೂದ್ ನಿರ್ವಹಿಸಬೇಕು. ಸುಜೂದ್ ಮಾಡುವಾಗ, **"ಅಲ್ಲಾಹು ಅಕ್ಬರ್"** ಎಂದು ಹೇಳಬೇಕು. ಹಣೆ, ಮೂಗು, ಎರಡು ಅಂಗೈಗಳು, ಎರಡು ಮಂಡಿಗಳು, ಎರಡು ಪಾದಗಳ ತುದಿಗಳು ಮುಂತಾದ ಏಳು ಅಂಗಗಳ ಮೇಲೆ ಸುಜೂದ್ ಮಾಡಬೇಕು. ತೋಳುಗಳನ್ನು ಪಾರ್ಶ್ವಗಳಿಂದ ದೂರವಿಡಬೇಕು. ಕೈಗಳನ್ನು ನೆಲದ ಮೇಲೆ ಹರಡಬಾರದು. ಬೆರಳುಗಳ ತುದಿಗಳು ಕಿಬ್ಲಕ್ಕೆ ಮುಖಮಾಡಬೇಕು.

14- ಸುಜೂದಿನಲ್ಲಿ ಮೂರು ಬಾರಿ **"ಸುಬ್‌ಹಾನ ರಬ್ಬಿಯಲ್ ಅಅಲಾ"** **(ಮಹೋನ್ನತನಾದ ನನ್ನ ರಬ್ಬಿನ ಪರಿಪಾವನತೆಯನ್ನು ಕೊಂಡಾಡುತ್ತೇನೆ)** ಎಂದು ಹೇಳಬೇಕು. ಅದಕ್ಕಿಂತ ಹೆಚ್ಚು ಹೇಳಲು ಬಯಸಿದರೆ , **"ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್ದಿಕ , ಅಲ್ಲಾಹುಮ್ಮಗ್‌ಫಿರ್ ಲೀ"** **(ಓ ಅಲ್ಲಾಹ್! ನಮ್ಮ ರಬ್ಬೇ! ನಿನ್ನ ಸ್ತುತಿಯೊಂದಿಗೆ ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತೇನೆ . ಓ ಅಲ್ಲಾಹ್! ನನಗೆ ಕ್ಷಮೆ ನೀಡು )** ಎಂದು ಹೇಳಬೇಕು.

15- ನಂತರ ಅಲ್ಲಾಹು ಅಕ್ಬರ್ ಎನ್ನುತ್ತಾ ಸುಜೂದ್‌ನಿಂದ ತಲೆ ಎತ್ತಬೇಕು.

16- ನಂತರ ಎರಡು ಸಜ್ದಗಳ ಮಧ್ಯೆ ಎಡಪಾದದ ಮೇಲೆ ಕುಳಿತುಕೊಳ್ಳಬೇಕು . ಬಲಪಾದವನ್ನು ನೆಲಕ್ಕೆ ನಾಟಿ ನಿಲ್ಲಿಸಬೇಕು . ಬಲಗೈಯನ್ನು ಬಲ ತೊಡೆಯ ಮೇಲಿಡಬೇಕು. ಕಿರುಬೆರಳು ಮತ್ತು ಉಂಗುರದ ಬೆರಳನ್ನು ಮಡಚಬೇಕು . ತೋರುಬೆರಳನ್ನು ಎತ್ತಿ ಹಿಡಿಯಬೇಕು ಮತ್ತು ಪ್ರಾರ್ಥಿಸುವಾಗ ಅಲುಗಾಡಿಸುತ್ತಿರಬೇಕು . ಹೆಬ್ಬೆರಳ ತುದಿಯನ್ನು ಮಧ್ಯದ ಬೆರಳಿನ ತುದಿಗೆ ತಾಗಿಸಿ ವೃತ್ತಾಕಾರ ಮಾಡಿಕೊಳ್ಳಬೇಕು. ಎಡಗೈಯ ಬೆರಳುಗಳನ್ನು ಹರಡಿಕೊಂಡು ಎಡ ತೊಡೆಯ ಮೇಲಿಡಬೇಕು.

17- ಎರಡು ಸುಜೂದ್‌ಗಳ ನಡುವೆ ಕುಳಿತುಕೊಳ್ಳುವಾಗ ಹೀಗೆ ಹೇಳಬೇಕು :**"ರಬ್ಬಿಗ್‌ಫಿರ್ ಲೀ, ವರ್ಹಮ್‌ನೀ ವಹ್ದಿನೀ ವರ್ಝುಕ್‌ನೀ ವಜ್‌ಬುರ್‌ನೀ ವಆಫಿನೀ"** **(ನನ್ನ ರಬ್ಬೇ!**

**ನನ್ನನ್ನು ಕ್ಷಮಿಸು, ನನಗೆ ಕರುಣೆತೋರು, ನನಗೆ ಮಾರ್ಗದರ್ಶನಮಾಡು,ನನ್ನ ನಷ್ಟವನ್ನು ಸರಿದೂಗಿಸು, ನನಗೆ ಅನ್ನಾಧಾರವನ್ನು ನೀಡು, ನನಗೆ ಸೌಖ್ಯನೀಡು."**

18- ನಂತರ ಮೊದಲನೇ ಸುಜೂದ್ ಮಾಡಿದಂತೆ ಎರಡನೇ ಸುಜೂದ್ ಮಾಡಬೇಕು . ಸುಜೂದ್ ಮಾಡುವಾಗ ಅಲ್ಲಾಹು ಅಕ್ಬರ್ ಹೇಳಬೇಕು.

19- ನಂತರ ಎರಡನೇ ಸುಜೂದ್ ನಿರ್ವಹಿಸಿದ ಬಳಿಕ ಅಲ್ಲಾಹು ಅಕ್ಬರ್ ಎಂದು ಹೇಳುತ್ತಾ ಎದ್ದು ನಿಲ್ಲಬೇಕು . ಮೊದಲನೆಯ ರಕ್‌ಅತ್ ನಿರ್ವಹಿಸಿದಂತೆ ಎರಡನೇ ರಕ್‌ಅತ್ತನ್ನು ನಿರ್ವಹಿಸಬೇಕು. ಆದರೆ ಅದರಲ್ಲಿ ಪ್ರಾರಂಭದ ಪ್ರಾರ್ಥನೆಯಿಲ್ಲ.

20- ಎರಡನೇ ರಕ್‌ಅತ್ ನಿರ್ವಹಿಸಿದ ನಂತರ ಅಲ್ಲಾಹು ಅಕ್ಬರ್ ಎಂದು ಹೇಳುತ್ತಾ , ಎರಡು ಸುಜೂದ್‌ಗಳ ಮಧ್ಯೆ ಕುಳಿತಂತೆ ಕುಳಿತುಕೊಳ್ಳಬೇಕು.

21- ಈ ಕೂರವಿಕೆಯಲ್ಲಿ ಈ ರೀತಿ ತಶಹ್ಹುದ್ ಪಠಿಸಬೇಕು:**"ಅತ್ತಹಿಯ್ಯಾತು ಲಿಲ್ಲಾಹಿ, ವಸ್ಸಲವಾತು ವತ್ತಯ್ಯಿಬಾತು, ಅಸ್ಸಲಾಮು ಅಲೈಕ ಅಯ್ಯುಹ ನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು, ಅಸ್ಸಲಾಮು ಅಲೈನಾ, ವಅಲಾ ಇಬಾದಿಲ್ಲಾಹಿ ಸ್ಸಾಲಿಹೀನ್, ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು , ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹ್" (ಅಭಿವಂದನೆಗಳು, ಪ್ರಾರ್ಥನೆಗಳು ಮತ್ತು ಸತ್ಕರ್ಮಗಳೆಲ್ಲವೂ ಅಲ್ಲಾಹನಿಗೆ. ಓ ಪ್ರವಾದಿಯವರೇ! ತಮ್ಮ ಮೇಲೆ ಅಲ್ಲಾಹನ ಶಾಂತಿ , ಕರುಣೆ ಮತ್ತು ಅನುಗ್ರಹಗಳು ಸದಾ ಇರಲಿ. ನಮ್ಮ ಮೇಲೆ ಮತ್ತು ಅಲ್ಲಾಹನ ಸಜ್ಜನರಾದ ದಾಸರ ಮೇಲೆ ಶಾಂತಿಯಿರಲಿ. ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಮುಹಮ್ಮದ್ ಅವನ ದಾಸನೂ ಸಂದೇಶವಾಹಕನೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ).**ನಂತರ ಇಹಲೋಕ ಮತ್ತು ಪರಲೋಕದ ಒಳಿತಿಗಾಗಿ ತಾನು ಇಷ್ಟಪಡುವ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು.

22- ನಂತರ ಬಲಕ್ಕೆ ತಿರುಗಿ ಅಸ್ಸಲಾಮು ಅಲೈಕುಂ ವರಹ್ಮತುಲ್ಲಾ ಎಂದು ಹೇಳಬೇಕು . ನಂತರ ಎಡಕ್ಕೆ ತಿರುಗಿ ಹಾಗೆಯೇ ಹೇಳಬೇಕು.

23- ನಮಾಝ್ ಮೂರು ಅಥವಾ ನಾಲ್ಕು ರಕ್‌ಅತ್ತಿನದ್ದಾಗಿದ್ದರೆ , ಮೊದಲ ತಶಹ್ಹುದ್‌ನಲ್ಲಿ **"ಅಶ್‌ಹದು ಅನ್ ಲಾಇಲಾಹ ಇಲ್ಲಲ್ಲಾಹ್ ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹು"** ಎಂಬಲ್ಲಿಯ ತನಕ ಪಠಿಸಬೇಕು.

24- ನಂತರ ಅಲ್ಲಾಹು ಅಕ್ಬರ್ ಎಂದು ಹೇಳುತ್ತಾ ಎದ್ದು ನಿಲ್ಲಬೇಕು. ತಕ್ಬೀರ್ ಹೇಳುವಾಗ ಕೈಗಳನ್ನು ಭುಜದ ಸಮಾನಾಂತರಕ್ಕೆ ಎತ್ತಬೇಕು.

25- ನಂತರ ಉಳಿದ ರಕ್‌ಅತ್‌ಗಳನ್ನು ಎರಡನೇ ರಕ್‌ಅತ್ತಿನಂತೆ ನಿರ್ವಹಿಸಬೇಕು . ಆದರೆ ಸೂರ ಫಾತಿಹದ ನಂತರ ಬೇರೆ ಸೂರ ಓದಬೇಕಾಗಿಲ್ಲ.

26- ನಂತರ ತವರ್‍ರುಕ್‌ನಲ್ಲಿ ಕುಳಿತುಕೊಳ್ಳಬೇಕು . ಅಂದರೆ ಬಲಪಾದವನ್ನು ನಾಟಿ ನಿಲ್ಲಿಸಬೇಕು. ಎಡಪಾದವು ಬಲಗಾಲಿನ ಅಡಿಯಿಂದ ಹೊರಬರಬೇಕು . ನೆಲದ ಮೇಲೆ ಕುಳಿತುಕೊಳ್ಳಬೇಕು. ಮೊದಲ ತಶಹ್ಹುದ್‌ನಲ್ಲಿ ವಿವರಿಸಿದಂತೆ ಕೈಗಳನ್ನು ತೊಡೆಗಳ ಮೇಲಿಡಬೇಕು.

27- ಈ ಕೂರವಿಕೆಯಲ್ಲಿ ಸಂಪೂರ್ಣ ತಶಹ್ಹುದ್ ಪಠಿಸಬೇಕು.

28- ನಂತರ ಬಲಕ್ಕೆ ತಿರುಗಿ ಅಸ್ಸಲಾಮು ಅಲೈಕುಂ ವರಹ್ಮತುಲ್ಲಾ ಎಂದು ಹೇಳಬೇಕು . ನಂತರ ಎಡಕ್ಕೆ ತಿರುಗಿ ಹಾಗೆಯೇ ಹೇಳಬೇಕು.

29-

**ಪ್ರಶ್ನೆ 26: ನಮಾಝ್ ನಿರ್ವಹಿಸಿದ ನಂತರ ಪಠಿಸಬೇಕಾದ ಪ್ರಾರ್ಥನೆಗಳು ಯಾವುವು?**

**ಉತ್ತರ:** ಮೂರು ಸಲ "ಅಸ್ತಗ್ಫಿರುಲ್ಲಾಹ್" ಎಂದು ಹೇಳುವುದು.ಅಲ್ಲಾಹನೊಂದಿಗೆ ನಾನು ಕ್ಷಮೆಯನ್ನು ಬೇಡುತ್ತಿದ್ದೇನೆ,

**"ಅಲ್ಲಾಹುಮ್ಮ ಅನ್ತ ಸ್ಸಲಾಮು ವಮಿನ್ಕ ಸ್ಸಲಾಮು ತಬಾರಕ್ತ ಯಾ ದಲ್ ಜಲಾಲಿ ವಲ್ ಇಕ್ರಾಮ್"** **(ಓ ಅಲ್ಲಾಹ್! ನೀನು ಸಲಾಮ್ ಆಗಿರುವೆ, ಮತ್ತು ಸಲಾಮ್ ನಿನ್ನಿಂದಲೇ ಆಗಿದೆ , ಓ ಘನತೆ ಗೌರವಗಳ ಒಡೆಯನೇ ನೀನು ಅನುಗ್ರಹೀತನಾಗಿರುವೆ.)**

"ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ , ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್ , ಅಲ್ಲಾಹುಮ್ಮ ಲಾ ಮಾನಿಅ ಲಿಮಾ ಆ 'ತಯ್ತ ವಲಾ ಮು'ಅತಿಯ ಲಿಮಾ ಮನ 'ಅತ, ವಲಾ ಯನ್‌ಫಉ ದಲ್ ಜದ್ದಿ ಮಿನ್ಕಲ್ ಜದ್ದ್" (ಅಲ್ಲಾಹನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆ , ಆಧಿಪತ್ಯವು ಅವನದಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ, ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ. ಓ ಅಲ್ಲಾಹ್! ನೀನು ನೀಡಿದ್ದನ್ನು ತಡೆಯುವವನಿಲ್ಲ ಮತ್ತು ನೀನು ತಡೆದುದನ್ನು ನೀಡುವವನಿಲ್ಲ, ಮತ್ತು ಸಿರಿವಂತನ ಸಂಪತ್ತು ನಿನಗೆ ವಿರುದ್ಧವಾಗಿ ಯಾವುದೇ ಪ್ರಯೋಜನವನ್ನೂ ನೀಡದು.)

"ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ , ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿ, ಲಾ ಇಲಾಹ ಇಲ್ಲಲ್ಲಾಹು, ವಲಾ ನಅïಬುದು ಇಲ್ಲಾ ಇಯ್ಯಾಹು , ಲಹು ನ್ನಿಅïಮತು ವಲಹುಲ್ ಫದ್ಲು , ವಲಹು ಸ್ಸನಾಉಲ್ ಹಸನು , ಲಾ ಇಲಾಹ ಇಲ್ಲಲ್ಲಾಹು ಮುಖ್ಲಿಸೀನ ಲಹು ದ್ದೀನ ವಲವ್ ಕರಿಹಲ್ ಕಾಫಿರೂನ್." (ಅಲ್ಲಾಹನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆ, ಆಧಿಪತ್ಯವು ಅವನದಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ, ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ. ಅಲ್ಲಾಹನ ಹೊರತು ಶಕ್ತಿಯಾಗಲಿ ಸಾಮರ್ಥ್ಯವಾಗಲಿ ಇಲ್ಲ. ಅಲ್ಲಾಹನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ನಾವು ಅವನನ್ನಲ್ಲದೆ ಇನ್ನಾರನ್ನೂ ಆರಾಧಿಸುವುದಿಲ್ಲ. ಅನುಗ್ರಹವು ಅವನದಾಗಿದೆ, ಔದಾರ್ಯವು ಅವನದಾಗಿದೆ ಮತ್ತು ಉತ್ತಮವಾದ ಪ್ರಶಂಸೆಯು ಅವನಿಗಾಗಿದೆ. ಅಲ್ಲಾಹನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಸತ್ಯನಿಷೇಧಿಗಳು ಅಸಹ್ಯಪಟ್ಟರೂ ಸಹ ನಾವು ಧರ್ಮವನ್ನು ಅವನಿಗೆ ನಿಷ್ಕಳಂಕಗೊಳಿಸುತ್ತೇವೆ.)

"ಸುಬ್‌ಹಾನಲ್ಲಾಹ್" (ಮೂವತ್ತಮೂರು ಬಾರಿ) (ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ).

**"ಅಲ್‌ಹಮ್ದುಲಿಲ್ಲಾಹ್"** (ಮೂವತ್ತಮೂರು ಬಾರಿ) (ಸ್ತುತಿ ಅಲ್ಲಾಹನಿಗೆ).

**"ಅಲ್ಲಾಹು ಅಕ್ಬರ್"** (ಮೂವತ್ತಮೂರು ಬಾರಿ) (ಅಲ್ಲಾಹು ಮಹಾನನಾಗಿದ್ದಾನೆ).

ನಂತರ ನೂರನ್ನು ಪೂರ್ತಿ ಮಾಡಲು ಹೀಗೆ ಹೇಳಬೇಕು:**"ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ , ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್ ."** **(ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ , ಸ್ತುತಿ ಅಲ್ಲಾಹನಿಗೆ, ಅಲ್ಲಾಹು ಮಹಾನನಾಗಿದ್ದಾನೆ. ಅಲ್ಲಾಹನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆ , ಆಧಿಪತ್ಯವು ಅವನದಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ, ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ.)**

- ಫಜ್ರ್ ಮತ್ತು ಮಗ್ರಿಬ್ ನಮಾಝಿನ ನಂತರ ಮೂರು ಬಾರಿ ಹಾಗೂ ಉಳಿದ ನಮಾಝ್‌ಗಳ ನಂತರ ಒಂದು ಬಾರಿ ಸೂರ ಇಖ್ಲಾಸ್ , ಸೂರಃ ಫಲಕ್ ಮತ್ತು ಸೂರಃ ನಾಸ್ ಪಠಿಸಬೇಕು.
- ಆಯತುಲ್-ಕುರ್ಸಿಯನ್ನು ಒಮ್ಮೆ ಪಠಿಸಬೇಕು.

**ಪ್ರಶ್ನೆ 27. ರವಾತಿಬ್ ಸುನ್ನತ್‌ಗಳು ಯಾವುವು? ಅವುಗಳ ಶ್ರೇಷ್ಠತೆಯೇನು?**

**ಉತ್ತರ:**

- ಫಜ್ರ್ ನಮಾಜಿನ ಮುಂಚೆ ಎರಡು ರಕ್‌ಅತ್‌ಗಳು.
- ಝುಹರ್ ನಮಾಜಿನ ಮುಂಚೆ ನಾಲ್ಕು ರಕ್‌ಅತ್‌ಗಳು.
- ಝುಹರ್ ನಮಾಜಿನ ನಂತರ ಎರಡು ರಕ್‌ಅತ್‌ಗಳು.
- ಮಗ್ರಿಬ್ ನಮಾಜಿನ ನಂತರ ಎರಡು ರಕ್‌ಅತ್‌ಗಳು.
- ಇಶಾ ನಮಾಜಿನ ನಂತರ ಎರಡು ರಕ್‌ಅತ್‌ಗಳು.

**ಅದರ ಶ್ರೇಷ್ಠತೆಗಳು ಹೀಗಿವೆ :** ಪ್ರವಾದಿ ﷺ ಹೇಳಿದರು : **"ಯಾರು ಹಗಲು ರಾತ್ರಿ ಸ್ವಯಂಪ್ರೇರಣೆಯಿಂದ ಹನ್ನೆರಡು ರಕ್‌ಅತ್ ನಮಾಝ್ ನಿರ್ವಹಿಸುತ್ತಾರೋ, ಅಲ್ಲಾಹು ಅವರಿಗೆ**

**ಸ್ವರ್ಗದಲ್ಲಿ ಮನೆಯನ್ನು ನಿರ್ಮಿಸುತ್ತಾನೆ."** (ಮುಸ್ಲಿಂ, ಅಹ್ಮದ್ ಮತ್ತಿತರರು ಈ ಹದೀಸನ್ನು ವರದಿ ಮಾಡಿದ್ದಾರೆ)

**ಪ್ರಶ್ನೆ 28. ವಾರದ ಶ್ರೇಷ್ಠ ದಿನಗಳು ಯಾವುವು?**

**ಉತ್ತರ:** ಜುಮುಅ ದಿನ (ಶುಕ್ರವಾರ). ಪ್ರವಾದಿ ﷺ ಹೇಳಿದರು: **"ನಿಮ್ಮ ಅತ್ಯುತ್ತಮ ದಿನಗಳಲ್ಲಿ ಒಂದು ಜುಮುಅ ದಿನವಾಗಿದೆ. ಆ ದಿನದಲ್ಲಿ ಆದಮರನ್ನು ಸೃಷ್ಟಿಸಲಾಯಿತು . ಅದರಲ್ಲಿಯೇ ಅವರು ಮರಣಹೊಂದಿದರು. ಅದರಲ್ಲಿಯೇ ಕಹಳೆ ಊದಲಾಗುವುದು. ಅದರಲ್ಲಿಯೇ ದಿಗ್ಭ್ರಮೆಗೊಳಿಸುವ ಶಬ್ದ ಬರುವುದು. ಆದ್ದರಿಂದ ನೀವು ಜುಮುಅ ದಿನ ನನ್ನ ಮೇಲೆ ಸ್ವಲಾತ್ ಹೆಚ್ಚಿಸಿ , ಏಕೆಂದರೆ ನಿಮ್ಮ ಸ್ವಲಾತ್ ನನ್ನ ಮುಂದೆ ಹಾಜರುಪಡಿಸಲಾಗುತ್ತದೆ."**

**ಶಿಷ್ಯರು ಪ್ರಶ್ನಿಸಿದರು:** ಓ ಅಲ್ಲಾಹನ ಸಂದೇಶವಾಹಕರೇ, ನೀವು ಅಗಲಿರುವಾಗ ನಮ್ಮ ಸ್ವಲಾತ್ ನಿಮಗೆ ಹೇಗೆ ಹಾಜರುಪಡಿಸಲಾಗುತ್ತದೆ ? ಅವರು ಉತ್ತರಿಸಿದರು: **"ಅಲ್ಲಾಹನು ಪ್ರವಾದಿಗಳ ದೇಹಗಳನ್ನು ಮಣ್ಣಿಗೆ ನಿಷಿದ್ಧಗೊಳಿಸಿದ್ದಾನೆ."** [ಅಬು ದಾವೂದ್, ಹಾಗೂ ಇತರರು ವರದಿ ಮಾಡಿದ್ದಾರೆ].

**ಪ್ರಶ್ನೆ 29. ಜುಮುಅ ನಮಾಝಿನ ವಿಧಿಯೇನು?**

**ಉತ್ತರ:** ಅದು ಪ್ರತಿಯೊಬ್ಬ ಪ್ರೌಢ , ಬುದ್ಧಿಯಿರುವ, ನಿವಾಸಿಯಾಗಿರುವ ಮುಸ್ಲಿಂ ಪುರುಷರಿಗೆ ವೈಯುಕ್ತಿಕ ಕಡ್ಡಾಯವಾಗಿದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿ يَٰٓأَيُّهَا ٱلَّذِينَ ءَامَنُوٓاْ إِذَا نُودِيَ لِلصَّلَوٰةِ مِن يَوۡمِ ٱلۡجُمُعَةِ فَٱسۡعَوۡاْ إِلَىٰ ذِكۡرِ ٱللَّهِ وَذَرُواْ ٱلۡبَيۡعَۚ ذَٰلِكُمۡ خَيۡرٞ لَّكُمۡ إِن كُنتُمۡ تَعۡلَمُونَ ﴾

**“ಓ ಸತ್ಯವಿಶ್ವಾಸಿಗಳೇ ! ಶುಕ್ರವಾರದಂದು ನಮಾಝ್‌ಗಾಗಿ ಕರೆಯಲಾದರೆ ಅಲ್ಲಾಹನ ಸ್ಮರಣೆಯೆಡೆಗೆ ವೇಗವಾಗಿ ಧಾವಿಸಿರಿ ಮತ್ತು ವ್ಯಾಪಾರವನ್ನು ವರ್ಜಿಸಿರಿ . ಅದು ನಿಮಗೆ ಉತ್ತಮವಾಗಿದೆ. ನೀವು ಅರಿತವರಾಗಿದ್ದರೆ.”** [ಸೂರ ಅಲ್- ಜುಮುಅ: 9].

**ಪ್ರಶ್ನೆ 30. ಜುಮುಅ ನಮಾಝಿಗೆ ಎಷ್ಟು ರಕ್‌ಅತ್‌ಗಳಿವೆ?**

ಉತ್ತರ - ಜುಮುಅ ನಮಾಝಿಗೆ ಎರಡು ರಕ್‌ಅತ್‌ಗಳು . ಇದರಲ್ಲಿ ಇಮಾಮ್ ಉಚ್ಛ ಸ್ವರದಿಂದ ಪಠಿಸುತ್ತಾರೆ ಮತ್ತು ಇದರ ಮುಂಚೆ ಎರಡು ಪ್ರವಚನಗಳನ್ನು ನಿರ್ವಹಿಸಲಾಗುತ್ತದೆ.

**ಪ್ರಶ್ನೆ 31. ಜುಮುಅ ನಮಾಝನ್ನು ಬಿಟ್ಟುಬಿಡಲು ಅನುಮತಿ ಇದೆಯೇ?**

ಉತ್ತರ: ಧರ್ಮಸಮ್ಮತವಾದ ಕಾರಣವಿಲ್ಲದೆ ಜುಮುಅ ನಮಾಝನ್ನು ಬಿಡಲು ಅನುಮತಿಯಿಲ್ಲ. ಪ್ರವಾದಿ ﷺ ಹೇಳಿದರು: **"ಯಾರು ಅಸಡ್ಡೆಯಿಂದ ಮೂರು ಜುಮಾಗಳನ್ನು ಬಿಡುತ್ತಾನೋ ಅವನ ಹೃದಯದ ಮೇಲೆ ಅಲ್ಲಾಹು ಮುದ್ರೆ ಹಾಕುತ್ತಾನೆ ."** [ಅಬು ದಾವೂದ್, ಹಾಗೂ ಇತರರು ವರದಿ ಮಾಡಿದ್ದಾರೆ].

**ಪ್ರಶ್ನೆ 32. ಜುಮುಅ ದಿನದ ಸುನ್ನತ್‌ಗಳನ್ನು ಉಲ್ಲೇಖಿಸಿ?**

ಉತ್ತರ-

1- ಸ್ನಾನ ಮಾಡುವುದು.
2- ಸುಗಂಧಗಳನ್ನು ಬಳಸುವುದು.
3- ಅತ್ಯುತ್ತಮ ಬಟ್ಟೆಗಳನ್ಧಗಳನ್ನು
4- ಮಸೀದಿಗೆ ಬೇಗ ಹೋಗುವುದು.
5- ಪ್ರವಾದಿ ﷺ ರವರ ಮೇಲೆ ಹೆಚ್ಚು ಹೆಚ್ಚು ಸ್ವಲಾತ್ ಹೇಳುವುದು.
6- ಸೂರಃ ಅಲ್-ಕಹಫ್ ಪಠಿಸುವುದು.
7- ನಡೆದುಕೊಂಡು ಮಸೀದಿಗೆ ಹೋಗುವುದು.
8- ಪ್ರಾರ್ಥನೆ ಸ್ವೀಕಾರಗೊಳ್ಳುವ ಸಮಯದಲ್ಲಿ ಪ್ರಾರ್ಥಿಸುವುದು.

**ಪ್ರಶ್ನೆ 33. ಜಮಾಅತ್ ನಮಾಝ್‌ನ ಶ್ರೇಷ್ಠತೆಯನ್ನು ಉಲ್ಲೇಖಿಸಿ?**

**ಉತ್ತರ:** ಅಬ್ದುಲ್ಲಾ ಬಿನ್ ಉಮರ್ رَضِيَ ٱللَّهُ عَنْهُمَا ರಿಂದ ವರದಿ, ಅಲ್ಲಾಹನ ಸಂದೇಶವಾಹಕರು ಹೇಳುತ್ತಾರೆ: **"ಜಮಾಅತ್ ನಮಾಝ್ ಒಂಟಿಯಾಗಿ ನಿರ್ವಹಿಸುವ ನಮಾಝ್‌ಗಿಂತ ಇಪ್ಪತ್ತೇಳು ಪಟ್ಟು ಉತ್ತಮವಾಗಿದೆ."** [ಮುಸ್ಲಿಮ್].

**ಪ್ರಶ್ನೆ 34: ನಮಾಝ್‌ನಲ್ಲಿ ಭಯ-ಭಕ್ತಿಯಿರುವುದು ಎಂದರೇನು?**

**ಉತ್ತರ:** ಹೃದಯ ಸಾನಿಧ್ಯ ಮತ್ತು ಅಂಗಾಂಗಗಳ ನಿಶ್ಚಲನೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: ﴿قَدۡ أَفۡلَحَ ٱلۡمُؤۡمِنُونَ ١ ٱلَّذِينَ هُمۡ فِي صَلَاتِهِمۡ خَٰشِعُونَ﴾

**"ನಿಸ್ಸಂದೇಹವಾಗಿ ಸತ್ಯವಿಶ್ವಾಸಿಗಳು ಯಶಸ್ವಿಯಾಗಿದ್ದಾರೆ. ಅಂದರೆ ತಮ್ಮ ಪ್ರಾರ್ಥನೆಯಲ್ಲಿ ವಿನಮ್ರರಾಗಿರುವವರು."** [ಸೂರ ಅಲ್-ಮೂಮಿನೂನ್:1,2]

**ಪ್ರಶ್ನೆ 35. ಝಕಾತ್ ಎಂದರೇನು?**

**ಉತ್ತರ:** ಝಕಾತ್ ಎಂದರೆ ಒಂದು ನಿರ್ದಿಷ್ಟ ಸಮಯದಲ್ಲಿ ಕೆಲವು ನಿರ್ದಿಷ್ಟ ಜನರಿಗೆ ಅವರಲ್ಲಿರುವ ನಿರ್ದಿಷ್ಟ ಸಂಪತ್ತಿನಲ್ಲಿರುವ ಕಡ್ಡಾಯ ಹಕ್ಕು.

ಇದು ಇಸ್ಲಾಂ ಧರ್ಮದ ಆಧಾರ ಸ್ತಂಭಗಳಲ್ಲಿ ಒಂದಾಗಿದೆ. ಅದು ಕಡ್ಡಾಯ ದಾನವಾಗಿದ್ದು ಶ್ರೀಮಂತರಿಂದ ತೆಗೆದು ಬಡವರಿಗೆ ನೀಡಲಾಗುತ್ತದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: ﴿وَءَاتُواْ ٱلزَّكَوٰةَ﴾

**"ಮತ್ತು ಝಕಾತ್ ನೀಡಿರಿ."** [ಸೂರ ಅಲ್-ಬಕರ:43].

**ಪ್ರಶ್ನೆ 36. ಐಚ್ಛಿಕ ದಾನ ಎಂದರೇನು?**

ಉತ್ತರ: ಇದು ಝಕಾತ್ ಅಲ್ಲ, ಉದಾಹರಣೆಗೆ ಯಾವುದೇ ಒಳಿತಿನ ಉದ್ದೇಶಕ್ಕಾಗಿ ಯಾವುದೇ ಸಮಯದಲ್ಲಿ ದಾನವನ್ನು ನೀಡುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: ﴿وَأَنفِقُواْ فِي سَبِيلِ ٱللَّهِ﴾

**"ಮತ್ತು ನೀವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ."** [ಸೂರ ಅಲ್-ಬಕರ:195].

**ಪ್ರಶ್ನೆ 37: ಉಪವಾಸ ಎಂದರೇನು?**

ಉತ್ತರ: ಇದು ನಿಯ್ಯತ್‌ನೊಂದಿಗೆ ಮುಂಜಾನೆಯಿಂದ ಸೂರ್ಯಾಸ್ತದವರೆಗೆ ಉಪವಾಸವನ್ನು ಮುರಿಯುವ ವಸ್ತುಗಳಿಂದ ದೂರವಿರುವ ಮೂಲಕ ಅಲ್ಲಾಹನನ್ನು ಆರಾಧಿಸುವುದು. ಇದರಲ್ಲಿ ಎರಡು ವಿಧಗಳಿವೆ:

**ಕಡ್ಡಾಯ ಉಪವಾಸ:** ಉದಾಹರಣೆಗೆ ರಮದಾನ್ ತಿಂಗಳ ಉಪವಾಸ . ಇದು ಇಸ್ಲಾಂ ಧರ್ಮದ ಆಧಾರ ಸ್ತಂಭಗಳಲ್ಲಿ ಒಂದಾಗಿದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

**:**﴿يَا أَيُّهَا الَّذِينَ آمَنُوا كُتِبَ عَلَيْكُمُ الصِّيَامُ كَمَا كُتِبَ عَلَى الَّذِينَ مِنْ قَبْلِكُمْ لَعَلَّكُمْ تَتَّقُونَ﴾

**"ಓ ಸತ್ಯವಿಶ್ವಾಸಿಗಳೇ ! ನಿಮಗಿಂತ ಮುಂಚಿನವರ ಮೇಲೆ ವಿಧಿಸಲಾದಂತೆ ನಿಮ್ಮ ಮೇಲೂ ಉಪವಾಸ ಆಚರಿಸುವುದನ್ನು ಕಡ್ಡಾಯವಾಗಿ ವಿಧಿಸಲಾಗಿದೆ . ನೀವು ಭಯಭಕ್ತಿ ಪಾಲಿಸುವ ಸಲುವಾಗಿ."** [ಸೂರ ಅಲ್-ಬಕರ:183].

**ಕಡ್ಡಾಯವಲ್ಲದ ಉಪವಾಸ:** ಉದಾಹರಣೆಗೆ, ಪ್ರತಿ ಸೋಮವಾರ ಮತ್ತು ಗುರುವಾರದ ಉಪವಾಸ, ಪ್ರತಿ ತಿಂಗಳ ಮೂರು ದಿನಗಳ ಉಪವಾಸ , ಅದು ಪ್ರತಿ ಚಂದ್ರಮಾನ ತಿಂಗಳ 13, 14, 15 ನೇ ದಿನಗಳಾಗಿರುವುದು ಉತ್ತಮ.

**ಪ್ರಶ್ನೆ 38. ರಮದಾನ್ ತಿಂಗಳ ಉಪವಾಸದ ಶ್ರೇಷ್ಟತೆಯನ್ನು ತಿಳಿಸಿ?**

**ಉತ್ತರ:** ಅಬೂ ಹುರೈರ عَنْهُ ರಿಂದ ವರದಿ, ಅಲ್ಲಾಹನ ಸಂದೇಶವಾಹಕರು ಹೇಳುತ್ತಾರೆ: **"ಯಾರು ವಿಶ್ವಾಸದಿಂದ ಮತ್ತು ಪ್ರತಿಫಲದ ನಿರೀಕ್ಷೆಯಿಂದ ರಮದಾನ್ ತಿಂಗಳಲ್ಲಿ ಉಪವಾಸ ಆಚರಿಸುತ್ತಾರೋ, ಅವರ ಹಿಂದಿನ ಪಾಪಗಳು ಕ್ಷಮಿಸಲಾಗುವುದು. "**

(ಮುತ್ತಫಕುನ್ ಅಲೈಹಿ).

**ಪ್ರಶ್ನೆ 39. ರಮದಾನ್ ಅಲ್ಲದ ಬೇರೆ ತಿಂಗಳುಗಳ ಉಪವಾಸದ ಶ್ರೇಷ್ಠತೆಯನ್ನು ತಿಳಿಸಿ?**

**ಉತ್ತರ:** ಅಬೂ ಸಈದ್ ಖುದ್ರಿ رَضِيَ ٱللَّهُ عَنْهُ ರಿಂದ ವರದಿ , ಅಲ್ಲಾಹನ ಸಂದೇಶವಾಹಕರು ಹೇಳುತ್ತಾರೆ: **"ಯಾವುದೇ ಒಬ್ಬ ದಾಸ ಅಲ್ಲಾಹನಿಗಾಗಿ ಒಂದು ದಿನ ಉಪವಾಸ ಆಚರಿಸಿದರೆ ಆ ಉಪವಾಸದ ಕಾರಣದಿಂದ ಅಲ್ಲಾಹು ಅವನ ಮುಖವನ್ನು ನರಕಾಗ್ನಿಯಿಂದ ಎಪ್ಪತ್ತು ಶರತ್ಕಾಲಗಳಷ್ಟು ದೂರವಿಡುತ್ತಾನೆ."** (ಮುತ್ತಫಕುನ್ ಅಲೈಹಿ).

- **"ಎಪ್ಪತ್ತು ಶರತ್ಕಾಲ"** ಅರ್ಥ; ಅಂದರೆ: ಎಪ್ಪತ್ತು ವರ್ಷಗಳು.

**ಪ್ರಶ್ನೆ 40. ಉಪವಾಸವನ್ನು ಅಸಿಂಧುಗೊಳಿಸುವ ಕಾರ್ಯಗಳನ್ನು ತಿಳಿಸಿ?**

**ಉತ್ತರ:**

1- ಉದ್ದೇಶಪೂರ್ವಕವಾಗಿ ತಿನ್ನುವುದು ಮತ್ತು ಕುಡಿಯುವುದು.

2- ಉದ್ದೇಶಪೂರ್ವಕವಾಗಿ ವಾಂತಿ ಮಾಡುವುದು.

3- ಇಸ್ಲಾಂ ಧರ್ಮವನ್ನು ತ್ಯಜಿಸುವುದು.

**ಪ್ರಶ್ನೆ 41. ಉಪವಾಸದ ಸುನ್ನತ್‌ಗಳು ಯಾವುವು?**

**ಉತ್ತರ:**

1- ಇಫ್ತಾರನ್ನು ತ್ವರಿತಗೊಳಿಸುವುದು.

2- ಸುಹೂರ್ ಸೇವಿಸುವುದು ಮತ್ತು ಅದನ್ನು ವಿಳಂಬಿಸುವುದು.

3- ಸತ್ಕರ್ಮಗಳು ಮತ್ತು ಆರಾಧನೆಗಳನ್ನು ಹೆಚ್ಚಿಸುವುದು.

4- ಉಪವಾಸ ಮಾಡುವ ವ್ಯಕ್ತಿಯೊಡನೆ ಯಾರಾದರೂ ಕೆಟ್ಟದಾಗಿ ವರ್ತಿಸಿದರೆ , ನಾನು ಉಪವಾಸಿಗ ಎಂದು ಹೇಳುವುದು.

5- ಇಫ್ತಾರಿನ (ಉಪವಾಸ ಮುರಿಯುವ) ಸಮಯದಲ್ಲಿ ಪ್ರಾರ್ಥಿಸುವುದು.

6- ತಾಜಾ ಖರ್ಜೂರಗಳಿಂದ ಅಥವಾ ಒಣ ಖರ್ಜೂರದಿಂದ , ಇವುಗಳು ಇಲ್ಲದಿದ್ದರೆ ನೀರಿನಿಂದ ಉಪವಾಸ ಮುರಿಯುವುದು.

**ಪ್ರಶ್ನೆ 42: ಹಜ್ಜ್ ಎಂದೇನು?**

**ಉತ್ತರ:** ಹಜ್ಜ್ ಎಂದರೆ ಒಂದು ನಿರ್ದಿಷ್ಟ ಸಮಯದಲ್ಲಿ ಕೆಲವು ನಿರ್ದಿಷ್ಟ ಕರ್ಮಗಳನ್ನು ನಿರ್ವಹಿಸಲು ಅಲ್ಲಾಹನ ಪವಿತ್ರ ಭವನಕ್ಕೆ ತೆರಳುವ ಮೂಲಕ ಅವನನ್ನು ಆರಾಧಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَلِلَّهِ عَلَى النَّاسِ حِجُّ الْبَيْتِ مَنِ اسْتَطَاعَ إِلَيْهِ سَبِيلًا وَمَنْ كَفَرَ فَإِنَّ اللَّهَ غَنِيٌّ عَنِ الْعَالَمِينَ ﴾

**"ಆ ಭವನವನ್ನು ತಲುಪಲು ಸಾಧ್ಯವಿರುವ ಜನರು ಅದರೆಡೆಗೆ ಹಜ್ಜ್ ಯಾತ್ರೆ ಮಾಡುವುದು ಅವರಿಗೆ ಅಲ್ಲಾಹನೊಂದಿಗಿರುವ ಬಾಧ್ಯತೆಯಾಗಿದೆ. ಯಾರಾದರೂ ಅವಿಶ್ವಾಸವಿಡುವುದಾದರೆ ಖಂಡಿತವಾಗಿಯೂ ಅಲ್ಲಾಹು ಸರ್ವಲೋಕದವರಿಂದ ನಿರಪೇಕ್ಷನಾಗಿರುವನು."** [ಸೂರ ಆಲು ಇಮ್ರಾನ್:97].

**ಪ್ರಶ್ನೆ 43. ಹಜ್ಜ್‌ಗೆ ಎಷ್ಟು ಸ್ತಂಭಗಳಿವೆ?**

**ಉತ್ತರ:**

1- ಇಹ್ರಾಮ್.
2- ಅರಫಾದಲ್ಲಿ ನಿಲ್ಲುವುದು.
3- ತವಾಫುಲ್-ಇಫಾದ.
4- ಸಫಾ ಮತ್ತು ಮರ್ವಾ ನಡುವೆ ಸಈ ಮಾಡುವುದು.

**ಪ್ರಶ್ನೆ 44. ಹಜ್ಜ್‌ನ ಶ್ರೇಷ್ಠತೆಗಳನ್ನು ವಿವರಿಸಿ.**

ಉತ್ತರ - ಅಬು ಹುರೈರಾ رَضِيَ اللَّهُ عَنْهُ ರಿಂದ ವರದಿ. ಅಲ್ಲಾಹನ ಪ್ರವಾದಿ ﷺ ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ **:"ಯಾರು ಅಶ್ಲೀಲ ವರ್ತನೆ ಅಥವಾ ಅನೈತಿಕತೆಯನ್ನು**

**ಮಾಡದೇ ಕೇವಲ ಅಲ್ಲಾಹನಿಗಾಗಿ ಹಜ್ಜ್ ನಿರ್ವಹಿಸುತ್ತಾನೋ, ಅವನ ತಾಯಿ ಅವನಿಗೆ ಜನ್ಮ ನೀಡಿದ ದಿನದಂತೆ ಅವನು ಹಜ್ಜಿನಿಂದ ಹಿಂದಿರುಗುವನು .**"(ಅಲ್-ಬುಖಾರಿ ಮತ್ತಿತರರು ಈ ಹದೀಸನ್ನು ವರದಿ ಮಾಡಿದ್ದಾರೆ.

- **"ಅವನ ತಾಯಿ ಅವನಿಗೆ ಜನ್ಮ ನೀಡಿದ ದಿನದಂತೆ"** : ಅಂದರೆ ಯಾವುದೇ ಪಾಪಗಳಿಲ್ಲದೆ.

**ಪ್ರಶ್ನೆ 45. ಉಮ್ರಾ ಎಂದರೇನು?**

**ಉತ್ತರ:** ಉಮ್ರಾ ಎಂದರೆ ಯಾವುದೇ ಸಮಯದಲ್ಲಿ ಕೆಲವು ನಿರ್ದಿಷ್ಟ ಕರ್ಮಗಳನ್ನು ನಿರ್ವಹಿಸಲು ಅಲ್ಲಾಹನ ಪವಿತ್ರ ಭವನಕ್ಕೆ ತೆರಳುವ ಮೂಲಕ ಅವನನ್ನು ಆರಾಧಿಸುವುದು.

**ಪ್ರಶ್ನೆ 46. ಉಮ್ರಾದ ಸ್ತಂಭಗಳನ್ನು ವಿವರಿಸಿ?**

**ಉತ್ತರ:**

1. ಇಹ್ರಾಮ್.
2. ಕಅಬಾಗೆ ತವಾಫ್ (ಪ್ರದಕ್ಷಿಣೆ).
3. ಸಫಾ ಮತ್ತು ಮರ್ವಾ ನಡುವೆ ಸಈ ಮಾಡುವುದು.

**ಪ್ರಶ್ನೆ 47. ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಎಂದರೇನು?**

**ಉತ್ತರ:** ಇಸ್ಲಾಂ ಧರ್ಮವನ್ನು ಹರಡಲು , ಅದನ್ನು ಮತ್ತು ಅದರ ಜನರನ್ನು ರಕ್ಷಿಸಲು ಅಥವಾ ಇಸ್ಲಾಂ ಮತ್ತು ಅದರ ಜನರ ಶತ್ರುಗಳ ವಿರುದ್ಧ ಹೋರಾಡಲು ಪರಿಶ್ರಮಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَجَاهِدُوا بِأَمْوَالِكُمْ وَأَنْفُسِكُمْ فِي سَبِيلِ اللَّهِ ذَلِكُمْ خَيْرٌ لَكُمْ إِنْ كُنْتُمْ تَعْلَمُونَ ﴾

**"ನೀವು (ಯುದ್ಧಕ್ಕಾಗಿ) ಹೊರಡಿರಿ. ನಿಮ್ಮ ಸಂಪತ್ತುಗಳಿಂದಲೂ ಶರೀರಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ನೀವು ಅರಿತವರಾಗಿದ್ದರೆ ಅದು ನಿಮಗೆ ಉತ್ತಮವಾಗಿದೆ."** [ಸೂರ ಅತ್ತೌಬ:41].

*******

# ಪ್ರವಾದಿಯವರ ಜೀವನಚರಿತ್ರೆ ವಿಭಾಗ

**ಪ್ರಶ್ನೆ 1. ನಮ್ಮ ಪ್ರವಾದಿ ಮುಹಮ್ಮದ್ ﷺ ರ ವಂಶ ಯಾವುದು?**

**ಉತ್ತರ:** ಅವರು ಮುಹಮ್ಮದ್ ಬಿನ್ ಅಬ್ದುಲ್ಲಾ ಬಿನ್ ಅಬ್ದುಲ್ ಮುತ್ತಲಿಬ್ ಬಿನ್ ಹಾಶಿಮ್. ಹಾಶಿಂ ಖುರೈಶ್ ಗೋತ್ರದಿಂದ , ಖುರೈಶ್ ಅರಬ್ಬರಿಂದ, ಅರಬ್ಬರು ಇಸ್ಮಾಯೀಲ್‌ರ ವಂಶಜರು , ಇಸ್ಮಾಯೀಲ್ ಇಬ್ರಾಹಿಮರ ಪುತ್ರರು. ಅವರ ಮತ್ತು ನಮ್ಮ ಪ್ರವಾದಿಯ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ.

**ಪ್ರಶ್ನೆ 2. ನಮ್ಮ ಪ್ರವಾದಿಯ ತಾಯಿಯ ಹೆಸರೇನು?**

ಉತ್ತರ: ಆಮಿನಾ ಬಿಂತು ವಹಬ್.

**ಪ್ರಶ್ನೆ 3. ಅವರ ತಂದೆ ಯಾವಾಗ ಮರಣ ಹೊಂದಿದರು?**

**ಉತ್ತರ:** ಪ್ರವಾದಿಯವರು ﷺ ತಾಯಿಯ ಗರ್ಭದಲ್ಲಿರುವಾಗ ಅವರ ತಂದೆ ಮದೀನಾದಲ್ಲಿ ನಿಧನರಾದರು.

**ಪ್ರಶ್ನೆ 4. ಪ್ರವಾದಿ ﷺ ಯಾವಾಗ ಜನಿಸಿದರು?**

**ಉತ್ತರ:** ಆನೆಯ ವರ್ಷದಲ್ಲಿ, ರಬೀಉಲ್-ಅವ್ವಲ್ ತಿಂಗಳಲ್ಲಿ ಸೋಮವಾರ ಜನಿಸಿದರು.

**ಪ್ರಶ್ನೆ 5. ಅವರು ಯಾವ ಪಟ್ಟಣದಲ್ಲಿ ಜನಿಸಿದರು?**

ಉತ್ತರ: ಮಕ್ಕಾದಲ್ಲಿ.

**ಪ್ರಶ್ನೆ 6: ಅವರ ತಾಯಿಯಲ್ಲದೆ ಅವರಿಗೆ ಸ್ತನಪಾನ ಮತ್ತು ಪಾಲನೆ ಪೋಷಣೆ ಮಾಡಿದವರು ಯಾರು?**

**ಉತ್ತರ:**

- ಅವರ ತಂದೆಯ ದಾಸಿ, ಉಮ್ಮು ಐಮನ್
- ಅವರ ಚಿಕ್ಕಪ್ಪ ಅಬೂ ಲಹಬ್ ರ ದಾಸಿ ಸುವೈಬಃ.
- ಹಲೀಮಾ ಸ'ಅದಿಯಾ.

**ಪ್ರಶ್ನೆ 7. ಅವರ ತಾಯಿ ಯಾವಾಗ ಮರಣ ಹೊಂದಿದರು?**

**ಉತ್ತರ:** ಅವರು ಆರು ವರ್ಷದವರಾಗಿದ್ದಾಗ ಅವರ ತಾಯಿ ನಿಧನರಾದರು. ನಂತರ ಅವರ ಅಜ್ಜ ಅಬ್ದುಲ್ ಮುತ್ತಲಿಬ್ ಅವರನ್ನು ಪೋಷಿಸಿದರು.

**ಪ್ರಶ್ನೆ 8. ಅವರ ಅಜ್ಜ ಅಬ್ದುಲ್ ಮುತ್ತಲಿಬ್‌ರ ಮರಣದ ನಂತರ ಅವರನ್ನು ಯಾರು ಪೋಷಿಸಿದರು?**

**ಉತ್ತರ:** ಅವರು ಎಂಟು ವರ್ಷದವರಾಗಿದ್ದಾಗ ಅವರ ಅಜ್ಜ ಅಬ್ದುಲ್ ಮುತ್ತಲಿಬ್ ನಿಧನರಾದರು. ನಂತರ ಅವರ ಚಿಕ್ಕಪ್ಪ ಅಬೂತಾಲಿಬ್ ಅವರನ್ನು ಪೋಷಿಸಿದರು.

**ಪ್ರಶ್ನೆ 9. ಅವರು ತಮ್ಮ ಚಿಕ್ಕಪ್ಪನೊಂದಿಗೆ ಯಾವಾಗ ಸಿರಿಯಾಗೆ ಪ್ರಯಾಣ ಮಾಡಿದರು?**

**ಉತ್ತರ:** ಅವರು ಹನ್ನೆರಡು ವರ್ಷ ವಯಸ್ಸಿನವರಾಗಿದ್ದಾಗ ತಮ್ಮ ಚಿಕ್ಕಪ್ಪನೊಂದಿಗೆ ಸಿರಿಯಾಗೆ ಪ್ರಯಾಣ ಮಾಡಿದರು.

**ಪ್ರಶ್ನೆ 10. ಅವರ ಎರಡನೇ ಪ್ರಯಾಣ ಯಾವಾಗ ಆಯಿತು?**

**ಉತ್ತರ:** ಅವರ ಎರಡನೇ ಪ್ರಯಾಣವು ಖದೀಜಾ رَضِيَ اللَّهُ عَنْهَ ಹಣದಿಂದ ವ್ಯಾಪಾರ ಮಾಡುವ ಸಂದರ್ಭದಲ್ಲಾಯಿತು. ಪ್ರಯಾಣದಿಂದ ಹಿಂದಿರುಗಿದ ನಂತರ ಅವರನ್ನು ಮದುವೆಯಾದರು. ಆಗ ಅವರಿಗೆ ಇಪ್ಪತ್ತೈದು ವರ್ಷ ವಯಸ್ಸಾಗಿತ್ತು.

**ಪ್ರಶ್ನೆ 11. ಖುರೈಷರು ಕಾಬಾವನ್ನು ಯಾವಾಗ ಪುನರ್ ನಿರ್ಮಾಣ ಮಾರ್ಣ ಮಾಡಿದರು?**

**ಉತ್ತರ:** ಅವರಿಗೆ ಮೂವತ್ತೈದು ವರ್ಷ ಪ್ರಾಯವಾಗಿದ್ದಾಗ ಖುರೈಶ್ ಕಾಬಾವನ್ನು ಪುನರ್ನಿರ್ಮಿಸಿದರು.

ಹಜರ್ ಅಸ್ವದನ್ನು ಯಾರು ಇಡಬೇಕೆಂದು ಅವರಲ್ಲಿ ಭಿನ್ನಾಭಿಪ್ರಾಯ ಉಂಟಾದಾಗ ಅವರದನ್ನು ಒಂದು ಬಟ್ಟೆಯಲ್ಲಿಟ್ಟು , ನಾಲ್ಕು ಬುಡಕಟ್ಟುಗಳ ಪ್ರತಿಯೊಬ್ಬ ನಾಯಕನನ್ನು ಆ ಬಟ್ಟೆಯ ತುದಿ ಹಿಡಿದುಕೊಳ್ಳುವಂತೆ ಆದೇಶಿಸಿದರು ಅವರು ಅದನ್ನು ಅದರ ಸ್ಥಳದವರೆಗೆ ಎತ್ತಿದಾಗ, ಪ್ರವಾದಿರವರು ಅದನ್ನು ತನ್ನ ಕೈಯಿಂದ ಇರಿಸಿದನು.. ಈ ರೀತಿ ಸಮಸ್ಯೆಯನ್ನು ಪರಿಹರಿಸಿದರು.

**ಪ್ರಶ್ನೆ 12. ಅವರನ್ನು ಪ್ರವಾದಿಯಾಗಿ ನಿಯುಕ್ತಿಗೊಳಿಸುವಾಗ ಅವರ ವಯಸ್ಸು ಎಷ್ಟು ? ಅವರನ್ನು ಯಾರೆಡೆಗೆ ನಿಯುಕ್ತಿಗೊಳಿಸಲಾಯಿತು?**

**ಉತ್ತರ:** ಆಗ ಅವರಿಗೆ ನಲವತ್ತು ವರ್ಷ ಪ್ರಾಯವಾಗಿತ್ತು . ಅವರಿಗೆ ಸಂಪೂರ್ಣ ಮನುಕುಲಕ್ಕೆ ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರಾಗಿ ನಿಯುಕ್ತಿಗೊಳಿಸಲಾಯಿತು.

**ಪ್ರಶ್ನೆ 13. ಮೊತ್ತಮೊದಲು ದಿವ್ಯವಾಣಿ ಪ್ರಾರಂಭವಾದದ್ದು ಹೇಗೆ?**

**ಉತ್ತರ:** ಸತ್ಯ ಕನಸುಗಳು. ಅವರು ಯಾವುದೇ ಕನಸನ್ನು ಕಂಡರೂ ಅದು ಹಗಲ ಬೆಳಕಿನಂತೆ ನಿಜವಾಗುತ್ತಿತ್ತು.

**ಪ್ರಶ್ನೆ 14. ದಿವ್ಯವಾಣಿ ಅವತೀರ್ಣದ ಮೊದಲು ಅವರ ಸ್ಥಿತಿ ಹೇಗಿತ್ತು? ಮೊತ್ತಮೊದಲು ಅವರಿಗೆ ದಿವ್ಯವಾಣಿ ಅವತೀರ್ಣವಾದದ್ದು ಯಾವಾಗ?**

**ಉತ್ತರ:** ಅವರು ಹಿರಾ ಗುಹೆಯಲ್ಲಿ ಅಲ್ಲಾಹನನ್ನು ಆರಾಧಿಸುತ್ತಿದ್ದರು ಮತ್ತು ಅದಕ್ಕಾಗಿ ಸ್ವತಃ ಸನ್ನದ್ಧರಾಗುತ್ತಿದ್ದರು.

ಅವರು ಗುಹೆಯಲ್ಲಿ ಆರಾಧನೆಯಲ್ಲಿರುವಾಗ ಅವರ ಮೇಲೆ ದಿವ್ಯವಾಣಿ ಅವತೀರ್ಣವಾಯಿತು.

**ಪ್ರಶ್ನೆ 15. ಮೊತ್ತಮೊದಲು ಅವತೀರ್ಣವಾದ ಕುರ್‌ಆನ್ ಸೂಕ್ತಿ ಯಾವುದು?**

ಉತ್ತರ: ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿ٱقۡرَأۡ بِٱسۡمِ رَبِّكَ ٱلَّذِي خَلَقَ١ خَلَقَ ٱلۡإِنسَٰنَ مِنۡ عَلَقٍ٢ ٱقۡرَأۡ وَرَبُّكَ ٱلۡأَكۡرَمُ٣ ٱلَّذِي عَلَّمَ بِٱلۡقَلَمِ٤ عَلَّمَ ٱلۡإِنسَٰنَ مَا لَمۡ يَعۡلَمۡ﴾ [العلق: 1-5].

"ಸೃಷ್ಟಿಸಿರುವ ತಮ್ಮ ಪ್ರಭುವಿನ ನಾಮದಿಂದ ಓದಿರಿ. ಅವನು ಮನುಷ್ಯನನ್ನು ರಕ್ತಪಿಂಡದಿಂದ ಸೃಷ್ಟಿಸಿರುವನು. ಓದಿರಿ ತಮ್ಮ ಪ್ರಭು ಅತ್ಯಧಿಕ ಔದಾರ್ಯವುಳ್ಳವನಾಗಿರುವನು. ಅವನು ಲೇಖನಿಯ ಮೂಲಕ ಕಲಿಸಿಕೊಟ್ಟನು .ಮನುಷ್ಯನಿಗೆ ಅರಿವಿಲ್ಲದಿರುವುದನ್ನು ಅವನು ಕಲಿಸಿಕೊಟ್ಟಿರುವನು. [ಸೂರ ಅಲ್-ಅಲಕ್:1-5]

**ಪ್ರಶ್ನೆ 16. ಅವರ ಸಂದೇಶದಲ್ಲಿ ಮೊತ್ತಮೊದಲು ವಿಶ್ವಾಸವಿಟ್ಟದ್ದು ಯಾರು?**

ಉತ್ತರ - ಪುರುಷರಲ್ಲಿ ಅಬೂಬಕರ್ ಸಿದ್ದೀಕ್ , ಮಹಿಳೆಯರಲ್ಲಿ ಖದೀಜಾ ಬಿಂತು ಖುವೈಲಿದ್ , ಮಕ್ಕಳಲ್ಲಿ ಅಲಿ ಬಿನ್ ಅಬೂತಾಲಿಬ್ , ಸೇವಕರಲ್ಲಿ: ಝೈದ್ ಬಿನ್ ಹಾರಿಸ ಮತ್ತು ಗುಲಾಮರಲ್ಲಿ ಹಬ್ಶಾದ (ಇಥಿಯೋಪಿಯಾ) ಬಿಲಾಲ್ رَضِيَ اللَّهُ عَنْهُم .

**ಪ್ರಶ್ನೆ 17. ಅವರು ಇಸ್ಲಾಮಿನೆಡೆಗೆ ಹೇಗೆ ಆಮಂತ್ರಿಸಿದರು?**

ಉತ್ತರ: ಸುಮಾರು ಮೂರು ವರ್ಷಗಳ ಕಾಲ ರಹಸ್ಯವಾಗಿ ಮತಪ್ರಚಾರ ಮಾಡಿದರು . ನಂತರ ಬಹಿರಂಗವಾಗಿ ಮತಪ್ರಚಾರ ಮಾಡಲು ಪ್ರವಾದಿ ﷺ ಗೆ ಆದೇಶ ನೀಡಲಾಯಿತು.

**ಪ್ರಶ್ನೆ 18. ಬಹಿರಂಗವಾಗಿ ಮತಪ್ರಚಾರ ಮಾಡಲು ಆರಂಭಿಸಿದ ನಂತರ ಪ್ರವಾದಿ ﷺ ಮತ್ತು ಅವರ ಅನುಯಾಯಿಗಳ ಸ್ಥಿತಿ ಹೇಗಿತ್ತು?**

ಉತ್ತರ - ಮುಶ್ರಿಕರು (ಬಹುದೇವತಾವಾದಿಗಳು) ಪ್ರವಾದಿ ಮತ್ತು ಮುಸ್ಲಿಮರನ್ನು ತೀವ್ರವಾಗಿ ಹಿಂಸಿಸಿದರು. ನಂತರ ವಿಶ್ವಾಸಿಗಳಿಗೆ ಹಬ್ಶಾದ (ಇಥಿಯೋಪಿಯಾ) ನಜಾಶಿ ಅರಸನೆಡೆಗೆ ವಲಸೆ ಹೋಗಲು ಆದೇಶ ನೀಡಲಾಯಿತು.

ಮುಶ್ರಿಕರು (ಬಹುದೇವತಾವಾದಿಗಳು) ಪ್ರವಾದಿ ﷺ ರನ್ನು ಹಿಂಸಿಸಲು ಮತ್ತು ಕೊಲ್ಲಲು ಸರ್ವಾನುಮತದಿಂದ ತೀರ್ಮಾನಿಸಿದಾಗ ಅಲ್ಲಾಹು ಅವರನ್ನು ರಕ್ಷಿಸಿದನು . ಮತ್ತು ಅವರ ಚಿಕ್ಕಪ್ಪ ಅಬು ತಾಲಿಬ್ ಅವರನ್ನು ರಕ್ಷಿಸಬೇಕೆಂದು ಅವರ ಆಸರೆಯಲ್ಲಿ ಇರಿಸಿದನು.

**ಪ್ರಶ್ನೆ 19. ಪ್ರವಾದಿ ﷺರ ಪ್ರವಾದಿತ್ವದ ಹತ್ತನೇ ವರ್ಷದಲ್ಲಿ ಯಾರು ನಿಧನರಾದರು?**

**ಉತ್ತರ:** ಪ್ರವಾದಿಯ ಚಿಕ್ಕಪ್ಪ ಅಬೂತಾಲಿಬ್ ಮತ್ತು ಅವರ ಪತ್ನಿ ಖದೀಜಾ رَضِيَ اللَّهُ عَنْهَا ನಿಧನರಾದರು.

**ಪ್ರಶ್ನೆ 20. ಇಸ್ರಾ (ರಾತ್ರಿಯ ಪ್ರಯಾಣ) ಮತ್ತು ಮಿ'ಅರಾಜ್ (ಆಕಾಶಯಾನ) ಯಾವಾಗ ಸಂಭವಿಸಿತು?**

**ಉತ್ತರ:** ಅವರು ಐವತ್ತು ವರ್ಷ ವಯಸ್ಸಿನವರಾಗಿದ್ದಾಗ . ಆಗ ಅವರ ಮೇಲೆ ದೈನಂದಿನ ಐದು ಹೊತ್ತಿನ ನಮಾಝುನ್ನು ಕಡ್ಡಾಯಗೊಳಿಸಲಾಯಿತು.

**ಇಸ್ರಾ :** ಮಸ್ಜಿದುಲ್ ಹರಾಮಿನಿಂದ -ಅಕ್ಸಾ ಮಸೀದಿವರೆಗಿನ ರಾತ್ರಿಯ ಪ್ರಯಾಣ.

ಮಿ'ಅರಾಜ್: ಇದು ಅಕ್ಸಾ ಮಸೀದಿಯಿಂದ ಆಕಾಶಕ್ಕೆ ಸಿದ್ರತುಲ್-ಮುಂತಾಹಾದವರೆಗಿನ ಆಕಾಶಯಾನ.

**ಪ್ರಶ್ನೆ 21. ಪ್ರವಾದಿ ﷺ ಮಕ್ಕಾದ ಹೊರಗಿನ ಜನರನ್ನು ಹೇಗೆ ಆಹ್ವಾನಿಸುತ್ತಿದ್ದರು?**

**ಉತ್ತರ:** ಅವರು ತ್ವಾಯಿಫ್‌ನ ಜನರನ್ನು ಇಸ್ಲಾಮಿಗೆ ಕರೆದರು ಮತ್ತು ಹಜ್ಜಿನ ಸಮಯದಲ್ಲಿ ಹಾಗೂ ಜನ ಸೇರುವೆಡೆ ಮತಪ್ರಚಾರ ಮಾಡಿದರು. ಕೊನೆಗೆ ಮದೀನಾದ ಅನ್ಸಾರ್ ಜನರ ಪೈಕಿ ಕೆಲವರು ಬಂದು ಅವರಲ್ಲಿ ವಿಶ್ವಾಸವಿಟ್ಟರು. ಅವರು ಪ್ರವಾದಿಗೆ ﷺ ಬೆಂಬಲ ನೀಡುವ ಪ್ರತಿಜ್ಞೆ ಮಾಡಿದರು.

**ಪ್ರಶ್ನೆ 22. ಪ್ರವಾದಿ ﷺ ಮಕ್ಕಾದಲ್ಲಿ ಮತಪ್ರಚಾರ ಮಾಡುತ್ತಾ ಎಷ್ಟು ವರ್ಷಗಳ ಕಾಲ ತಂಗಿದ್ದರು?**

ಉತ್ತರ: ಹದಿಮೂರು ವರ್ಷ.

**ಪ್ರಶ್ನೆ 23: ಪ್ರವಾದಿ(ಸ) ಎಲ್ಲಿಗೆ ವಲಸೆ ಹೋದರು?**

ಉತ್ತರ: ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋದರು.

**ಪ್ರಶ್ನೆ 24. ಅವರು ಮದೀನಾದಲ್ಲಿ ಎಷ್ಟು ಸಮಯ ಇದ್ದರು?**

**ಉತ್ತರ:** ಹತ್ತು ವರ್ಷ.

**ಪ್ರಶ್ನೆ 25. ಮದೀನಾದಲ್ಲಿ ಅವರ ಮೇಲೆ ಕಡ್ಡಾಯಗೊಳಿಸಲಾದ ಇಸ್ಲಾಮಿನ ಕಾನೂನುಗಳು ಯಾವುವು?**

**ಉತ್ತರ:** ಝಕಾತ್, ಉಪವಾಸ, ಹಜ್ಜ್, ಜಿಹಾದ್, ಅಝಾನ್ (ಪ್ರಾರ್ಥನೆಗೆ ಕರೆ) ಮತ್ತು ಇಸ್ಲಾಮಿನ ಇತರೆ ಕಾನೂನುಗಳು ಕಡ್ಡಾಯಗೊಳಿಸಲಾದವು.

**ಪ್ರಶ್ನೆ 26. ಪ್ರವಾದಿ ﷺ ರ ಪ್ರಮುಖ ಯುದ್ಧಗಳು ಯಾವುವು?**

**ಉತ್ತರ:**

- ಬದ್ರ್ ಮಹಾಯುದ್ಧ.
- ಉಹುದ್ ಯುದ್ಧ.
- ಅಹ್‌ಝಾಬ್ ಯುದ್ಧ.
- ಮಕ್ಕಾ ವಿಜಯದ ಯುದ್ಧ.

**ಪ್ರಶ್ನೆ 27. ಕೊನೆಯದಾಗಿ ಅವತೀರ್ಣವಾದ ಕುರ್‌ಆನಿನ ಸೂಕ್ತಿ ಯಾವುದು?**

ಉತ್ತರ: ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَٱتَّقُواْ يَوما تُرجَعُونَ فِيهِ إِلَى ٱللَّهِ ثُمَّ تُوَفَّىٰ كُلُّ نَفس مَّا كَسَبَت وَهُم لَا يُظلَمُونَ﴾ [البقرة: 281].

**"ನಿಮ್ಮನ್ನು ಅಲ್ಲಾಹನೆಡೆಗೆ ಮರಳಿಸಲಾಗುವ ಒಂದು ದಿನವನ್ನು ನೀವು ಭಯಪಡಿರಿ . ತರುವಾಯ ಪ್ರತಿಯೊಬ್ಬನಿಗೂ ಅವನು ಮಾಡಿರುವುದರ ಪ್ರತಿಫಲವನ್ನು ಪೂರ್ಣವಾಗಿ ನೀಡಲಾಗುವುದು. ಅವರೊಂದಿಗೆ (ಕಿಂಚಿತ್ತೂ) ಅನ್ಯಾಯವೆಸಗಲಾಗದು."** [ಸೂರ ಅಲ್-ಬಕರ:281].

**ಪ್ರಶ್ನೆ 28: ಪ್ರವಾದಿ ﷺ ಯಾವಾಗ ನಿಧನರಾದರು? ಆಗ ಅವರ ವಯಸ್ಸು ಎಷ್ಟಾಗಿತ್ತು?**

**ಉತ್ತರ:** ಅವರು ಹಿಜ್ರ 11ನೇ ವರ್ಷ ರಬೀಉಲ್-ಅವ್ವಲ್ ತಿಂಗಳಲ್ಲಿ ತಮ್ಮ 63ನೇ ವಯಸ್ಸಿನಲ್ಲಿ ನಿಧನರಾದರು.

**ಪ್ರಶ್ನೆ 29: ಪ್ರವಾದಿ ﷺ ರ ಪತ್ನಿಯರನ್ನು ಹೆಸರಿಸಿ?**

**ಉತ್ತರ:**

1. ಖದೀಜಾ ಬಿಂತು ಖುವೈಲಿದ್ رَضِيَ اللَّهُ عَنْهَا
2. ಸೌದಾ ಬಿಂತು ಝುಮ್ಅ رَضِيَ اللَّهُ عَنْهَا
3. ಆಯಿಶ ಬಿಂತು ಅಬೂಬಕರ್ رَضِيَ اللَّهُ عَنْهَا
4. ಹಫ್ಸಾ ಬಿಂತು ಉಮರ್ رَضِيَ اللَّهُ عَنْهَا
5. ಝೈನಬ್ ಬಿಂತು ಖುಝೈಮಾ رَضِيَ اللَّهُ عَنْهَا
6. ಉಮ್ಮು ಸಲಮಾ ಹಿಂದ್ ಬಿಂತು ಅಬೂ ಉಮಯ್ಯ رَضِيَ اللَّهُ عَنْهَا
7. ಉಮ್ಮು ಹಬೀಬ ರಮ್ಲಾ ಬಿಂತು ಅಬೂ ಸುಫ್ಯಾನ್ رَضِيَ اللَّهُ عَنْهَا
8. ಜುವೈರಿಯಾ ಬಿಂತು ಹಾರಿಸ್ رَضِيَ اللَّهُ عَنْهَا
9. ಮೈಮೂನಾ ಬಿಂತು ಹಾರಿಸ್ رَضِيَ اللَّهُ عَنْهَا
10. ಸಫಿಯ್ಯಾ ಬಿಂತು ಹುಯಯ್ رَضِيَ اللَّهُ عَنْهَا
11. ಝೈನಬ್ ಬಿಂತು ಜಹಶ್ رَضِيَ اللَّهُ عَنْهَا

**ಪ್ರಶ್ನೆ 30. ಪ್ರವಾದಿ ﷺ ರಿಗೆ ಎಷ್ಟು ಮಕ್ಕಳು?**

**ಉತ್ತರ:**

**ಮೂರು ಗಂಡುಮಕ್ಕಳು:**

1. ಅಲ್-ಖಾಸಿಮ್, ಇದು ಪ್ರವಾದಿಯ ಕುನಿಯ್ಯತ್ ಆಗಿತ್ತು.
2. ಅಬ್ದುಲ್ಲಾ.
3. ಇಬ್ರಾಹಿಂ.

**ಹೆಣ್ಣು ಮಕ್ಕಳು:**

1. ಫಾತಿಮಾ.
2. ರುಕಯ್ಯ.
3. ಉಮ್ಮ್ ಕುಲ್ಸೂಮ್.
4. ಝೈನಬ್.

ಇಬ್ರಾಹೀಮರ ಹೊರತು ಎಲ್ಲಾ ಮಕ್ಕಳು ಖಾದಿಜಾ رَضِيَ اللَّهُ عَنْهَا ರಿಂದ ಹುಟ್ಟಿದ್ದು . ಫಾತಿಮಾರ ಹೊರತು ಉಳಿದವರೆಲ್ಲರೂ ಪ್ರವಾದಿಯ ಜೀವಂತಕಾಲದಲ್ಲೇ ಮರಣಹೊಂದಿದರು . ಫಾತಿಮಾ ಪ್ರವಾದಿಯವರು ನಿಧನರಾಗಿ ಆರು ತಿಂಗಳ ಬಳಿಕ ನಿಧನರಾದರು.

**ಪ್ರಶ್ನೆ 31. ಪ್ರವಾದಿ ﷺ ರ ಕೆಲವು ಜನ್ಮಜಾತ ಗುಣಲಕ್ಷಣಗಳನ್ನು ಉಲ್ಲೇಖಿಸಿ?**

ಉತ್ತರ: ಪ್ರವಾದಿ ﷺ ರು ಅತೀ ಗಿಡ್ಡ ಅಥವಾ ಅತೀ ಎತ್ತರವೂ ಆಗಿರಲಿಲ್ಲ. ಬದಲಾಗಿ ಅವರು ಪುರುಷರ ಪೈಕಿ ಮಧ್ಯಮದವರಾಗಿದ್ದರು . ಅವರು ಕೆಂಪು ಮಿಶ್ರಿತ ಬಿಳಿ ಬಣ್ಣದವರಾಗಿದ್ದರು . ದಪ್ಪನೆಯ ಗಡ್ಡ, ಅಗಲವಾದ ಕಣ್ಣುಗಳು, ದೊಡ್ಡ ಬಾಯಿ, ಕಪ್ಪು ಕೂದಲು, ಬೃಹದಾಕಾರದ ಭುಜಗಳು, ಉತ್ತಮ ಪರಿಮಳ ಹೊಂದಿದವರಾಗಿದ್ದರು.

**ಪ್ರಶ್ನೆ 32. ಪ್ರವಾದಿ ﷺ ತನ್ನ ಸಮುದಾಯವನ್ನು ಯಾವುದರ ಮೇಲೆ ಬಿಟ್ಟಗಲಿದರು?**

ಉತ್ತರ: ಅವರು ತಮ್ಮ ಸಮುದಾಯವನ್ನು ಬೆಳ್ಳಗಿನ ಪ್ರಕಾಶದ ಮೇಲೆ ಬಿಟ್ಟಗಲಿದರು . ಅದರ ರಾತ್ರಿ ಹಗಲಿನಂತಿದೆ . ನಾಶ ಹೊಂದಿದವನಲ್ಲದೆ ಇನ್ನಾರೂ ಅದರಿಂದ ವಿಚಲಿತರಾಗಲಾರರು. ಅವರು ತಮ್ಮ ಸಮುದಾಯವನ್ನು ಎಲ್ಲಾ ಒಳಿತುಗಳೆಡೆಗೆ ಮಾರ್ಗದರ್ಶಿಸಿದರು ಮತ್ತು ಎಲ್ಲಾ ಕೆಡುಕುಗಳಿಂದ ಎಚ್ಚರಿಕೆ ನೀಡಿದರು.

*******

# ತಫ್ಸೀರ್ (ಕುರ್‌ಆನ್ ವ್ಯಾಖ್ಯಾನ) ವಿಭಾಗ

**ಪ್ರಶ್ನೆ 1. ಸೂರಃ ಅಲ್-ಫಾತಿಹಾವನ್ನು ಓದಿರಿ ಮತ್ತು ವಿವರಿಸಿರಿ?**

ಉತ್ತರ: ಸೂರ ಅಲ್-ಫಾತಿಹಾ ಮತ್ತು ಅದರ ವ್ಯಾಖ್ಯಾನ:

﴿بِسْمِ اللَّهِ الرَّحْمَنِ الرَّحِيمِ ١ ٱلۡحَمۡدُ لِلَّهِ رَبِّ ٱلۡعَٰلَمِينَ٢ ٱلرَّحۡمَٰنِ ٱلرَّحِيمِ٣ مَٰلِكِ يَوۡمِ ٱلدِّينِ٤ إِيَّاكَ نَعۡبُدُ وَإِيَّاكَ نَسۡتَعِينُ٥
ٱهۡدِنَا ٱلصِّرَٰطَ ٱلۡمُسۡتَقِيمَ٦ صِرَٰطَ ٱلَّذِينَ أَنۡعَمۡتَ عَلَيۡهِمۡ غَيۡرِ ٱلۡمَغۡضُوبِ عَلَيۡهِمۡ وَلَا ٱلضَّآلِّينَ7﴾ [الفاتحة: 1-7].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ .ಸರ್ವಲೋಕಗಳ ಪರಿಪಾಲಕನಾಗಿರುವ ಅಲ್ಲಾಹುವಿಗೆ ಸ್ತುತಿ. ಪರಮ ದಯಾಳು, ಕರುಣಾನಿಧಿ.ಪ್ರತಿಫಲ ದಿನದ ಒಡೆಯ. ನಾವು ನಿನ್ನನ್ನು ಮಾತ್ರ ಆರಾಧಿಸುವೆವು . ನಾವು ನಿನ್ನೊಂದಿಗೆ ಮಾತ್ರ ಸಹಾಯವನ್ನು ಬೇಡುವೆವು.ನಮ್ಮನ್ನು ನೇರವಾದ ಮಾರ್ಗದಲ್ಲಿ ಮುನ್ನಡೆಸು. ನೀನು ಅನುಗ್ರಹಿಸಿದವರ ಮಾರ್ಗದಲ್ಲಿ; ಕ್ರೋಧಕ್ಕೆ ಪಾತ್ರರಾದವರ ಮಾರ್ಗದಲ್ಲಲ್ಲ. ಪಥಭ್ರಷ್ಟರಾದವರ ಮಾರ್ಗದಲ್ಲೂ ಅಲ್ಲ.[ಸೂರ ಅಲ್-ಫಾತಿಹ: 1- 7].

**ತಫ್ಸೀರ್ (ವಿವರಣೆ).**

ಇದನ್ನು ಸೂರ ಅಲ್-ಫಾತಿಹ ಎಂದು ಕರೆದಿರುವುದು ಏಕೆಂದರೆ ಇದರೊಂದಿಗೆ ಅಲ್ಲಾಹನ ಗ್ರಂಥ ಆರಂಭವಾಗುತ್ತದೆ. ﴿بِسۡمِ ٱللَّهِ ٱلرَّحۡمَٰنِ ٱلرَّحِيمِ1﴾

(ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ ) ಅಲ್ಲಾಹನ ಹೆಸರಿನಲ್ಲಿ ನಾನು ಕುರ್ಆನ್ ಓದಲು ಪ್ರಾರಂಭಿಸುತ್ತೇನೆ . ಅವನ ಹೆಸರನ್ನು ಪ್ರಸ್ತಾಪಿಸುವ ಮೂಲಕ ಸಹಾಯಯಾಚಿಸುತ್ತಾ ಆತನ ಸಮೃದ್ಧಿ ಬಯಸುತ್ತೇನೆ.

(الله)

(ಅಲ್ಲಾಹು) ಸತ್ಯ ಆರಾಧ್ಯ. ಅವನಲ್ಲದೆ ಬೇರೆ ಯಾರನ್ನೂ ಈ ಹೆಸರಿನಿಂದ ಕರೆಯಲಾಗುವುದಿಲ್ಲ.

(الرَّحْمَن)

ದಯಾಳು, ಕರುಣಾಮಯಿ: ಅಂದರೆ: ವಿಶಾಲವಾದ ಕರುಣೆ; ಅವನ ಕರುಣೆಯು ಎಲ್ಲಾ ವಸ್ತುಗಳನ್ನು ಆವರಿಸಿದೆ.

(الرَّحِيم)

ಕರುಣಾಮಯಿ: ಅಂದರೆ ವಿಶ್ವಾಸಿಗಳೊಂದಿಗೆ ವಿಶೇಷ ಕರುಣೆಯುಳ್ಳವನು

2الْحَمْدُ لِلَّهِ رَبِّ الْعَالَمِينَ)

ಸರ್ವಲೋಕಗಳ ಪರಿಪಾಲಕನಾಗಿರುವ ಅಲ್ಲಾಹುವಿಗೆ ಸ್ತುತಿ. ಅಂದರೆ ಎಲ್ಲಾ ರೀತಿಯ ಸ್ತುತಿ ಮತ್ತು ಪರಿಪೂರ್ಣತೆ ಅಲ್ಲಾಹನಿಗೆ ಮಾತ್ರ ಸೀಮಿತ.

3-الرَّحْمَنِ الرَّحِيمِ

ಪರಮ ದಯಾಳು, ಕರುಣಾಮಯಿ. ಅಂದರೆ, ಅವನ ದಯೆ ಎಲ್ಲವನ್ನೂ ಆವರಿಸಿದೆ ಮತ್ತು ಅವನ ಕರುಣೆ ವಿಶ್ವಾಸಿಗಳಿಗೆ ತಲುಪುವುದು.

-4مَالِكِ يَوْمِ الدِّينِ

ಪ್ರತಿಫಲ ದಿನದ ಒಡೆಯ. ಅದು ಪುನರುತ್ಥಾನದ ದಿನ.

-5إِيَّاكَ نَعْبُدُ وَإِيَّاكَ نَسْتَعِينُ

ಅಂದರೆ ನಾವು ನಿನ್ನನ್ನು ಮಾತ್ರ ಆರಾಧಿಸುವೆವು . ನಾವು ನಿನ್ನೊಂದಿಗೆ ಮಾತ್ರ ಸಹಾಯವನ್ನು ಬೇಡುವೆವು.

6-اهْدِنَا الصِّرَاطَ الْمُسْتَقِيمَ

ನಮ್ಮನ್ನು ನೇರವಾದ ಮಾರ್ಗದಲ್ಲಿ ಮುನ್ನಡೆಸು . ಅಂದರೆ ಅದು ಇಸ್ಲಾಂ ಮತ್ತು ಸುನ್ನತ್ತಿನೆಡೆಗೆ ಮಾರ್ಗದರ್ಶನ.

7-صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ

ನೀನು ಅನುಗ್ರಹಿಸಿದವರ ಮಾರ್ಗದಲ್ಲಿ ; ಕ್ರೋಧಕ್ಕೆ ಪಾತ್ರರಾದವರ ಮಾರ್ಗದಲ್ಲಲ್ಲ . ಪಥಭ್ರಷ್ಟರಾದವರ ಮಾರ್ಗದಲ್ಲೂ ಅಲ್ಲ . ಅಂದರೆ ಅಂಬಿಯಾಗಳ ಮತ್ತು ಸಲಫುಸ್ಸಾಲಿಹೀನರ ಮಾರ್ಗದಲ್ಲಿ ಯಹೂದರು ಮತ್ತು ಕ್ರೈಸ್ತರ ಮಾರ್ಗದಲ್ಲಲ್ಲ.

- ಇದನ್ನು ಓದಿದ ನಂತರ ಆಮೀನ್ ಹೇಳುವುದು ಸುನ್ನತ್ತಾಗಿದೆ: (آمين) ಅರ್ಥ: ನಮಗೆ ಉತ್ತರ ಕೊಡು.

**ಪ್ರಶ್ನೆ 2. ಸೂರ ಅಝ್ಝುಲ್‌ಝುಲ ಓದಿ ಮತ್ತು ಅದನ್ನು ವಿವರಿಸಿ?**

ಉತ್ತರ: ಸೂರ ಅಝ್ಝುಲ್‌ಝುಲ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿إِذَا زُلزِلَتِ ٱلأَرضُ زِلزَالَهَا١ وَأَخرَجَتِ ٱلأَرضُ أَثقَالَهَا٢ وَقَالَ ٱلإِنسَٰنُ مَا لَهَا٣ يَومَئِذ تُحَدِّثُ أَخبَارَهَا٤ بِأَنَّ رَبَّكَ أَوحَىٰ لَهَا٥ يَومَئِذ يَصدُرُ ٱلنَّاسُ أَشتَاتا لِّيُرَواْ أَعمَٰلَهُم٦ فَمَن يَعمَل مِثقَالَ ذَرَّةٍ خَيرا يَرَهُۥ٧ وَمَن يَعمَل مِثقَالَ ذَرَّة شَرّا يَرَهُۥ8﴾ [الزلزلة: 1-8].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹುವಿನ ನಾಮದಿಂದ.

**ಭೂಮಿಯನ್ನು ಕಂಪಿಸಲಾಗುವಾಗ. ಅದರ ಭಯಾನಕವಾದ ಆ ಕಂಪನ .ಭೂಮಿಯು ಅದರ ಭಾರಗಳನ್ನು ಹೊರ ತಳ್ಳುವಾಗ.ಮತ್ತು 'ಅದಕ್ಕೇನಾಯಿತು?' ಎಂದು ಮನುಷ್ಯನು ಹೇಳುವಾಗ**

**ಆ ದಿನದಂದು ಅದು (ಭೂಮಿಯು) ತನ್ನ ವೃತ್ತಾಂತಗಳನ್ನು ತಿಳಿಸಿಕೊಡುವುದು .ತಮ್ಮ ಪ್ರಭು ಅದಕ್ಕೆ ಸಂದೇಶ ನೀಡಿದ ನಿಮಿತ್ತ. ಅಂದು ಮನುಷ್ಯರಿಗೆ ಅವರ ಕರ್ಮಗಳನ್ನು**

**ತೋರಿಸಲಾಗುವುದಕ್ಕಾಗಿ ಅವರು ಹಲವು ಗುಂಪುಗಳಾಗಿ ಹೊರಡುವರು .ಆಗ ಯಾರು ಒಂದು ಅಣುವಿನ ತೂಕದಷ್ಟು ಒಳಿತು ಮಾಡಿರುವನೋ ಅವನು ಅದನ್ನು ಕಾಣುವನು.ಯಾರು ಒಂದು ಅಣುವಿನ ತೂಕದಷ್ಟು ಕೆಡುಕು ಮಾಡಿರುವನೋ ಅವನು ಅದನ್ನು ಕಾಣುವನು.** [ಸೂರ ಅಝ್ಝುಲ್‌ಝುಲ:1- 8].

ತಫ್ಸೀರ್ (ವಿವರಣೆ).

1-إِذَا زُلْزِلَتِ الْأَرْضُ زِلْزَالَهَا

ಭೂಮಿಗೆ ತೀವ್ರ ಕಂಪನದಿಂದ ಕಂಪಿಸಿದಾಗ. ಇದು ಪುನರುತ್ಥಾನ ದಿನ ಸಂಭವಿಸುತ್ತದೆ.

2-وَأَخْرَجَتِ الْأَرْضُ أَثْقَالَهَا

ಭೂಮಿ ಅದರೊಳಗಿರುವ ಶವಗಳನ್ನು ಹಾಗೂ ಇತರ ವಸ್ತುಗಳನ್ನು ಹೊರ ಹಾಕುವಾಗ.

3-وَقَالَ الْإِنْسَانُ مَا لَهَا

ಮನುಷ್ಯನು ಆಶ್ಚರ್ಯಚಕಿತನಾಗಿ ಹೇಳುವನು: ಭೂಮಿಗೆ ಏನಾಗಿದೆ ಇದೇಕೆ ಚಲಿಸುತ್ತಾ ಕಂಪಿಸುತ್ತಿದೆ?!

4-يَوْمَئِذٍ تُحَدِّثُ أَخْبَارَهَا

ಆ ಮಹಾನ್ ದಿನದಂದು ಭೂಮಿಯು ಅದರ ಮೇಲೆ ಮಾಡಿದ ಒಳಿತು ಮತ್ತು ಕೆಡುಕಿನ ಬಗ್ಗೆ ಹೇಳುವುದು.

5-بِأَنَّ رَبَّكَ أَوْحَى لَهَا

ಏಕೆಂದರೆ ಭೂಮಿ ಅದನ್ನು ತಿಳಿಯುವಂತೆ ಅಲ್ಲಾಹು ಮಾಡಿದ್ದಾನೆ ಮತ್ತು ಅದನ್ನು ತಿಳಿಸಬೇಕೆಂದು ಆಜ್ಞಾಪಿಸಿದ್ದಾನೆ.

6-يَوْمَئِذٍ يَصْدُرُ النَّاسُ أَشْتَاتًا لِيُرَوْا أَعْمَالَهُمْ

ಅಂದು ಮನುಷ್ಯರಿಗೆ ಅವರ ಕರ್ಮಗಳನ್ನು ತೋರಿಸಲಾಗುವುದಕ್ಕಾಗಿ ಅವರು ಹಲವು ಗುಂಪುಗಳಾಗಿ ಹೊರಡುವರು. ಆ ಮಹಾನ್ ದಿನದಂದು, ಭೂಮಿಯು ನಡುಗುತ್ತದೆ, ಜನರು ತಾವು

ಇಹಲೋಕದಲ್ಲಿ ಮಾಡಿದ ಕರ್ಮಗಳನ್ನು ವೀಕ್ಷಿಸಲು ತಂಡಗಳಾಗಿ ವಿಚಾರಣೆಯ ಸ್ಥಾನದಿಂದ ಹೊರಬರುತ್ತಾರೆ.

7-"فَمَنْ يَعْمَلْ مِثْقَالَ ذَرَّةٍ خَيْرًا يَرَهُ

ಆಗ ಯಾರು ಒಂದು ಅಣುವಿನ ತೂಕದಷ್ಟು ಒಳಿತು ಮಾಡಿರುವನೋ ಅವನು ಅದನ್ನು ಕಾಣುವನು. ಯಾರು ಸಣ್ಣ ಇರುವೆಯ ತೂಕದಷ್ಟು ಒಳಿತು ಮತ್ತು ಸದಾಚಾರವನ್ನು ಮಾಡುತ್ತಾನೋ ಅವನು ಅವನ ಮುಂದೆ ಅದನ್ನು ಕಾಣುವನು."

8-"فَمَنْ يَعْمَلْ مِثْقَالَ ذَرَّةٍ خَيْرًا يَرَهُ

ಆಗ ಯಾರು ಒಂದು ಅಣುವಿನ ತೂಕದಷ್ಟು ಕೆಡುಕು ಮಾಡಿರುವನೋ ಅವನು ಅದನ್ನು ಕಾಣುವನು. ಯಾರು ಕೆಡುಕನ್ನು ಮಾಡುತ್ತಾನೋ ಅವನು ಅವನ ಮುಂದೆ ಅದನ್ನು ಕಾಣುವನು."

**ಪ್ರಶ್ನೆ 3. ಸೂರ ಅಲ್-ಆದಿಯಾತ್ ಓದಿ ಮತ್ತು ವಿವರಿಸಿ?**

ಉತ್ತರ: ಸೂರ ಅಲ್-ಆದಿಯಾತ್ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿وَٱلعَٰدِيَٰتِ ضَبحا١ فَٱلمُورِيَٰتِ قَدحا٢ فَٱلمُغِيرَٰتِ صُبحا٣ فَأَثَرنَ بِهِۦ نَقعا٤ فَوَسَطنَ بِهِۦ جَمعًا٥ إِنَّ ٱلإِنسَٰنَ لِرَبِّهِۦ لَكَنُود٦ وَإِنَّهُۥ عَلَىٰ ذَٰلِكَ لَشَهِيد ٧ وَإِنَّهُۥ لِحُبِّ ٱلخَيرِ لَشَدِيدٌ٨ ۞أَفَلَا يَعلَمُ إِذَا بُعثِرَ مَا فِي ٱلقُبُورِ٩ وَحُصِّلَ مَا فِي ٱلصُّدُورِ١٠ إِنَّ رَبَّهُم بِهِم يَومَئِذ لَّخَبِيرُ11﴾ [العاديات: 1-11].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಬುಸುಗುಡುತ್ತ ಓಡುವವುಗಳ (ಕುದುರೆಗಳ) ಆಣೆ.ಅವು (ತಮ್ಮ ಗೊರಸುಗಳಿಂದ) ಕಿಡಿಗಳನ್ನು ಹಾರಿಸುತ್ತವೆ. ಅನಂತರ ಪ್ರಾತಃಕಾಲದಲ್ಲಿ ಆಕ್ರಮಣ ನಡೆಸುತ್ತವೆ. ಆಗ ಅವು ಧೂಳೆಬ್ಬಿಸುತ್ತವೆ.ತರುವಾಯ ಇದೇ ಸ್ಥಿತಿಯಲ್ಲಿ ಯಾವುದಾದರೂ ಜನ ಸಮೂಹದೊಳಕ್ಕೆ ನುಗ್ಗಿ ಬಿಡುತ್ತವೆ. ವಾಸ್ತವದಲ್ಲಿ ಮಾನವನು ತನ್ನ ಪ್ರಭುವಿಗೆ ಬಹಳ ಕೃತಘ್ನನಾಗಿದ್ದಾನೆ. ಮತ್ತು ಇದಕ್ಕೆ**

**ಸ್ವತಃ ಅವನೇ ಸಾಕ್ಷಿಯಾಗಿದ್ದಾನೆ . ಅವನು ಧನ ಕನಕಗಳ ಅತಿಯಾದ ಮೋಹದಲ್ಲಿ ಸಿಲುಕಿ ಕೊಂಡಿದ್ದಾನೆ.ಸಮಾಧಿಗಳೊಳಗೆ (ದಫನವಾಗಿ) ಇರುವ ಸಕಲವನ್ನೂ ಹೊರ ತೆಗೆಯಲಾಗುವ ಆ ಸಂದರ್ಭವನ್ನು ಅವನು ಅರಿತಿಲ್ಲವೇ .ಮತ್ತು ಹೃದಯಗಳೊಳಗೆ (ಅಡಗಿ) ಇರುವ ಎಲ್ಲವನ್ನೂ ಹೊರತೆಗೆದು ವಿಚಾರಣೆಗೊಳಪಡಿಸಲಾಗುವ (ಆ ಸಂದರ್ಭ).ಖಂಡಿತವಾಗಿಯೂ ಅಂದು ಅವರ ಪ್ರಭು ಅವರನ್ನು ಪೂರ್ಣವಾಗಿ ತಿಳಿದವನಾಗಿರುವನು.**[ಸೂರ ಅಲ್-ಆದಿಯಾತ್:1- 11].

**ತಫ್ಸೀರ್ (ವಿವರಣೆ).**

ಬುಸುಗುಡುತ್ತ ಓಡುವ ಕುದುರೆಗಳ ಆಣೆ . ಅಲ್ಲಾಹು ಇಲ್ಲಿ ಕುದುರೆಗಳ ಮೇಲೆ ಆಣೆ ಹಾಕಿದ್ದಾನೆ. ಅವುಗಳ ಓಟದ ತೀವ್ರತೆಯಿಂದ ಅದರ ಶಬ್ದವನ್ನು ಕೇಳಬಹುದು.ಅವು (ತಮ್ಮ ಗೊರಸುಗಳಿಂದ) ಕಿಡಿಗಳನ್ನು ಹಾರಿಸುತ್ತವೆ. ತಮ್ಮ ಕಾಲುಗಳ ಗೊರಸುಗಳಿಂದ ಬೆಂಕಿ ಕಿಡಿಗಳನ್ನು ಹಾರಿಸುವ ಕುದುರೆಗಳ ಮೇಲೆ ಆಣೆ ಹಾಕಿದ್ದಾನೆ . ಅವುಗಳ ಓಟದ ತೀವ್ರತೆಯಿಂದ ಗೊರಸುಗಳು ಕಲ್ಲಿಗೆ ತಾಗುವಾಗ ಬೆಂಕಿ ಕಿಡಿ ಹಾರುತ್ತವೆ.ಪ್ರಭಾತದಲ್ಲಿ ವೈರಿಗಳ ಮೇಲೆ ಆಕ್ರಮಣ ಮಾಡುವ ಕುದುರೆಗಳ ಮೇಲೆ ಆಣೆ ಮಾಡಲಾಗಿದೆ .ಅವು ಓಡುವಾಗ ಧೂಳಿಯನ್ನು ಎಬ್ಬಿಸುತ್ತವೆ .ಅವು ತಮ್ಮ ಮೇಲೆ ಸವಾರಿ ಮಾಡುವ ಯೋಧರೊಂದಿಗೆ ಶತ್ರುಗಳ ನಡುವಿಗೆ ಧುಮುಕುತ್ತವೆ .ಅಲ್ಲಾಹು ಮನುಷ್ಯನಿಗೆ ಕೊಡಬೇಕೆಂದು ಆದೇಶಿಸುವ ಒಳಿತನ್ನು ಅವನು ಕೊಡದೆ ತಡೆಹಿಡಿಯುತ್ತಾನೆ.ಅವನು ಸ್ವತಃ ಆ ಒಳಿತನ್ನು ತಡೆಹಿಡಿಯುವುದಕ್ಕೆ ಸಾಕ್ಷಿಯಾಗಿದ್ದಾನೆ. ಅದು ಅತ್ಯಂತ ಸ್ಪಷ್ಟವಾಗಿರುವುದರಿಂದ ಅದನ್ನು ನಿರಾಕರಿಸಲು ಅವನಿಗೆ ಸಾಧ್ಯವಿಲ್ಲ.ಅವನಿಗೆ ಧನದ ಮೇಲೆ ಅತಿಯಾದ ಮೋಹವಿರುವುದರಿಂದ ಅವನು ಜಿಪುಣನಾಗಿದ್ದಾನೆ .ಇಹಲೋಕಕ್ಕೆ ಮರುಳಾದ ಈ ಮನುಷ್ಯನಿಗೆ, ಸಮಾಧಿಗಳಲ್ಲಿರುವವರನ್ನು ಅಲ್ಲಾಹು ಜೀವಂತ ಎಬ್ಬಿಸುವಾಗ ಮತ್ತು ಅವರನ್ನು ವಿಚಾರಣೆ ಮಾಡಿ ಅವರಿಗೆ ಪ್ರತಿಫಲ ನೀಡಲು ಅವರನ್ನು ಭೂಮಿಯಿಂದ ಹೊರತರುವಾಗ ವಿಷಯವು ಅವನು ಭಾವಿಸಿದಂತಿಲ್ಲ ಎಂದು ಮನುಷ್ಯನಿಗೆ ತಿಳಿಯುವುದಿಲ್ಲವೇ?!ಹೃದಯಗಳಲ್ಲಿರುವ ಉದ್ದೇಶಗಳು, ವಿಶ್ವಾಸಗಳು ಮುಂತಾದವುಗಳನ್ನು ಬಹಿರಂಗಪಡಿಸುವಾಗ.ಆ ದಿನ ಅಲ್ಲಾಹು ಅವರ

ಬಗ್ಗೆ ಸೂಕ್ಷ್ಮ ಜ್ಞಾನವನ್ನು ಹೊಂದಿರುವನು . ಅವನ ದಾಸರ ಯಾವುದೇ ವಿಷಯವೂ ಅವನಿಗೆ ತಿಳಿಯದೇ ಇರುವುದಿಲ್ಲ. ಅದರ ಆಧಾರದಲ್ಲೇ ಅವನು ಅವರಿಗೆ ಪ್ರತಿಫಲ ನೀಡುತ್ತಾನೆ.

**ಪ್ರಶ್ನೆ 4. ಸೂರ ಅಲ್-ಕಾರಿಅ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಕಾರಿಅ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿ٱلقَارِعَةُ١ مَا ٱلقَارِعَةُ٢ وَمَآ أَدرَىٰكَ مَا ٱلقَارِعَةُ٣ يَومَ يَكُونُ ٱلنَّاسُ كَٱلفَرَاشِ ٱلمَبثُوثِ٤ وَتَكُونُ ٱلجِبَالُ كَٱلعِهنِ ٱلمَنفُوشِ٥ فَأَمَّا مَن ثَقُلَت مَوَٰزِينُهُۥ٦ فَهُوَ فِي عِيشَة رَّاضِيَة٧ وَأَمَّا مَن خَفَّت مَوَٰزِينُهُۥ٨ فَأُمُّهُۥ هَاوِيَة٩ وَمَآ أَدرَىٰكَ مَا هِيَه١٠ نَارٌ حَامِيَةُ11﴾ [القارعة: 1-11].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹುವಿನ ನಾಮದಿಂದ.

**ಭಯಾನಕವಾದ ಆ ಘಟನೆ! ಭಯಾನಕವಾದ ಆ ಘಟನೆ ಎಂದರೇನು? ಭಯಾನಕವಾದ ಆ ಘಟನೆ ಎಂದರೇನು.ಅಂದು ಜನರು ಚದುರಿದ ಹಾತೆಗಳಂತಾಗುವರು .ಮತ್ತು ಪರ್ವತಗಳು ಬಣ್ಣ ಬಣ್ಣದ ಹಿಂಜಿದ ಉಣ್ಣೆಯಂತಾಗಿ ಬಿಡುವುದು .ತರುವಾಯ ಯಾರ ತೂಕದ ತಟ್ಟೆಗಳು ಭಾರವಾಗಿರುವುವೋ.ಅವನು ಮನೋಹರವಾದ ಸುಖಭೋಗದಲ್ಲಿರುವನು .ಮತ್ತು ಯಾರ ತೂಕದ ತಟ್ಟೆಗಳು ಹಗುರವಾಗಿರುವುವೋ.ಅವನ ನಿವಾಸವು ಆಳವಾದ ಹೊಂಡವಾಗಿರುವುದು .ಅದೇನೆಂದು ನಿಮಗೇನು ಗೊತ್ತು? ಧಗಧಗಿಸುವ ಅಗ್ನಿಯದು.** [ಸೂರ ಅಲ್-ಕಾರಿಅ:1- 11].

**ತಫ್ಸೀರ್ (ವಿವರಣೆ).**

1. **{ಅಲ್-ಕಾರಿಅ}** ಎಂದರೆ ಜನರ ಹೃದಯಕ್ಕೆ ಬಡಿಯುವ ಪ್ರಳಯ . ಇದರಿಂದಾಗಿ ಜನರ ಹೃದಯಗಳಲ್ಲಿ ಭಯಾನಕತೆ ಉಂಟಾಗುತ್ತದೆ.

2. **{ಮಲ್-ಕಾರಿಅ}** ಅತ್ಯಂತ ಭಯಾನಕವಾಗಿರುವ, ಜನರ ಹೃದಯಕ್ಕೆ ಬಡಿಯುವ ಪ್ರಳಯ ಎಂದರೇನು?

3. **{ವಮಾ ಅದ್ರಾಕ ಮಲ್ ಕಾರಿಅ}:** ಓ ಪ್ರವಾದಿಯವರೇ! ಅತ್ಯಂತ ಭಯಾನಕವಾಗಿರುವ, ಜನರ ಹೃದಯಕ್ಕೆ ಬಡಿಯುವ ಈ ಪ್ರಳಯ ಎಂದರೇನೆಂದು ನಿಮಗೇನು ಗೊತ್ತು? ಖಂಡಿತವಾಗಿಯೂ ಅದು ಪುನರುತ್ಥಾನದ ದಿನ.

4. **{ಯೌಮ ಯಕೂನು ನ್ನಾಸು ಕಲ್ ಫರಾಶಿಲ್ ಮಬ್ಸೂಸ್}:** ಅದು ಜನರ ಹೃದಯವನ್ನು ಬಡಿಯುವ ದಿನದಂದು ಅವರು ಚದುರಿದ ಪತಂಗಗಳಂತೆ ಅಲ್ಲಿ ಇಲ್ಲಿ ಬಿದ್ದಿರುತ್ತಾರೆ.

5. **{ವ ತಕೂನುಲ್ ಜಿಬಾಲು ಕಲ್ ಇಹ್ನಿಲ್ ಮನ್‌ಫೂಶ್}:** ಅಂದು ಪರ್ವತಗಳು ತಮ್ಮ ಭಾರವನ್ನು ಕಳೆದುಕೊಂಡ ಹಿಂಜಿದ ಉಣ್ಣೆಯಂತೆ ಹಾರಾಡುತ್ತವೆ.

6. **{ಫಅಮ್ಮಾ ಮನ್ ಸಕುಲತ್ ಮಾವಾಝೀನುಹ್ }:** ಯಾರ ಸತ್ಕರ್ಮಗಳು ಅವನ ದುಷ್ಕರ್ಮಗಳಿಗಿಂತ ಹೆಚ್ಚು ಭಾರವಾಗುತ್ತದೋ.

7. **{ಫಹುವ ಫೀ ಈಶತಿ ರ್‍ರಾಗದಿಯ }:** ಅವನು ಸ್ವರ್ಗದಲ್ಲಿ ಆಹ್ಲಾದಕರ ಜೀವನವನ್ನು ಆನಂದಿಸುವನು.

8. **{ವಅಮ್ಮಾ ಮನ್ ಖಫ್ಫತ್ ಮವಾಝೀನುಹ್ }:** ಯಾರ ದುಷ್ಕರ್ಮಗಳು ಅವನ ಸತ್ಕರ್ಮಗಳಿಗಿಂತ ಹೆಚ್ಚು ಭಾರವಾಗುತ್ತದೋ.

9. **{ಫಉಮ್ಮುಹೂ ಹಾವಿಯ}:** ಪುನರುತ್ಥಾನದ ದಿನ ಅವನ ವಾಸಸ್ಥಳ ಮತ್ತು ವಸತಿ ನರಕಾಗ್ನಿಯಾಗಿರುವುದು.

10. **{ವಮಾ ಅದ್ರಾಕ ಮಾ ಹಿಯಹ್}:** ಓ ಪ್ರವಾದಿಯವರೇ! ಅದು ಏನೆಂದು ನಿಮಗೇನು ಗೊತ್ತು?

11. **{ನಾರುನ್ ಹಾಮಿಯ}:** ಇದು ಧಗಧಗನೆ ಉರಿಯುವ ಬೆಂಕಿಯಾಗಿದೆ.

**ಪ್ರಶ್ನೆ 5. ಸೂರ ಅತ್ತಕಾಸುರ್ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರಃ ಅತ್ತಕಾಸುರ್ ಮತ್ತು ಅದರ ವ್ಯಾಖ್ಯಾನ

بِسۡمِ ٱللَّهِ ٱلرَّحۡمَٰنِ ٱلرَّحِيمِ

﴿أَلۡهَىٰكُمُ ٱلتَّكَاثُرُ ١ حَتَّىٰ زُرۡتُمُ ٱلۡمَقَابِرَ ٢ كَلَّا سَوۡفَ تَعۡلَمُونَ ٣ ثُمَّ كَلَّا سَوۡفَ تَعۡلَمُونَ ٤ كَلَّا لَوۡ تَعۡلَمُونَ عِلۡمَ ٱلۡيَقِينِ ٥
لَتَرَوُنَّ ٱلۡجَحِيمَ ٦ ثُمَّ لَتَرَوُنَّهَا عَيۡنَ ٱلۡيَقِينِ ٧ ثُمَّ لَتُسۡـَٔلُنَّ يَوۡمَئِذٍ عَنِ ٱلنَّعِيمِ ٨﴾ [التكاثر: 1-8].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಹೆಚ್ಚು ಹೆಚ್ಚಾಗಿ ಮತ್ತು ಇತರರಿಗಿಂತ ಅಧಿಕವಾಗಿ ಸಂಪಾದಿಸುವ ಚಿಂತೆಯು ನಿಮ್ಮನ್ನು ಅಲಕ್ಷ್ಯರನ್ನಾಗಿಸಿ ಬಿಟ್ಟಿದೆ. ಕೊನೆಗೆ (ಇದೇ ಚಿಂತೆಯಲ್ಲಿ) ನೀವು ಗೋರಿಯ ಅಂಚನ್ನು ತಲುಪಿರುವಿರಿ. ಖಂಡಿತ ಅಲ್ಲ, ಸದ್ಯವೇ ನಿಮಗೆ ತಿಳಿಯಲಿದೆ .ಇನ್ನೂ (ಕೇಳಿರಿ) ಖಂಡಿತ ಅಲ್ಲ, ಸದ್ಯವೇ ನಿಮಗೆ ತಿಳಿಯಲಿದೆ.ಖಂಡಿತ ಅಲ್ಲ, ನೀವು ಖಚಿತ ಜ್ಞಾನದ ಆಧಾರದಲ್ಲಿ (ಈ ಪ್ರವೃತ್ತಿಯ ಪರಿಣಾಮವನ್ನು) ತಿಳಿದಿರುತ್ತಿದ್ದರೆ! (ನಿಮ್ಮ ವರ್ತನೆ ಹೀಗಿರುತ್ತಿರಲಿಲ್ಲ.) ನೀವು ನರಕವನ್ನು ಕಂಡೇ ತೀರುವಿರಿ. ಇನ್ನೂ (ಕೇಳಿರಿ) ನೀವು ಅದನ್ನು ಖಚಿತ ದೃಷ್ಟಿಗಳಿಂದ ನೋಡುವಿರಿ.ಆ ಬಳಿಕ ಖಂಡಿತವಾಗಿಯೂ ಈ ಅನುಗ್ರಹಗಳ ಬಗ್ಗೆ ನೀವು ಪ್ರಶ್ನಿಸಲ್ಪಡುವಿರಿ.** [ಸೂರ ಅತ್ತಕಾಸುರ್:1- 8].

**ತಫ್ಸೀರ್ (ವಿವರಣೆ).**

1. **{ಅಲ್‌ಹಾಕುಮು ತ್ತಕಾಸುರ್}:** ಓ ಜನರೇ, ನೀವು ನಿಮ್ಮ ಸಂಪತ್ತು ಮತ್ತು ಮಕ್ಕಳ ಬಗ್ಗೆ ತೋರುವ ಅಹಂಭಾವವು ನಿಮ್ಮನ್ನು ಅಲ್ಲಾಹನ ಅನುಸರಣೆ ಮಾಡದಂತೆ ಮಗ್ನಗೊಳಿಸಿದೆ.

2. **{ಹತ್ತಾ ಝುರ್ತುಮುಲ್ ಮಕಾಬಿರ್}:** ನೀವು ಸತ್ತು ನಿಮ್ಮ ಸಮಾಧಿಗಳನ್ನು ಪ್ರವೇಶಿಸುವವರೆಗೆ.

3. **{ಕಲ್ಲಾ ಸೌಫ ತಅ್‌ಲಮೂನ್ }:** ಅಲ್ಲಾಹನ ಅನುಸರಣೆಯನ್ನು ಬಿಟ್ಟು ಅಹಂಭಾವದಲ್ಲಿ ಮುಳುಗುವುದು ನಿಮಗೆ ಭೂಷಣವಲ್ಲ . ಈ ರೀತಿ ಅಹಂಭಾವದಲ್ಲಿ ಮುಳುಗಿದ್ದರ ಪರಿಣಾಮವನ್ನು ನೀವು ಸದ್ಯದಲ್ಲೇ ತಿಳಿದುಕೊಳ್ಳಲಿರುವಿರಿ.

4. **{ಸುಮ್ಮ ಕಲ್ಲಾ ಸೌಫ ತಅ್‌ಲಮೂನ್ }:** ನಂತರ, ನೀವು ಸದ್ಯದಲ್ಲೇ ಅದರ ಪರಿಣಾಮವನ್ನು ತಿಳಿದುಕೊಳ್ಳಲಿರುವಿರಿ.

5. **{ಕಲ್ಲಾ ಲೌ ತಅ್‌ಲಮೂನ ಇಲ್ಮಲ್ ಯಕೀನ್ }:** ನಿಮ್ಮನ್ನು ಅಲ್ಲಾಹನ ಬಳಿಗೆ ಪುನರುತ್ಥಾನಗೊಳಿಸಿ ತರಲಾಗುತ್ತದೆ ಮತ್ತು ಅವನು ನಿಮ್ಮ ಕರ್ಮಗಳಿಗೆ ಪ್ರತಿಫಲವನ್ನು

ನೀಡುತ್ತಾನೆ ಎಂದು ನೀವು ನಿಜವಾಗಿ ಮತ್ತು ಖಚಿತವಾಗಿ ತಿಳಿದುಕೊಂಡಿದ್ದರೆ ನೀವು ನಿಮ್ಮ ಆಸ್ತಿ ಮತ್ತು ಮಕ್ಕಳ ವಿಷಯದಲ್ಲಿ ಅಹಂಭಾವದಲ್ಲಿ ಮುಳುಗುತ್ತಿರಲಿಲ್ಲ.

6. **{ಲತರವುನ್ನಲ್ ಜಹೀಮ್}:** ಅಲ್ಲಾಹನಾಣೆ! ಪುನರುತ್ಥಾನದ ದಿನ ನೀವು ಖಂಡಿತವಾಗಿಯೂ ನರಕಾಗ್ನಿಯನ್ನು ನೋಡುವಿರಿ.

7. **{ಸುಮ್ಮ ಲತರವುನ್ನಹಾ ಅಯ್ನಲ್ ಯಕೀನ್}:** ನಂತರ ನೀವು ಅದನ್ನು ಸಂಪೂರ್ಣ ಖಚಿತವಾಗಿ ಯಾವುದೇ ಸಂಶಯವಿಲ್ಲದೆ ಕಣ್ಣಾರೆ ನೋಡುವಿರಿ.

8. **{ಸುಮ್ಮ ಲತುಸ್‌ಅಲುನ್ನ ಯೌಮಇಧಿನ್ ಅನಿನ್ನಈಮ್}:** ನಂತರ ಆ ದಿನ ಅಲ್ಲಾಹನು ನಿಮ್ಮೊಡನೆ, ಅವನು ನಿಮಗೆ ಅನುಗ್ರಹಿಸಿದ ಆರೋಗ್ಯ , ಐಶ್ವರ್ಯ ಮುಂತಾದವುಗಳ ಬಗ್ಗೆ ವಿಚಾರಿಸಲಿದ್ದಾನೆ.

**ಪ್ರಶ್ನೆ 6. ಸೂರ ಅಲ್-ಅಸ್ರ್ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಅಸ್ರ್ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿وَٱلعَصرِ١ إِنَّ ٱلإِنسَٰنَ لَفِي خُسرٍ ٢ إِلَّا ٱلَّذِينَ ءَامَنُواْ وَعَمِلُواْ ٱلصَّٰلِحَٰتِ وَتَوَاصَواْ بِ ٱلحَقِّ وَتَوَاصَواْ بِ ٱلصَّبرِ٣﴾

[العصر: 1–3].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಕಾಲದಾಣೆ,ನಿಜವಾಗಿ ಮನುಷ್ಯನು ಮಹಾ ನಷ್ಟದಲ್ಲಿದ್ದಾನೆ .ಸತ್ಯವಿಶ್ವಾಸ ಸ್ವೀಕರಿಸಿದ , ಸತ್ಕರ್ಮ ಮಾಡುತ್ತಿದ್ದ ಮತ್ತು ಪರಸ್ಪರ ಸತ್ಯ ಹಾಗೂ ಸಹನೆಯನ್ನು ಉಪದೇಶಿಸುತ್ತಿದ್ದವರ ಹೊರತು.** [ಸೂರ ಅಲ್-ಅಸ್ರ್:1- 3].

**ತಫ್ಸೀರ್ (ವಿವರಣೆ).**

1. **{ವಲ್ ಅಸ್ರ್}:** ಸರ್ವಶಕ್ತನಾದ ಅಲ್ಲಾಹು ಸಮಯದ ಮೇಲೆ ಆಣೆ ಮಾಡಿ ಹೇಳುತ್ತಾನೆ.

2. **{ಇನ್ನಲ್ ಇನ್ಸಾನ ಲಫೀ ಖುಸ್ರ್ }:** ನಿಸ್ಸಂದೇಹವಾಗಿಯೂ ಸರ್ವ ಮಾನವಕುಲವು ಸಂಪೂರ್ಣ ನಷ್ಟ ಮತ್ತು ನಾಶದಲ್ಲಿದೆ.

3. **{ಇಲ್ಲಲ್ಲದೀನ ಆಮನೂ ವಅಮಿಲು ಸ್ಸಾಲಿಹಾತಿ ವತವಾಸವ್ ಬಿಲ್ -ಹಕ್ಕಿ ವ ತವಾಸವ್ ಬಿಸ್ಸಬ್ರ್}:** ಸತ್ಯವಿಶ್ವಾಸವಿಟ್ಟವರು, ಸತ್ಕರ್ಮವೆಸಗಿದವರು, ಸತ್ಯವನ್ನು ಪಾಲಿಸಲು ಪರಸ್ಪರ ಉಪದೇಶ ಮಾಡಿದವರು ಮತ್ತು ಸಹನೆಯನ್ನು ಪಾಲಿಸಲು ಪರಸ್ಪರ ಉಪದೇಶ ಮಾಡಿದವರ ಹೊರತು ಇವರೇ ಆ ನಷ್ಟದಿಂದ ಉಳಿಯುವವರಾಗಿದ್ದಾರೆ.

**ಪ್ರಶ್ನೆ 7. ಸೂರ ಅಲ್-ಹುಮಝ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಹುಮಝ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿وَيل لِّكُلِّ هُمَزَة لُّمَزَةٍ١ ٱلَّذِي جَمَعَ مَالا وَعَدَّدَهُۥ٢ يَحسَبُ أَنَّ مَالَهُۥٓ أَخلَدَهُۥ٣ كَلَّا لَيُنبَذَنَّ فِي ٱلحُطَمَةِ٤ وَمَآ أَدرَىٰكَ مَا ٱلحُطَمَةُ٥ نَارُ ٱللَّهِ ٱلمُوقَدَةُ٦ ٱلَّتِي تَطَّلِعُ عَلَى ٱلأَفـِٔدَةِ٧ إِنَّهَا عَلَيهِم مُّؤصَدَة٨ فِي عَمَد مُّمَدَّدَةِۭ٩﴾ [الهمزة: 1-9].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**(ಎದುರೆದುರೇ) ಜನರನ್ನು ಮೂದಲಿಸುವ ಮತ್ತು (ಬೆನ್ನ ಹಿಂದೆ) ದೂಷಿಸುವ ಅಭ್ಯಾಸವಿರುವ ಪ್ರತಿಯೊಬ್ಬನಿಗೂ ವಿನಾಶವಿದೆ.ಅವನು ಸಂಪತ್ತನ್ನು ಸಂಗ್ರಹಿಸಿದನು ಮತ್ತು ಅದನ್ನು ಎಣಿಸಿ ಎಣಿಸಿ ಇಟ್ಟನು.ಅವನ ಸಂಪತ್ತು ಶಾಶ್ವತವಾಗಿ ಅವನ ಬಳಿಯಲ್ಲೇ ಇರುವುದೆಂದು ಅವನುಭಾವಿಸುತ್ತಾನೆ.ಖಂಡಿತ ಇಲ್ಲ. ಅವನು ಪುಡಿಗುಟ್ಟಿ ಬಿಡುವ ಸ್ಥಳಕ್ಕೆ ಎಸೆಯಲ್ಪಡುವನು.ಪುಡಿಗುಟ್ಟಿ ಬಿಡುವ ಆ ಸ್ಥಳ ಏನೆಂದು ನಿಮಗೇನು ಗೊತ್ತು?ಚೆನ್ನಾಗಿ ಧಗಧಗಿಸಲ್ಪಟ್ಟಿರುವ ಅಲ್ಲಾಹನ ಬೆಂಕಿ.ಅದು ಹೃದಯಗಳವರೆಗೂ ತಲಪುವುದು .ಅದನ್ನು ಅವರ ಮೇಲೆ ಆವರಿಸಿ ಮುಚ್ಚಿ ಬಿಡಲಾಗುವುದು.ಅವರು ಎತ್ತರವಾದ ಸ್ತಂಭಗಳಲ್ಲಿ (ಸಿಲುಕಿಕೊಂಡಿರುವ ಸ್ಥಿತಿಯಲ್ಲಿ).** [ಸೂರ ಅಲ್-ಹುಮಝ:1- 9].

**ತಫ್ಸೀರ್ (ವಿವರಣೆ).**

1. **{ವೈಲುಲ್ಲಿಕುಲ್ಲಿ ಹುಮಝುತಿಲ್ಲುಮಝಃ}:** ಜನರನ್ನು ಪದೇ ಪದೇ ದೂಷಿಸುವ ಮತ್ತು ನಿಂದಿಸುವ ಪ್ರತಿಯೊಬ್ಬರಿಗೂ ದುರ್ಗತಿ ಮತ್ತು ಕಠೋರ ಶಿಕ್ಷೆಯಿದೆ.

2. **{ಅಲ್ಲಧೀ ಜಮಅ ಮಾಲನ್ ವಅದ್ದದಃ }:** ಹಣವನ್ನು ಕೂಡಿಡುವುದು ಮತ್ತು ಎಣಿಸುವುದರ ಹೊರತು ಬೇರೆ ಯಾವುದರಲ್ಲೂ ಆಸಕ್ತಿಯಿಲ್ಲದವನು.

3. **{ಯಹ್ಸಬು ಅನ್ನ ಮಾಲಹೂ ಅಖ್ಲದಃ}:** ತಾನು ಕೂಡಿಟ್ಟ ಹಣವು ತನ್ನನ್ನು ಸಾವಿನಿಂದ ರಕ್ಷಿಸುತ್ತದೆ ಮತ್ತು ತಾನು ಭೂಲೋಕದಲ್ಲಿ ಶಾಶ್ವತವಾಗಿ ಬದುಕುತ್ತೇನೆ ಎಂದು ಅವನು ಭಾವಿಸುತ್ತಾನೆ.

4. **{ಕಲ್ಲಾ ಲಯುಂಬಝುನ್ನ ಫಿಲ್ ಹುತಮಃ }:** ನಿಜಸ್ಥಿತಿಯು ಈ ಅವಿವೇಕಿ ಚಿಂತಿಸಿದಂತಲ್ಲ . ಅವನನ್ನು ಖಂಡಿತವಾಗಿಯೂ ನರಕಾಗ್ನಿಗೆ ಎಸೆಯಲಾಗುವುದು. ಅದರ ಕಠೋರತೆಯಿಂದಾಗಿ ಅದರಲ್ಲಿ ಎಸೆಯಲಾಗುವ ಎಲ್ಲವನ್ನೂ ಅದು ಪುಡಿಗುಟ್ಟಿ ಬಿಡುವುದು.

5. **{ವಮಾ ಅದ್ರಾಕ ಮಲ್ ಹುತಮಃ }:**ಓ ಪ್ರವಾದಿಯವರೇ! ಎಸೆಯಲಾಗುವ ಎಲ್ಲವನ್ನೂ ಪುಡಿಗಟ್ಟುವ ಈ ಬೆಂಕಿ ಏನೆಂದು ನಿಮಗೇನು ಗೊತ್ತು?

6. **{ನಾರುಲ್ಲಾಹಿಲ್ ಮೂಖದಃ}:** ಅದು ಧಗಧಗನೆ ಉರಿಯುವ ಅಲ್ಲಾಹನ ಅಗ್ನಿಯಾಗಿದೆ.

7. **{ಅಲ್ಲತೀ ತತ್ತಲಿಉ ಅಲಲ್ ಅಫ್ಇದಃ }:** ಅದು ಜನರ ದೇಹಗಳನ್ನು ಬೇಧಿಸಿ ಅವರ ಹೃದಯಗಳನ್ನು ತಲುಪುತ್ತದೆ.

8. **{ಇನ್ನಹಾ ಅಲೈಹಿಮ್ಮ್ಮೂಅ್‌ಸದಃ}:** ಅದರ ದ್ವಾರಗಳು ಶಿಕ್ಷೆಗೊಳಗಾದವರ ಮೇಲೆ ಮುಚ್ಚಿಕೊಂಡಿರುವವು.

9. **{ಫೀ ಅಮ್ಮದಿಮ್ಮ್ಮುಮದ್ದದಃ}:** ಅವರು ಅಲ್ಲಿಂದ ಹೊರಬರದಿರಲೆಂದು ಅವರಿಗೆ ಉದ್ದಕ್ಕೆ ಚಾಚಲಾಗಿರುವ ಸ್ತಂಭಗಳಿಂದ ಕಟ್ಟಲಾಗುವುದು.

**ಪ್ರಶ್ನೆ 8. ಸೂರ ಅಲ್-ಫೀಲ್ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಫೀಲ್ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿أَلَم تَرَ كَيفَ فَعَلَ رَبُّكَ بِأَصحَٰبِ ٱلفِيلِ١ أَلَم يَجعَل كَيدَهُم فِي تَضلِيل وَأَرسَلَ عَلَيهِم طَيرًا أَبَابِيلَ ٣ تَرمِيهِم بِحِجَارَة مِّن سِجِّيل٤ فَجَعَلَهُم كَعَصف مَّأكُولِ٥﴾ [الفيل: 1-5].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

ನಿಮ್ಮ ಪ್ರಭು ಆನೆಯವರೊಂದಿಗೆ ಹೇಗೆ ವರ್ತಿಸಿದನೆಂಬುದನ್ನು ನೀವು ನೋಡಲಿಲ್ಲವೇ?ಅವನು ಅವರ ಯೋಜನೆಯನ್ನು ನಿರರ್ಥಕಗೊಳಿಸಿ ಬಿಡಲಿಲ್ಲವೇ?ಮತ್ತು ಅವನು ಅವರ ಮೇಲೆ ಪಕ್ಷಿಗಳ ಗುಂಪುಗಳನ್ನೇ ಕಳುಹಿಸಿಬಿಟ್ಟನು.ಅವು ಅವರ ಮೇಲೆ ಸುಟ್ಟ ಮಣ್ಣಿನ ಕಲ್ಲುಗಳನ್ನು ಎಸೆಯುತ್ತಿದ್ದವು.ತರುವಾಯ ಅವನು ಅವರನ್ನು (ಪ್ರಾಣಿಗಳು) ತಿಂದು ಹಾಕಿದ ಹೊಟ್ಟಿನಂತೆ ಮಾಡಿಬಿಟ್ಟನು. [ಸೂರ ಅಲ್-ಫೀಲ್:1-5]

**ತಫ್ಸೀರ್ (ವಿವರಣೆ).**

1. **{ಆಲಂ ತರ ಕೈಫ ಫಅಲ ರಬ್ಬುಕ ಬಿ ಅಸ್‌ಹಾಬಿಲ್ ಫೀಲ್}:** ಓ ಪ್ರವಾದಿಯವರೇ! ಅಬ್ರಹ ಮತ್ತು ಅವನ ಸೈನಿಕರು —ಅಂದರೆ ಆನೆ ಸೇನೆಯ ಜನರು— ಕಅಬಾವನ್ನು ಕೆಡವಲು ಬಂದಾಗ ನಿಮ್ಮ ಪ್ರಭು ಏನು ಮಾಡಿದನೆಂದು ನಿಮಗೆ ತಿಳಿದಿಲ್ಲವೇ?

2. **{ಆಲಂ ಯಜ್‌ಅಲ್ ಕೈದಹುಮ್ ಫೀ ತದ್‌ಲೀಲ್ }:** ಅದನ್ನು ಕೆಡವಲು ಅವರು ಹೂಡಿದ ಕುತಂತ್ರವನ್ನು ಅಲ್ಲಾಹನು ಸಂಪೂರ್ಣ ವಿಫಲಗೊಳಿಸಿದನು . ಆದ್ದರಿಂದ, ಜನರನ್ನು ಕಅಬಾದಿಂದ ದೂರಗೊಳಿಸಬೇಕು ಎಂಬ ಅವರ ಆಸೆ ಕೈಗೂಡಲಿಲ್ಲ ಅವರಿಗೆ ವಿನಾಶದ ಹೊರತಾಗಿ ಬೇರೇನೂ ಸಿಗಲಿಲ್ಲ.

3. **{ವ ಅರ್ಸಲ ಅಲೈಹಿಂ ತ್ವೈರನ್ ಅಬಾಬೀಲ್}:** ಅವನು ಅವರ ವಿರುದ್ಧ ಹಿಂಡು ಹಿಂಡಾಗಿ ಬರುವ ಹಕ್ಕಿಗಳನ್ನು ಕಳುಹಿಸಿದನು.

4. **{ತರ್ಮೀಹಿಂ ಬಿಹಿಜಾರತಿಮ್ ಮಿನ್ ಸಿಜ್ಜೀಲ್}:** ಆ ಹಕ್ಕಿಗಳು ಅವರ ಮೇಲೆ ಸುಟ್ಟ ಜೇಡಿಮಣ್ಣಿನ ಕಲ್ಲುಗಳನ್ನು ಎಸೆಯುತ್ತಿದ್ದವು.

5. **{ ಫಜಅಲಹುಮ್ ಕಅಸ್ಫಿಮ್ ಮಅ್‌ಕೂಲ್}:** ನಂತರ ಅಲ್ಲಾಹನು ಅವರನ್ನು ಜಾನುವಾರುಗಳು ತಿಂದ ಮತ್ತು ತುಳಿದ ಎಲೆಗಳಂತೆ ಮಾಡಿದನು.

**ಪ್ರಶ್ನೆ 9. ಸೂರ ಖುರೈಶ್ ಅನ್ನು ಪಠಿಸಿ ಮತ್ತು ವಿವರಿಸಿ.**

**ಉತ್ತರ:** ಸೂರ ಖುರೈಶ್ ಮತ್ತು ಅದರ ವ್ಯಾಖ್ಯಾನ:

بِسۡمِ ٱللَّهِ ٱلرَّحۡمَٰنِ ٱلرَّحِيمِ

﴿لِإِيلَٰفِ قُرَيۡشٍ١ إِۦلَٰفِهِمۡ رِحۡلَةَ ٱلشِّتَآءِ وَٱلصَّيۡفِ٢ فَلۡيَعۡبُدُواْ رَبَّ هَٰذَا ٱلۡبَيۡتِ٣ ٱلَّذِيٓ أَطۡعَمَهُم مِّن جُوعٖ وَءَامَنَهُم مِّنۡ خَوۡفِۭ٤﴾ [قريش: 1-4].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಕುರೈಶರು ಪರಿಚಿತರಾದುದಕ್ಕಾಗಿ.(ಅಂದರೆ) ಚಳಿಗಾಲ ಮತ್ತು ಬೇಸಗೆಯ ಪ್ರಯಾಣಗಳಿಗೆ ಪರಿಚಿತರಾದುದಕ್ಕಾಗಿ. ಅವರು ಈ ಭವನದ ಪ್ರಭುವಿನ ಆರಾಧನೆ ಮಾಡಲಿ. ಅವನು ಅವರನ್ನು ಹಸಿವೆಯಿಂದ ಪಾರುಗೊಳಿಸಿ ಅವರಿಗೆ ಉಣಿಸಿದನು ಮತ್ತು ಭಯದಿಂದ ರಕ್ಷಿಸಿ ಶಾಂತಿ ಪ್ರದಾನ ಮಾಡಿದನು.** [ಸೂರ ಕುರೈಷ್:1- 4].

**ತಫ್ಸೀರ್ (ವಿವರಣೆ).**

1- **{ಲಿಈಲಾಫಿ ಖುರೈಶ್}** ಇಲ್ಲಿ ಹೇಳಿರುವುದು ಅವರಿಗೆ ಪರಿಚಿತವಾದ ಚಳಿಗಾಲ ಮತ್ತು ಬೇಸಿಗೆಯ ಪ್ರಯಾಣಗಳಾಗಿವೆ.

2. **{ಈಲಾಫಿಹಿಮ್ ರಿಹ್ಲತಶ್ಶಿತಾಇ ವಸ್ಸೈಫ್ }:** ಅವರು ಸುರಕ್ಷಿತವಾಗಿ ಚಳಿಗಾಲದಲ್ಲಿ ಯಮನ್ ಮತ್ತು ಬೇಸಿಗೆಯಲ್ಲಿ ಸಿರಿಯಾಗೆ ಕೈಗೊಳ್ಳುವ ಪ್ರಯಾಣಗಳು.

3. **{ಫಲ್ ಯಅ್‌ಬುದು ರಬ್ಬ ಹಾಧಲ್ ಬೈತ್ }:** ಅವರು ಈ ಪವಿತ್ರ ಭವನದ ಪ್ರಭುವಾದ ಅಲ್ಲಾಹನನ್ನು ಮಾತ್ರ ಆರಾಧಿಸಲಿ . ಅವನೇ ಅವರಿಗೆ ಈ ಪ್ರಯಾಣವನ್ನು ಸುಗಮಗೊಳಿಸಿದವನು; ಅವರು ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಲಿ.

4. **{ಅಲ್ಲಧೀ ಅತ್‌ಅಮಹುಮ್ ಮಿನ್ ಜೂಇನ್ ವಆಮನಹುಮ್ ಮಿನ್ ಖೌಫ್ }:** ಅವರಿಗೆ ಹಸಿವಾದಾಗ ಅವರಿಗೆ ಆಹಾರ ನೀಡಿದವನು ಮತ್ತು ಅವರಿಗೆ ಭಯವಾದಾಗ ಅವರಿಗೆ ನಿರ್ಭಯತೆ ನೀಡಿದವನು. ಅಲ್ಲಾಹು ಅರಬ್ಬರ ಹೃದಯಗಳಲ್ಲಿ ಹರಮ್ ಮತ್ತು ಅದರ ನಿವಾಸಿಗಳ ಬಗ್ಗೆ ಗೌರವನ್ನಿಟ್ಟದ್ದೇ ಇದಕ್ಕೆ ಕಾರಣವಾಗಿದೆ.

**ಪ್ರಶ್ನೆ 10. ಸೂರ ಅಲ್-ಮಾಊನ್ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಮಾಊನ್ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿أَرَءَيتَ ٱلَّذِي يُكَذِّبُ بِ ٱلدِّينِ١ فَذَٰلِكَ ٱلَّذِي يَدُعُّ ٱليَتِيمَ٢ وَلَا يَحُضُّ عَلَىٰ طَعَامِ ٱلمِسكِينِ٣ فَوَيل لِّلمُصَلِّينَ٤
ٱلَّذِينَ هُم عَن صَلَاتِهِم سَاهُونَ٥ ٱلَّذِينَ هُم يُرَآءُونَ٦ وَيَمنَعُونَ ٱلمَاعُونَ٧﴾ [الماعون: 1-7].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

ನೀವು ಕಂಡಿರಾ ಪರಲೋಕದ ಕರ್ಮಫಲಗಳನ್ನು ನಿರಾಕರಿಸುವವನನ್ನು?ಅವನೇ ತಾನೆ,ಅನಾಥನನ್ನು ದೂರ ದಬ್ಬುವವನು .ಮತ್ತು ದರಿದ್ರನಿಗೆ ಊಟ ಕೊಡಲು ಪ್ರೇರೇಪಿಸದವನು!ವಿನಾಶ ಕಾದಿದೆ ಆ ನಮಾಝ್ ನಿರ್ವಹಿಸುವವರಿಗೆ .ಅವರು ತಮ್ಮ ನಮಾಝಿನ ಬಗ್ಗೆ ಅನಾಸ್ಥೆ ತೋರುತ್ತಾರೆ,ಅವರು ತೋರಿಕೆಯ ಕೆಲಸ ಮಾಡುತ್ತಾರೆ .ಮತ್ತು (ಜನರಿಗೆ) ಸಾಮಾನ್ಯ ಅವಶ್ಯಕ ವಸ್ತುಗಳನ್ನು ಕೊಡುವುದಕ್ಕೂ ಹಿಂಜರಿಯುತ್ತಾರೆ. [ಸೂರ ಅಲ್-ಮಾಊನ್: 1-7].

**ತಫ್ಸೀರ್ (ವಿವರಣೆ).**

1. **{ಅರಐತಲ್ಲಧೀ ಯುಕದ್ದಿಬು ಬಿದ್ದೀನ್}:** ಪುನರುತ್ಥಾನ ದಿನದ ಪ್ರತಿಫಲವನ್ನು ನಿಷೇಧಿಸುವವನು ಯಾರೆಂದು ನಿಮಗೆ ತಿಳಿದಿದೆಯೇ?

2. **{ಫಧಾಲಿಕಲ್ಲಧೀ ಯದುಉ್ಉಲ್ ಯತೀಮ್ }:** ಅವನು ಅನಾಥರಿಗೆ ಅವರು ಕೇಳಿದ್ದನ್ನು ಕೊಡದೆ ನಿರ್ದಾಕ್ಷಿಣ್ಯವಾಗಿ ಅಟ್ಟುವವನು.

3. **{ವಲಾ ಯಹುದ್ದು ಅಲಾ ತಆಮಿಲ್ ಮಿಸ್ಕೀನ್ }:** ಬಡವರಿಗೆ ಆಹಾರ ನೀಡುಲು ತನಗಾಗಲಿ ಇತರರಿಗಾಗಲಿ ಪ್ರೇರಣೆ ನೀಡದವನು.

4. **{ಫವೈಲುಲ್ಲಿಲ್ ಮುಸಲ್ಲೀನ್}:** ಆದ್ದರಿಂದ, ನಮಾಝ್ ಮಾಡುವವರಿಗೆ ವಿನಾಶ ಮತ್ತು ಶಿಕ್ಷೆ ಕಾದಿದೆ.

5. **{ಅಲ್ಲಧೀನ ಹುಮ್ ಆನ್ ಸಲಾತಿಹಿಂ ಸಾಹೂನ್ }:** ಅವರು ತಮ್ಮ ನಮಾಝಿನ ಬಗ್ಗೆ ನಿರ್ಲಕ್ಷ್ಯರಾಗಿರುವರು. ಅದರ ಸಮಯ ಮುಗಿಯುವವರೆಗೂ ಅವರು ಅದರ ಬಗ್ಗೆ ಯೋಚಿಸುವುದಿಲ್ಲ.

6. **{ಅಲ್ಲಧೀನ ಹುಮ್ ಯುರಾಊನ್ }:** ಅವರು ತಮ್ಮ ನಮಾಝ್ ಮತ್ತು ಸತ್ಕರ್ಮಗಳನ್ನು ತೋರಿಕೆಗಾಗಿ ನಿರ್ವಹಿಸುತ್ತಾರೆ. ಅಲ್ಲಾಹನಿಗೆ ನಿಷ್ಕಳಂಕವಾಗಿ ನಿರ್ವಹಿಸುವುದಿಲ್ಲ.

7. **{ವಯಮ್ನಊನಲ್ ಮಾಊನ್}:** ಇತರರಿಗೆ ಸಹಾಯ ಮಾಡುವುದರಲ್ಲಿ ಯಾವುದೇ ತೊಂದರೆಯಾಗದ ಸಣ್ಣ ಸಣ್ಣ ವಿಷಯಗಳಲ್ಲೂ ಅವರು ಇತರರಿಗೆ ಸಹಾಯ ಮಾಡುವುದಿಲ್ಲ.

**ಪ್ರಶ್ನೆ 11. ಸೂರ ಅಲ್-ಕೌಸರ್ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಕೌಸರ್ ಮತ್ತು ಅದರ ವ್ಯಾಖ್ಯಾನ:

بِسۡمِ ٱللَّهِ ٱلرَّحۡمَٰنِ ٱلرَّحِيمِ

﴿إِنَّآ أَعۡطَيۡنَٰكَ ٱلۡكَوۡثَرَ١ فَصَلِّ لِرَبِّكَ وَٱنۡحَرۡ٢ إِنَّ شَانِئَكَ هُوَ ٱلۡأَبۡتَرُ٣﴾ [الكوثر: 1-3].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

(ಸಂದೇಶವಾಹಕರೇ) ನಾವು ನಿಮಗೆ ಕೌಸರ್ ದಯಪಾಲಿಸಿರುತ್ತೇವೆ . ನೀವಿನ್ನು ನಿಮ್ಮ ಪ್ರಭುವಿಗಾಗಿಯೇ ನಮಾಝ್ ನಿರ್ವಹಿಸಿರಿ ಮತ್ತು ಬಲಿದಾನ ನೀಡಿರಿ.ಖಂಡಿತವಾಗಿಯೂ ನಿಮ್ಮ ಶತ್ರುವೇ ಮೂಲ ಕಡಿಯಲ್ಪಟ್ಟವನಾಗಿರುವನು. [ಸೂರ ಅಲ್-ಕೌಸರ್:1-3]

**ತಫ್ಸೀರ್ (ವಿವರಣೆ).**

1. **{ಇನ್ನಾ ಆಅ್‌ತ್ಯೆನಾಕಲ್ ಕೌಸರ್ }:** ಓ ಪ್ರವಾದಿಯವರೇ, ನಾವು ನಿಮಗೆ ಹೇರಳ ಒಳಿತುಗಳನ್ನು ನೀಡಿದ್ದೇವೆ. ಸ್ವರ್ಗದಲ್ಲಿರುವ ಕೌಸರ್ ನದಿಯು ಅದರಲ್ಲೊಂದಾಗಿದೆ.

2. **{ಫಸಲ್ಲಿ ಲಿ ರಬ್ಬಿಕ ವನ್‌ಹರ್}:** ಆದ್ದರಿಂದ, ಇದಕ್ಕಾಗಿ ಅಲ್ಲಾಹನಿಗೆ ಧನ್ಯವಾದ ಸಲ್ಲಿಸಿರಿ. ಅಂದರೆ ಅವನಿಗೆ ಮಾತ್ರ ನಮಾಝ್ ಮತ್ತು ಬಲಿಕರ್ಮಗಳನ್ನು ನಿರ್ವಹಿಸಿರಿ. ಬಹುದೇವರಾಧಕರು ಅವರ ವಿಗ್ರಹಗಳ ಸಾಮೀಪ್ಯ ಪಡೆಯಲು ಬಲಿ ನೀಡುವಂತೆ ನೀವು ಮಾಡಬೇಡಿ.

3. **{ಇನ್ನ ಶಾನಿಅಕ ಹುವಲ್ ಅಬ್ತರ್ }:** ಅಂದರೆ ನಿಮ್ಮನ್ನು ದ್ವೇಷಿಸುವವನು . ಅವನು ಎಲ್ಲಾ ಒಳಿತುಗಳನ್ನು ನಿಷೇಧಿಸಲಾದವನು . ಅವನನ್ನು ಯಾರಾದರೂ ನೆನಪು ಮಾಡಿದರೂ ಕೆಟ್ಟದಾಗಿಯಲ್ಲದೆ ನೆನಪು ಮಾಡುವುದಿಲ್ಲ.

**ಪ್ರಶ್ನೆ 12. ಸೂರ ಅಲ್-ಕಾಫಿರೂನ್ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಕಾಫಿರೂನ್ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿قُل يَٰٓأَيُّهَا ٱلكَٰفِرُونَ١ لَآ أَعبُدُ مَا تَعبُدُونَ٢ وَلَآ أَنتُم عَٰبِدُونَ مَآ أَعبُدُ٣ وَلَآ أَنَا۠ عَابِد مَّا عَبَدتُّم٤ وَلَآ أَنتُم عَٰبِدُونَ مَآ أَعبُدُ٥ لَكُم دِينُكُم وَلِيَ دِينِ٦﴾ [الكافرون: 1-6].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

ಹೇಳಿ ಬಿಡಿರಿ! ಓ, ಸತ್ಯನಿಷೇಧಿಗಳೇ,ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ.ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವವರಲ್ಲ. ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ನಾನೂ ಮಾಡುವವನಲ್ಲ.ನಾನು ಆರಾಧಿಸುವವನನ್ನು ನೀವೂ

ಆರಾಧಿಸುವವರಲ್ಲ.ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ. [ಸೂರ ಅಲ್-ಕಾಫಿರೂನ್:1-6].

**ತಫ್ಸೀರ್ (ವಿವರಣೆ).**

1. **{ಖುಲ್ ಯಾ ಅಯ್ಯುಹಲ್ ಕಾಫಿರೂನ್ }:** ಓ ಪ್ರವಾದಿಯವರೇ, ಹೇಳಿರಿ: ಓ ಅಲ್ಲಾಹನನ್ನು ನಿಷೇಧಿಸಿದವರೇ!

2. **{ಲಾ ಅಅ್‌ಬುದು ಮಾ ತಅ್‌ಬುದೂನ್ }:** ಈಗಲಾಗಲಿ ಅಥವಾ ಭವಿಷ್ಯದಲ್ಲಾಗಲಿ ನೀವು ಆರಾಧಿಸುವ ವಿಗ್ರಹಗಳನ್ನು ನಾನು ಆರಾಧಿಸುವುದಿಲ್ಲ.

3. **{ವಲಾ ಅಂತುಮ್ ಆಬಿದೂನ ಮಾ ಅಅ್‌ಬುದ್ }:** ನಾನು ಆರಾಧಿಸುವವನನ್ನು —ಅಂದರೆ ಅಲ್ಲಾಹನನ್ನು ಮಾತ್ರ— ನೀವು ಆರಾಧಿಸುವುದಿಲ್ಲ.

4. **{ವಲಾ ಅನ ಆಬಿದುಮ್ಮಾ ಅಬತ್ತುಮ್ }:** ನೀವು ಆರಾಧಿಸುವ ವಿಗ್ರಹಗಳನ್ನು ನಾನು ಎಂದಿಗೂ ಆರಾಧಿಸುವುದಿಲ್ಲ.

5. **{ವಲಾ ಅಂತುಮ್ ಆಬಿದೂನ ಮಾ ಅಅ್‌ಬುದ್ }:** ನಾನು ಆರಾಧಿಸುವವನನ್ನು —ಅಂದರೆ ಅಲ್ಲಾಹನನ್ನು ಮಾತ್ರ— ನೀವು ಆರಾಧಿಸುವುದಿಲ್ಲ.

6. **{ಲಕುಮ್ ದೀನುಕುಮ್ ವಲಿಯ ದೀನ್ }:** ನೀವು ನಿಮಗಾಗಿ ಸ್ವಯಂ ನಿರ್ಮಿಸಿದ ನಿಮ್ಮ ಧರ್ಮವು ನಿಮಗೆ. ಅಲ್ಲಾಹು ನನಗೆ ಅವತೀರ್ಣಗೊಳಿಸಿದ ಧರ್ಮವು ನನಗೆ.

**ಪ್ರಶ್ನೆ 13. ಸೂರ ಅನ್ನಸ್ರ್ ಅನ್ನು ಪಠಿಸಿ ಮತ್ತು ವಿವರಿಸಿ.**

**ಉತ್ತರ:** ಸೂರ ಅನ್ನಸ್ರ್ ಮತ್ತು ಅದರ ವ್ಯಾಖ್ಯಾನ:

بِسمِ ٱللَّهِ ٱلرَّحمَٰنِ ٱلرَّحِيمِ

﴿إِذَا جَآءَ نَصرُ ٱللَّهِ وَٱلفَتحُ١ وَرَأَيتَ ٱلنَّاسَ يَدخُلُونَ فِي دِينِ ٱللَّهِ أَفوَاجا٢ فَسَبِّح بِحَمدِ رَبِّكَ وَ ٱستَغفِرهُۚ إِنَّهُۥ كَانَ تَوَّابَا٣﴾ [النصر: 1-3].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಅಲ್ಲಾಹನ ಸಹಾಯ ಬಂದು ಬಿಟ್ಟಾಗ ಮತ್ತು ವಿಜಯ ಪ್ರಾಪ್ತವಾದಾಗ ಮತ್ತು (ಸಂದೇಶವಾಹಕರೇ) ಜನರು ತಂಡೋಪತಂಡವಾಗಿ ಅಲ್ಲಾಹನ ಧರ್ಮದಲ್ಲಿ ಪ್ರವೇಶಿಸುತ್ತಿರುವುದನ್ನು ನೀವು ಕಂಡಾಗ.ನಿಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನ ಕೀರ್ತನೆ ಮಾಡಿರಿ ಮತ್ತು ಅವನೊಡನೆ ಕ್ಷಮೆ ಯಾಚಿಸಿರಿ. ನಿಸ್ಸಂದೇಹವಾಗಿಯೂ ಅವನು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನಾಗಿರುತ್ತಾನೆ.**

[ಸೂರ ಅನ್ನಸ್ರ್:1-3].

**ತಫ್ಸೀರ್ (ವಿವರಣೆ).**

1. **{ಇದಾ ಜಾಅ ನಸ್ರುಲ್ಲಾಹಿ ವಲ್ ಫತ್‌ಹ್ }:** ಓ ಪ್ರವಾದಿಯವರೇ, ಅಲ್ಲಾಹನ ವತಿಯಿಂದ ನಿಮ್ಮ ಧರ್ಮಕ್ಕೆ ವಿಜಯ ಮತ್ತು ಶಕ್ತಿ ಬಂದಾಗ ಮತ್ತು ಮಕ್ಕಾ ವಿಜಯ ಸಂಭವಿಸಿದಾಗ.

2. **{ವ ರಅಯ್ತನ್ನಾಸ ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್ವಾಜಾ }:** ಮತ್ತು ಜನರು ಒಂದರ ನಂತರ ಒಂದರಂತೆ ಗುಂಪು ಗುಂಪಾಗಿ ಇಸ್ಲಾಂ ಧರ್ಮಕ್ಕೆ ಬರುವುದನ್ನು ನೀವು ನೋಡಿದಾಗ.

3. **{ಫಸಬ್ಬಿಹ್ ಬಿಹಮ್ದಿ ರಬ್ಬಿಕ ವಸ್ತಗ್ಫಿರ್ಹು , ಇನ್ನಹೂ ಕಾನ ತವ್ವಾಬಾ }:** ಇದು ನಿಮ್ಮ ಕರ್ತವ್ಯದ ಸಮಾಪ್ತಿಯು ಹತ್ತಿರವಾಗುತ್ತಿದೆ ಎಂಬುದರ ಚಿಹ್ನೆಯಾಗಿದೆಯೆಂದು ನೀವು ತಿಳಿದಿರಬೇಕಾಗಿದೆ. ಆದ್ದರಿಂದ ಸಹಾಯ ಮತ್ತು ವಿಜಯ ನೀಡಿದ್ದಕ್ಕಾಗಿ ನಿಮ್ಮ ಪ್ರಭುವಿಗೆ ಕೃತಜ್ಞತೆ ಸಲ್ಲಿಸಲು ಅವನ ತಸ್ಬೀಹ್ ಮಾಡಿ ಮತ್ತು ಅವನಲ್ಲಿ ಕ್ಷಮೆಯಾಚಿಸಿ . ಏಕೆಂದರೆ ಅವನು ತನ್ನ ದಾಸರ ಪಶ್ಚಾತ್ತಾಪವನ್ನು ಸ್ವೀಕರಿಸುತ್ತಾನೆ ಮತ್ತು ಅವರನ್ನು ಕ್ಷಮಿಸುತ್ತಾನೆ.

**ಪ್ರಶ್ನೆ 14. ಸೂರ ಅಲ್-ಮಸದ್ ಅನ್ನು ಪಠಿಸಿ ಮತ್ತು ವಿವರಿಸಿ.**

**ಉತ್ತರ:** ಸೂರ ಅಲ್-ಮಸದ್ ಮತ್ತು ಅದರ ವ್ಯಾಖ್ಯಾನ:

بِسۡمِ ٱللَّهِ ٱلرَّحۡمَٰنِ ٱلرَّحِيمِ

﴿تَبَّتْ يَدَا أَبِي لَهَبٍ وَتَبَّ 1 مَا أَغْنَى عَنْهُ مَالُهُ وَمَا كَسَبَ 2 سَيَصْلَى نَارًا ذَاتَ لَهَبٍ 3 وَامْرَأَتُهُ حَمَّالَةَ الْحَطَبِ 4 فِي

جِيدِهَا حَبْلٌ مِنْ مَسَدٍ 5﴾ [سورة المسد: ١ – ٥].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಅಬೂಲಹಬನ ಕೈಗಳು ಮುರಿದು ಹೋದುವು ಮತ್ತು ಅವನು ನಾಶವಾದನು. ಅವನ ಸಂಪತ್ತಾಗಲಿ ಅವನ ಸಂಪಾದನೆ ಯಾಗಲಿ ಅವನ ಯಾವ ಕೆಲಸಕ್ಕೂ ಬರಲಿಲ್ಲ .ಖಂಡಿತವಾಗಿಯೂ ಅವನು ಧಗಧಗಿಸುವ ಅಗ್ನಿಯಲ್ಲಿ ಹಾಕಲ್ಪಡುವನು.ಮತ್ತು (ಅವನ ಜೊತೆ) ಸೌದೆಯನ್ನು ಹೊರುವವಳಾದ ಅವನ ಪತ್ನಿ ಕೂಡಾ .ಅವಳ ಕೊರಳಲ್ಲಿ ಖರ್ಜೂರ ಮರದ ನಾರಿನ ಹಗ್ಗವಿರುವುದು.**[ಸೂರ ಅಲ್-ಮಸದ್:1-5]

**ತಫ್ಸೀರ್ (ವಿವರಣೆ).**

1. **{ತಬ್ಬತ್ ಯದಾ ಅಬೀ ಲಹಬಿನ್ ವತಬ್ಬ್ }:** ಪ್ರವಾದಿಯ ತಂದೆಯ ಸಹೋದರ ಅಬೂ ಲಹಬ್ ಬಿನ್ ಅಬ್ದುಲ್ ಮುತ್ತಲಿಬ್‌ನ ಕೈಗಳು ನಾಶವಾಗಲಿ ಮತ್ತು ಅವನ ಪರಿಶ್ರಮಗಳು ವಿಫಲವಾಗಲಿ. ಏಕೆಂದರೆ ಅವನು ಪ್ರವಾದಿ(ಸ) ರಿಗೆ ಕಿರುಕುಳ ನೀಡುತ್ತಿದ್ದನು.

2. **{ಮಾ ಅಗ್‌ನಾ ಅನ್‌ಹು ಮಾಲುಹು ವಮಾ ಕಸಬ್}:** ಅವನ ಸಂಪತ್ತು ಮತ್ತು ಮಕ್ಕಳಿಂದ ಅವನಿಗೆ ಉಪಯೋಗವಾಗಿದೆಯೇ? ಇಲ್ಲ. ಅವನ ಸಂಪತ್ತು ಮತ್ತು ಮಕ್ಕಳು ಅವನನ್ನು ಶಿಕ್ಷೆಯಿಂದ ರಕ್ಷಿಸಲಿಲ್ಲ ಮತ್ತು ಅವನಿಗೆ ದಯಾಭಿಕ್ಷೆಯನ್ನೂ ಕೊಡಲಿಲ್ಲ.

3. **{ಸಯಸ್‌ಲಾ ನಾರನ್ ಝಾತ ಲಹಬ್}:** ಪುನರುತ್ಥಾನ ದಿನ ಅವನು ಜ್ವಾಲೆಗಳಿರುವ ನರಕವನ್ನು ಪ್ರವೇಶಿಸುವನು ಮತ್ತು ಅದರ ಬಿಸಿಯನ್ನು ಅನುಭವಿಸುವನು.

4. **{ವಮ್ರಅತುಹೂ ಹಮ್ಮಾಲತಲ್ ಹತಬ್}:** ಪ್ರವಾದಿ(ಸ) ನಡೆಯುವ ದಾರಿಯಲ್ಲಿ ಮುಳ್ಳುಗಳನ್ನು ಎಸೆಯುವ ಮೂಲಕ ಅವರಿಗೆ ಕಿರುಕುಳ ನೀಡುತ್ತಿದ್ದ ಅಬೂ ಲಹಬನ ಪತ್ನಿ ಉಮ್ಮು ಜಮೀಲ್ ಕೂಡ ನರಕವನ್ನು ಪ್ರವೇಶಿಸುಳು.

5. **{ಫೀ ಜೀದಿಹಾ ಹಬ್‌ಲುಮ್ಮಿಮ್ಮಸದ್}:** ಅವಳ ಕೊರಳಿಗೆ ಬಿಗಿಯಾಗಿ ಕಟ್ಟಲಾದ ಹಗ್ಗವಿರುವುದು ಅದರ ಮೂಲಕ ಅವಳನ್ನು ನರಕಕ್ಕೆ ಒಯ್ಯಲಾಗುವುದು.

**ಪ್ರಶ್ನೆ 15. ಸೂರ ಅಲ್-ಇಖ್ಲಾಸ್ ಅನ್ನು ಪಠಿಸಿ ಮತ್ತು ವಿವರಿಸಿ.**

**ಉತ್ತರ:** ಸೂರ ಅಲ್-ಇಖ್ಲಾಸ್ ಮತ್ತು ಅದರ ವ್ಯಾಖ್ಯಾನ:

بِسۡمِ ٱللَّهِ ٱلرَّحۡمَٰنِ ٱلرَّحِيمِ

﴿قُلۡ هُوَ ٱللَّهُ أَحَدٌ ١ ٱللَّهُ ٱلصَّمَدُ ٢ لَمۡ يَلِدۡ وَلَمۡ يُولَدۡ ٣ وَلَمۡ يَكُن لَّهُۥ كُفُوًا أَحَدُۢ ٤﴾ [الإخلاص: 1-4].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಹೇಳಿರಿ- ಅವನು ಅಲ್ಲಾಹನು ಏಕೈಕನು.ಅಲ್ಲಾಹನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು .ಅವನಿಗೆ ಯಾವುದೇ ಸಂತಾನವಿಲ್ಲ , ಅವನು ಯಾರ ಸಂತಾನವೂ ಅಲ್ಲ.ಅವನಿಗೆ ಸರಿಸಮಾನರು ಯಾರೂ ಇಲ್ಲ.** [ಸೂರ ಅಲ್-ಇಖ್ಲಾಸ್:1-4].

**ತಫ್ಸೀರ್ (ವಿವರಣೆ).**

1. **{ಕುಲ್ ಹುವಲ್ಲಾಹು ಅಹದ್ }:** ಓ ಪ್ರವಾದಿಯವರೇ, ಹೇಳಿರಿ: ಅವನು ಅಲ್ಲಾಹು; ಅವನ ಹೊರತು ಆರಾಧನೆಗೆ ಅರ್ಹರಾದ ಅನ್ಯ ದೇವರಿಲ್ಲ.

2. **{ಅಲ್ಲಾಹು ಸ್ಸಮದ್}:** ಅಂದರೆ, ಸೃಷ್ಟಿಯ ಎಲ್ಲಾ ಅಗತ್ಯಗಳನ್ನು ಅವನೆಡೆಗೆ ಎತ್ತಲಾಗುತ್ತದೆ.

3. {ಲಮ್ ಯಲಿದ್ ವಲಮ್ ಯೂಲದ್ }: ಸರ್ವಶಕ್ತನಾದ ಅವನಿಗೆ ಯಾವುದೇ ಮಕ್ಕಳಿಲ್ಲ ಮತ್ತು ತಂದೆಯೂ ಇಲ್ಲ.

4. **{ವ ಲಮ್ ಯಕುಲ್ಲಹೂ ಕುಫುವನ್ ಅಹದ್}:** ಅವನ ಸೃಷ್ಟಿಗಳಲ್ಲಿ ಯಾರೂ ಅವನಂತೆ ಇಲ್ಲ.

**ಪ್ರಶ್ನೆ 16. ಸೂರ ಅಲ್-ಫಲಕ್ ಅನ್ನು ಪಠಿಸಿ ಮತ್ತು ವಿವರಿಸಿ.**

ಉತ್ತರ: ಸೂರ ಅಲ್-ಫಲಕ್ ಮತ್ತು ಅದರ ವ್ಯಾಖ್ಯಾನ:

بِسۡمِ ٱللَّهِ ٱلرَّحۡمَٰنِ ٱلرَّحِيمِ

﴿قُلۡ أَعُوذُ بِرَبِّ ٱلۡفَلَقِ ١ مِن شَرِّ مَا خَلَقَ ٢ وَمِن شَرِّ غَاسِقٍ إِذَا وَقَبَ ٣ وَمِن شَرِّ ٱلنَّفَّٰثَٰتِ فِي ٱلۡعُقَدِ ٤ وَمِن شَرِّ حَاسِدٍ إِذَا حَسَدَ﴾ [الفلق: 1-5].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**ಹೇಳಿರಿ- ನಾನು ಪ್ರಭಾತದ ಪ್ರಭುವಿನ ಅಭಯ ಯಾಚಿಸುತ್ತೇನೆ.ಅವನು(ಅಲ್ಲಾಹನು) ಸೃಷ್ಟಿಸಿದ ಸಕಲ ವಸ್ತುಗಳ ಕೇಡಿನಿಂದ .ಇರುಳಿನ ಅಂಧಕಾರವು ಕವಿದಾಗ ಉಂಟಾಗುವ ಕೇಡಿನಿಂದ. ಗಂಟುಗಳ ಮೇಲೆ ಊದುವವರ (ಸ್ತ್ರೀಯರ) ಕೇಡಿನಿಂದ. ಮತ್ತು ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ (ಅಭಯ ಯಾಚಿಸುತ್ತೇನೆ).** [ಸೂರ ಅಲ್-ಫಲಕ್:1-5]

**ತಫ್ಸೀರ್ (ವಿವರಣೆ).**

1. **{ಖುಲ್ ಅಊಝು ಬಿರಬ್ಬಿಲ್ ಫಲಖ್ }:** ಓ ಪ್ರವಾದಿಯವರೇ, ಹೇಳಿರಿ: ನಾನು ಪ್ರಭಾತದ ಪ್ರಭುವಿನೊಡನೆ ರಕ್ಷೆ ಮತ್ತು ಆಶ್ರಯ ಬೇಡುತ್ತೇನೆ.

2. **{ಮಿನ್ ಶರ್‍ರಿ ಮಾ ಖಲಕ್}:** ಹಿಂಸಾತ್ಮಕ ಜೀವಿಗಳ ಕೆಡುಕಿನಿಂದ.

3. **{ವ ಮಿನ್ ಶರ್‍ರಿ ಗಾಸಿಕಿನ್ ಇಧಾ ವಕಬ್}:** ರಾತ್ರಿಯಲ್ಲಿ ಪ್ರಾಣಿಗಳು ಮತ್ತು ಕಳ್ಳರಿಂದ ಉಂಟಾಗುವ ಕೆಡುಕುಗಳಿಂದ ನಾನು ಅಲ್ಲಾಹನಲ್ಲಿ ರಕ್ಷೆ ಬೇಡುತ್ತೇನೆ.

4. **{ವ ಮಿನ್ ಶರ್‍ರಿ ನ್ನಫ್ಫಾಸಾತಿ ಫಿಲ್ ಉಕದ್ }:** ಮತ್ತು ಗಂಟುಗಳ ಮೇಲೆ ಊದುವ ಮಾಟಗಾರರ ಕೆಡುಕುಗಳಿಂದ ನಾನು ಅಲ್ಲಾಹನಲ್ಲಿ ರಕ್ಷೆ ಬೇಡುತ್ತೇನೆ.

5. **{ವ ಮಿನ್ ಶರ್‍ರಿಲ ಹಾಸಿದಿನ್ ಇಧಾ ಹಸದ್}:** ಅಸೂಯೆಗಾರ ಮತ್ತು ಜನರಿಗೆ ಅಲ್ಲಾಹು ದಯಪಾಲಿಸಿದ ಅನುಗ್ರಹಗಳು ಅವರಿಂದ ನಿವಾರಣೆಯಾಗಬೇಕು ಮತ್ತು ಅವರಿಗೆ ಹಾನಿಯಾಗಬೇಕೆಂದು ಬಯಸುವ ಮನುಷ್ಯ ದ್ವೇಷಿಯ ಕೆಡುಕುಗಳಿಂದ ನಾನು ಅಲ್ಲಾಹನಲ್ಲಿ ರಕ್ಷೆ ಬೇಡುತ್ತೇನೆ.

**ಪ್ರಶ್ನೆ 17. ಸೂರ ಅನ್ನಾಸ್ ಅನ್ನು ಪಠಿಸಿ ಮತ್ತು ವಿವರಿಸಿ.**

**ಉತ್ತರ:** ಸೂರ ಅನ್ನಾಸ್ ಮತ್ತು ಅದರ ವ್ಯಾಖ್ಯಾನ:

بِسۡمِ ٱللَّهِ ٱلرَّحۡمَٰنِ ٱلرَّحِيمِ

﴿قُلۡ أَعُوذُ بِرَبِّ ٱلنَّاسِ ١ مَلِكِ ٱلنَّاسِ ٢ إِلَٰهِ ٱلنَّاسِ ٣ مِن شَرِّ ٱلۡوَسۡوَاسِ ٱلۡخَنَّاسِ ٤ ٱلَّذِي يُوَسۡوِسُ فِي صُدُورِ ٱلنَّاسِ ٥ مِنَ

ٱلۡجِنَّةِ وَٱلنَّاسِ٦﴾ [الناس: 1–6].

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

**"ಹೇಳಿರಿ- ನಾನು ಮಾನವರ ಪ್ರಭುವಿನ ಅಭಯ ಯಾಚಿಸುತ್ತೇನೆ.ಮಾನವರ ಸಾಮ್ರಾಟನ. ಮಾನವರ ನೈಜ ಆರಾಧ್ಯನ . ಪದೇಪದೇ ಬಂದು ದುಷ್ಪ್ರೇರಣೆ ನೀಡುವವನ ಕೇಡಿನಿಂದ. ಜನರ ಮನಸ್ಸುಗಳಲ್ಲಿ ದುಷ್ಪ್ರೇರಣೆ ಉಂಟು ಮಾಡುವವನ ಕೇಡಿನಿಂದ . ಅವನು ಜಿನ್‌ನ್‌ಗಳ ಪೈಕಿಯಾಗಿರಲಿ, ಮಾನವರ ಪೈಕಿಯಾಗಿರಲಿ.** [ಸೂರ ಅನ್ನಾಸ್:1-6].

**ತಫ್ಸೀರ್ (ವಿವರಣೆ):**

1. **{ಕುಲ್ ಅಊಝು ಬಿರಬ್ಬಿ ನ್ನಾಸ್ }:** ಓ ಪ್ರವಾದಿಯವರೇ, ಹೇಳಿರಿ: ನಾನು ಮನುಷ್ಯರ ಪ್ರಭುವಿನೊಡನೆ ರಕ್ಷೆ ಮತ್ತು ಆಶ್ರಯ ಬೇಡುತ್ತೇನೆ.

2. **{ಮಲಿಕಿನ್ನಾಸ್}:** ಅವರ ಕೆಲಸ-ಕಾರ್ಯಗಳಲ್ಲಿ ಅವನು ಅವನಿಷ್ಟದಂತೆ ವ್ಯವಹರಿಸುತ್ತಾನೆ . ಅವನ ಹೊರತು ಅವರಿಗೆ ಬೇರೆ ಯಜಮಾನರಿಲ್ಲ.

3. **{ಇಲಾಹಿನ್ನಾಸ್}:** ಅವನೇ ನಿಜವಾದ ಆರಾಧ್ಯ . ಅವನ ಹೊರತು ಅವರಿಗೆ ಬೇರೆ ನಿಜವಾದ ಆರಾಧ್ಯರಿಲ್ಲ.

4. {ಮಿನ್ ಶರ್ರಿ:ಲ್ ವಸ್ವಾಸಿಲ್ ಖನ್ನಾಸ್ }: ಜನರಿಗೆ ದುರ್ಭೋಧನೆ ಮಾಡುವ ಶೈತಾನನ ಕೆಡುಕಿನಿಂದ.

5. **{ಅಲ್ಲಧೀ ಯುವಸ್ವಿಸು ಫೀ ಸುಜೂರಿನ್ನಾಸ್ }:** ಜನರ ಹೃದಯಗಳಲ್ಲಿ ದುರ್ಬೋಧನೆಗಳನ್ನು ಹಾಕುವವನ ಕೆಡುಕಿನಿಂದ

6. **{ಮಿನಲ್ ಜಿನ್ನತಿ ವನ್ನಾಸ್}:** ಅಂದರೆ, ದುರ್ಬೋಧನೆ ನೀಡುವವನು ಮನುಷ್ಯರಲ್ಲಿ ಸೇರಿದವನು ಅಥವಾ ಜಿನ್‌ನ್‌ಗಳಲ್ಲಿ ಸೇರಿದವನು ಆಗಿರಬಹುದು.

*******

# ಹದೀಸ್ ವಿಭಾಗ

## ಮೊದಲನೇ ಹದೀಸ್

**ಪ್ರಶ್ನೆ 1. ಹದೀಸ್ ಅನ್ನು ಪೂರ್ಣಗೊಳಿಸಿ : ‹«إنما الأعمال بالنيات...» ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಅಮೀರುಲ್ ಮೂಮಿನೀನ್ ಅಬು ಹಫ್ಸ್ ಉಮರ್ ಬಿನ್ ಖತ್ತಾಬ್ رَضِيَ اللَّهُ عَنْهُ ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು ﷺ ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ:**“ಕರ್ಮಗಳು ಉದ್ದೇಶಗಳ ಮೇಲೆ ಅವಲಂಬಿತವಾಗಿವೆ. ಪ್ರತಿಯೊಬ್ಬ ವ್ಯಕ್ತಿಯೂ ತಾನು ಉದ್ದೇಶಿಸಿದ್ದನ್ನು ಮಾತ್ರ ಹೊಂದಿರುತ್ತಾನೆ . ಆದ್ದರಿಂದ ಯಾರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಕಡೆಗೆ ವಲಸೆ ಹೋದನೋ ; ಅವನ ವಲಸೆಯು ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕರಿಗಾಗಿದೆ. ಯಾರು ಲೌಕಿಕ ಪ್ರಯೋಜನಗಳಿಗಾಗಿ ಅಥವಾ ಒಬ್ಬ ಮಹಿಳೆಯನ್ನು ಮದುವೆಯಾಗಲು ವಲಸೆ ಹೋದನೋ; ಅವನ ವಲಸೆಯು ಅವನು ವಲಸೆ ಹೋದುದಕ್ಕಾಗಿದೆ .”** [ಬುಖಾರಿ ಮತ್ತು ಮುಸ್ಲಿಂ]

**ಹದೀಸಿನ ಪ್ರಯೋಜನಗಳು:**

1- ಪ್ರತಿಯೊಂದು ಕರ್ಮವೂ ಒಂದು ಉದ್ದೇಶವನ್ನು ಹೊಂದಿಯೇ ಇರುತ್ತದೆ . ಉದಾ: ನಮಾಜ್, ಉಪವಾಸ, ಹಜ್ಜ್ ಮತ್ತು ಇತರೆ ಕರ್ಮಗಳು.

2- ಉದ್ದೇಶವನ್ನು ಸರ್ವಶಕ್ತನಾದ ಅಲ್ಲಾಹನಿಗೆ ನಿಷ್ಕಳಂಕಗೊಳಿಸುವುದು ಕಡ್ಡಾಯವಾಗಿದೆ.

## * ಎರಡನೇ ಹದೀಸ್

**ಪ್ರಶ್ನೆ 2. ‹" من أحدث في أمرنا هذا... " ಎಂಬ ಹದೀಸ್ ಅನ್ನು ಪೂರ್ಣಗೊಳಿಸಿ ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಸತ್ಯವಿಶ್ವಾಸಿಗಳ ಮಾತೆ ಉಮ್ಮು ಅಬ್ದುಲ್ಲಾ ಆಯಿಷಾ رَضِيَ اللَّهُ عَنْهَا ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು **: "ಯಾರು ನಮ್ಮ ಈ ಧರ್ಮದ ವಿಷಯದಲ್ಲಿ ಅದರಲ್ಲಿಲ್ಲದ ಏನನ್ನಾದರೂ ಆವಿಷ್ಕರಿಸಿದರೆ, ಅದು ತಿರಸ್ಕೃತವಾಗಿದೆ."** [ಬುಖಾರಿ ಮತ್ತು ಮುಸ್ಲಿಂ]

**ಹದೀಸಿನ ಪ್ರಯೋಜನಗಳು:**

1- ಧರ್ಮದಲ್ಲಿ ಹೊಸ ಆವಿಷ್ಕಾರಗಳ ನಿಷೇಧ.

2- ಹೊಸದಾಗಿ ಆವಿಷ್ಕರಿಸಲಾದ ಕರ್ಮಗಳು ತಿರಸ್ಕೃತವಾಗಿವೆ. ಅವು ಸ್ವೀಕಾರಯೋಗ್ಯವಲ್ಲ.

### ಮೂರನೇ ಹದೀಸ್:

**ಪ್ರಶ್ನೆ 3. ಹದೀಸ್ ಅನ್ನು ಪೂರ್ಣಗೊಳಿಸಿ ‹" ...بينما نحن جلوس عند رسول الله ﷺ"ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಉಮರ್ ಇಬ್ನ್ ಅಲ್ -ಖತ್ತಾಬ್ (ರ) ರಿಂದ ವರದಿ: **ಒಂದು ದಿನ ನಾವು ಅಲ್ಲಾಹನ ಸಂದೇಶವಾಹಕರ(ಸ) ಬಳಿ ಕುಳಿತಿದ್ದೆವು. ಆಗ ಶುಭ್ರ ಬಿಳಿ ಬಣ್ಣದ ಬಟ್ಟೆ ಧರಿಸಿದ ಮತ್ತು ಕಡುಗಪ್ಪು ಕೂದಲನ್ನು ಹೊಂದಿದ್ದ ಒಬ್ಬ ವ್ಯಕ್ತಿ ಅಲ್ಲಿಗೆ ಬಂದರು. ಅವರಲ್ಲಿ ಪ್ರಯಾಣದ ಯಾವುದೇ ಕುರುಹು ಗೋಚರಿಸುತ್ತಿರಲಿಲ್ಲ. ನಮ್ಮಲ್ಲಿ ಯಾರಿಗೂ ಅವರ ಪರಿಚಯವಿರಲಿಲ್ಲ . ಎಲ್ಲಿಯವರೆಗೆಂದರೆ ಅವರು ಪ್ರವಾದಿ(ಸ) ರವರ ಬಳಿ ಬಂದು (ಎರಡು ಕಾಲುಗಳನ್ನು ಮಡಚಿಟ್ಟು ), ತಮ್ಮ ಮೊಣಕಾಲನ್ನು ಪ್ರವಾದಿ(ಸ) ರವರ ಮೊಣಕಾಲಿಗೆ ತಾಗಿಸಿ ಕುಳಿತರು . ನಂತರ ತಮ್ಮ ಕೈಯನ್ನು ತೊಡೆಯ ಮೇಲಿಟ್ಟು ಹೇಳಿದರು: “ಓ ಮುಹಮ್ಮದ್! ನನಗೆ ಇಸ್ಲಾಮಿನ ಬಗ್ಗೆ ತಿಳಿಸಿಕೊಡಿ .” ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು: “ಇಸ್ಲಾಮ್ ಎಂದರೆ ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಅನ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್ (ಸ) ಅಲ್ಲಾಹನ ಸಂದೇಶವಾಹಕರು ಎಂದು ಸಾಕ್ಷ್ಯವಹಿಸುವುದು, ನಮಾಝ್ ಸಂಸ್ಥಾಪಿಸುವುದು, ಝಕಾತ್ ನೀಡುವುದು, ರಮದಾನ್ ತಿಂಗಳಲ್ಲಿ**

ಉಪವಾಸ ಆಚರಿಸುವುದು ಮತ್ತು ಕಅಬಾಲಯಕ್ಕೆ ತಲುಪುವ ಸಾಮರ್ಥ್ಯವಿದ್ದರೆ ಕಅಬಾಲಯಕ್ಕೆ ತಲುಪಿ ಹಜ್ಜ್ ನಿರ್ವಹಿಸುವುದು." ಆ ವ್ಯಕ್ತಿ ಹೇಳಿದರು: "ನೀವು ಹೇಳಿದ್ದು ಸತ್ಯ." ಆ ವ್ಯಕ್ತಿ ಪ್ರಶ್ನೆ ಕೇಳಿ ನಂತರ ಅದನ್ನು ಸತ್ಯವೆಂದು ದೃಢೀಕರಿಸುವುದನ್ನು ನೋಡಿ ನಮಗೆ ಅಚ್ಚರಿಯಾಯಿತು ! ಅವರು ಹೇಳಿದರು: "ನನಗೆ ಈಮಾನಿನ ಬಗ್ಗೆ ತಿಳಿಸಿಕೊಡಿ ." ಪ್ರವಾದಿ(ಸ) ರವರು ಉತ್ತರಿಸಿದರು: "ಈಮಾನ್ ಎಂದರೆ ಅಲ್ಲಾಹನಲ್ಲಿ, ಅವನ ಮಲಕ್ ಗಳಲ್ಲಿ (ದೇವದೂತರಲ್ಲಿ) , ಅವನ ಗ್ರಂಥಗಳಲ್ಲಿ, ಅವನ ಸಂದೇಶವಾಹಕರುಗಳಲ್ಲಿ, ಅಂತ್ಯದಿನದಲ್ಲಿ ಮತ್ತು ವಿಧಿಯಲ್ಲಿ — ಅದರ ಒಳಿತು ಮತ್ತು ಕೆಡುಕುಗಳಲ್ಲಿ — ವಿಶ್ವಾಸವಿಡುವುದು." ಆ ವ್ಯಕ್ತಿ ಹೇಳಿದರು : "ನೀವು ಹೇಳಿದ್ದು ಸತ್ಯ." ಆ ವ್ಯಕ್ತಿ ಹೇಳಿದರು: "ನನಗೆ ಇಹ್ಸಾನ್‌ನ ಬಗ್ಗೆ ತಿಳಿಸಿಕೊಡಿ ." ಪ್ರವಾದಿ(ಸ) ರವರು ಉತ್ತರಿಸಿದರು: "ಇಹ್ಸಾನ್ ಎಂದರೆ ನೀವು ಅಲ್ಲಾಹನನ್ನು ನೋಡುತ್ತಿರುವಂತೆ ಅವನನ್ನು ಆರಾಧಿಸುವುದು. ನೀವು ಅವನನ್ನು ನೋಡುವುದಿಲ್ಲವಾದರೂ ಅವನು ನಿಮ್ಮನ್ನು ನೋಡುತ್ತಿದ್ದಾನೆ ." ಆ ವ್ಯಕ್ತಿ ಹೇಳಿದರು : "ನನಗೆ ಅಂತ್ಯದಿನದ ಬಗ್ಗೆ ತಿಳಿಸಿಕೊಡಿ ." ಪ್ರವಾದಿ(ಸ) ರವರು ಉತ್ತರಿಸಿದರು: "ಅಂತ್ಯದಿನದ ಬಗ್ಗೆ ಪ್ರಶ್ನೆ ಕೇಳಲಾದವರಿಗೆ ಪ್ರಶ್ನೆ ಕೇಳಿದವರಿಗಿಂತಲೂ ಹೆಚ್ಚು ಜ್ಞಾನವಿಲ್ಲ." ಆ ವ್ಯಕ್ತಿ ಹೇಳಿದರು: "ಹಾಗಾದರೆ, ನನಗೆ ಅದರ ಚಿಹ್ನೆಗಳ ಬಗ್ಗೆ ತಿಳಿಸಿಕೊಡಿ." ಪ್ರವಾದಿ(ಸ) ರವರು ಹೇಳಿದರು: "ದಾಸಿ ತನ್ನ ಒಡತಿಗೆ ಜನ್ಮ ನೀಡುವುದು ಮತ್ತು ನಗ್ನ ಪಾದಗಳ ಹಾಗೂ ನಗ್ನ ದೇಹಗಳ ಬಡ ಕುರಿಗಾಹಿಗಳು ಗಗನಚುಂಬಿ ಕಟ್ಟಡಗಳನ್ನು ಕಟ್ಟುವುದರಲ್ಲಿ ಪರಸ್ಪರ ಅಹಂಭಾವಪಡುವುದು ಅದರ ಚಿಹ್ನೆಗಳಾಗಿವೆ." ನಂತರ ಆ ವ್ಯಕ್ತಿ ಹೊರಟುಹೋದರು . ನಾನು ಪ್ರವಾದಿ(ಸ) ರವರ ಬಳಿ ಸ್ವಲ್ಪ ಹೊತ್ತು ಕುಳಿತುಕೊಂಡೆ. ನಂತರ ಪ್ರವಾದಿ(ಸ) ರವರು ಕೇಳಿದರು: "ಓ ಉಮರ್! ಪ್ರಶ್ನೆ ಕೇಳಿದ ವ್ಯಕ್ತಿ ಯಾರೆಂದು ತಮಗೆ ತಿಳಿದಿದೆಯೇ?" ನಾನು ಹೇಳಿದೆ: "ಅಲ್ಲಾಹು ಮತ್ತು ಅವನ ಸಂದೇಶವಾಹಕರೇ ಹೆಚ್ಚು ಬಲ್ಲವರು." ಅವರು ಹೇಳಿದರು: "ಅವರು ಜಿಬ್ರೀಲ್(ಅ). ನಿಮಗೆ ನಿಮ್ಮ ಧರ್ಮವನ್ನು ಕಲಿಸಲು ನಿಮ್ಮ ಬಳಿಗೆ ಬಂದಿದ್ದರು." [ಮುಸ್ಲಿಮ್].

ಹದೀಸಿನ ಪ್ರಯೋಜನಗಳು:

ಇಸ್ಲಾಂ ಧರ್ಮದ ಐದು ಸ್ತಂಭಗಳನ್ನು ಉಲ್ಲೇಖಿಸಲಾಗಿದೆ. ಅವು;

1- ಅಲ್ಲಾಹನ ಹೊರತು ಬೇರೆ ದೇವರು ಇಲ್ಲ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕರು ಎಂಬ ಸಾಕ್ಷಿವಚನ.

2- ನಮಾಝನ್ನು ಸಂಸ್ಥಾಪಿಸುವುದು.

3- ಝಕಾತ್ ನೀಡುವುದು.

4- ರಮದಾನ್ ತಿಂಗಳಲ್ಲಿ ಉಪವಾಸ ಆಚರಿಸುವುದು.

5- ಅಲ್ಲಾಹನ ಪವಿತ್ರ ಭವನಕ್ಕೆ ಹಜ್ಜ್ ನಿರ್ವಹಿಸುವುದು.

**ಈಮಾನಿನ ಆರು ಸ್ತಂಭಗಳನ್ನು ಉಲ್ಲೇಖಿಸಲಾಗಿದೆ. ಅವು;**

1- ಅಲ್ಲಾಹನಲ್ಲಿ ವಿಶ್ವಾಸವಿಡುವುದು.

2- ಅವನ ಮಲಕ್(ದೇವಚರ)ರಲ್ಲಿ ವಿಶ್ವಾಸವಿಡುವುದು.

3- ಅವನ ಗ್ರಂಥಗಳಲ್ಲಿ ವಿಶ್ವಾಸವಿಡುವುದು.

4- ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು.

5- ಅಂತ್ಯ ದಿನದಲ್ಲಿ ವಿಶ್ವಾಸವಿಡುವುದು.

6- ವಿಧಿಯಲ್ಲಿ - ಅದರ ಒಳಿತು ಮತ್ತು ಕೆಡುಕುಗಳಲ್ಲಿ - ವಿಶ್ವಾಸವಿಡುವುದು.

**ಇಹ್ಸಾನ್ ಬಗ್ಗೆ ಉಲ್ಲೇಖಿಸಲಾಗಿದೆ.** ಇದಕ್ಕಿರುವುದು ಒಂದೇ ಸ್ತಂಭ . ಅಂದರೆ ನೀವು ಅಲ್ಲಾಹನನ್ನು ನೋಡುವಂತೆ ಅವನನ್ನು ಆರಾಧಿಸುವುದು . ನೀವು ಅವನನ್ನು ನೋಡದಿದ್ದರೂ ಅವನು ನಿಮ್ಮನ್ನು ನೋಡುತ್ತಿದ್ದಾನೆಂಬ ಪ್ರಜ್ಞೆಯನ್ನು ಹೊಂದಿರುವುದು.

**ಅಂತ್ಯದಿನ ಸಂಭವಿಸುವ ಸಮಯದ ಬಗ್ಗೆ ಉಲ್ಲೇಖಿಸಲಾಗಿದೆ** . ಅದು ಯಾವಾಗ ಎಂದು ಸರ್ವಶಕ್ತನಾದ ಅಲ್ಲಾಹುವಿಗೆ ಮಾತ್ರ ತಿಳಿದಿದೆ.

## ನಾಲ್ಕನೇ ಹದೀಸ್

**ಪ್ರಶ್ನೆ 4. ،"...أكمل المؤمنين إيمانًا" ಎಂಬ ಹದೀಸ್ ಅನ್ನು ಪೂರ್ಣಗೊಳಿಸಿ ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

ಉತ್ತರ: ಅಬು ಹುರೈರಾ رَضِيَ اللَّهُ عَنْهُ ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು ﷺ ಹೇಳುತ್ತಾರೆ: **"ಅತ್ಯುತ್ತಮ ಗುಣನಡವಳಿಕೆಯನ್ನು ಹೊಂದಿರುವವರು ಯಾರೋ ಅವರೇ ಸಂಪೂರ್ಣ ಈಮಾನನ್ನು ಹೊಂದಿರುವ ವಿಶ್ವಾಸಿಗಳು ."** [ತಿರ್ಮಿದಿ. ಈ ಹದೀಸನ್ನು ಅವರು ಹಸನ್ ಸಹೀಹ್ ಎಂದಿದ್ದಾರೆ].

**ಹದೀಸಿನ ಪ್ರಯೋಜನಗಳು:**

1- ಉತ್ತಮ ನಡವಳಿಕೆಯನ್ನು ಪ್ರೋತ್ಸಾಹಿಸಲಾಗಿದೆ.

2- ಈಮಾನಿನ ಸಂಪೂರ್ಣತೆಯು ಗುಣನಡವಳಿಕೆಯ ಸಂಪೂರ್ಣತೆಯನ್ನು ಅವಲಂಬಿಸಿದೆ.

3- ಈಮಾನ್ (ವಿಶ್ವಾಸ) ಹೆಚ್ಚಾಗುತ್ತದೆ ಮತ್ತು ಕಡಿಮೆಯಾಗುತ್ತದೆ.

## ಐದನೆಯ ಹದೀಸ್

**ಪ್ರಶ್ನೆ 5: ಹದೀಸ್ ಅನ್ನು ಪೂರ್ಣಗೊಳಿಸಿ : ‹"...من حلف بغيرالله " ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

ಉತ್ತರ: ಇಬ್ನ್ ಉಮರ್ رَضِيَ اللَّهُ عَنْهُمَا ರಿಂದ ವರದಿ. ಪ್ರವಾದಿ ﷺ ಹೇಳಿದರು : **"ಯಾರು ಅಲ್ಲಾಹು ಅಲ್ಲದವರ ಮೇಲೆ ಆಣೆ (ಪ್ರಮಾಣ) ಮಾಡುತ್ತಾನೋ; ಅವನು ಸತ್ಯನಿಷೇಧಿಯಾದನು ಅಥವಾ ಬಹುದೇವವಿಶ್ವಾಸಿಯಾದನು."** [ತಿರ್ಮಿದಿ]

**ಹದೀಸಿನ ಪ್ರಯೋಜನಗಳು:**

1- ಅಲ್ಲಾಹನಲ್ಲದೆ ಇತರ ಯಾರ ಮೇಲೂ ಪ್ರಮಾಣ ಮಾಡಬಾರದು.

2- ಅಲ್ಲಾಹು ಅಲ್ಲದವರ ಮೇಲೆ ಪ್ರಮಾಣ (ಆಣೆ) ಮಾಡುವುದು ಸಣ್ಣ ಶಿರ್ಕ್ ಆಗಿದೆ.

## ಆರನೇ ಹದೀಸ್

**ಪ್ರಶ್ನೆ6. ಹದೀಸ್ ಅನ್ನು ಪೂರ್ಣಗೊಳಿಸಿ : ‹"...لايؤمن أحدكم حتى أكون أحب إليه"ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಅನಸ್ رَضِيَ اللَّهُ عَنْهُ ರಿಂದ ವರದಿ. ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು: **"ನಿಮ್ಮ ತಂದೆ-ತಾಯಿ, ಮಕ್ಕಳು ಮತ್ತು ಇತರೆಲ್ಲಾ ಜನರಿಗಿಂತ ಹೆಚ್ಚು ನಾನು ನಿಮಗೆ ಪ್ರಿಯನಾಗುವವರೆಗೂ ನಿಮ್ಮಲ್ಲಿ ಯಾರೂ ಸಂಪೂರ್ಣ ವಿಶ್ವಾಸಿಯಾಗಲಾರರು."** [ಬುಖಾರಿ ಮತ್ತು ಮುಸ್ಲಿಂ]

**ಹದೀಸಿನ ಪ್ರಯೋಜನಗಳು:**

1- ಪ್ರವಾದಿ ﷺ ರನ್ನು ಎಲ್ಲಾ ಜನರಿಗಿಂತ ಹೆಚ್ಚು ಪ್ರೀತಿಸಬೇಕು.

2- ಅದು ಸತ್ಯವಿಶ್ವಾಸದ ಸಂಪೂರ್ಣತೆಯಾಗಿದೆ.

### ಏಳನೇ ಹದೀಸ್

**ಪ್ರಶ್ನೆ 7. ಹದೀಸ್ ಅನ್ನು ಪೂರ್ಣಗೊಳಿಸಿ: "لايؤمن أحدكم حتى يحب لأخيه..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಅನಸ್ رَضِيَ اللَّهُ عَنْهُ ರಿಂದ ವರದಿ. ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು: **"ತನಗಾಗಿ ಪ್ರೀತಿಸುವುದನ್ನು ತನ್ನ ಸಹೋದರನಿಗಾಗಿ ಪ್ರೀತಿಸುವವರೆಗೂ ನಿಮ್ಮ ಪೈಕಿ ಯಾರೂ ನೈಜ ಸತ್ಯವಿಶ್ವಾಸಿಯಾಗಲಾರರು."** [ಬುಖಾರಿ ಮತ್ತು ಮುಸ್ಲಿಂ]

**ಹದೀಸಿನ ಪ್ರಯೋಜನಗಳು:**

1- ಸತ್ಯವಿಶ್ವಾಸಿ ತನಗಾಗಿ ಪ್ರೀತಿಸುವ ಒಳಿತುಗಳೆಲ್ಲವನ್ನೂ ಇತರ ಸತ್ಯವಿಶ್ವಾಸಿಗಳಿಗಾಗಿಯೂ ಪ್ರೀತಿಸಬೇಕು.

2- ಅದು ಸತ್ಯವಿಶ್ವಾಸದ ಸಂಪೂರ್ಣತೆಯಾಗಿದೆ.

### ಎಂಟನೇ ಹದೀಸ್

**ಪ್ರಶ್ನೆ 8. ಹದೀಸ್ ಅನ್ನು ಪೂರ್ಣಗೊಳಿಸಿ : "والذي نفسي بيده!..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಅಬೂ ಸಈದ್ رَضِيَ اللَّهُ عَنْهُ ರಿಂದ ವರದಿ, ಅಲ್ಲಾಹನ ಪ್ರವಾದಿ ﷺ ಹೇಳಿದ್ದಾರೆ: **"ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲಾಣೆ! ಇದು ಕುರ್‌ಆನ್‌ನ ಮೂರನೇ ಒಂದು ಭಾಗಕ್ಕೆ ಸಮಾನವಾಗಿದೆ."** [ಬುಖಾರಿ]

**ಹದೀಸಿನ ಪ್ರಯೋಜನಗಳು:**

1- ಸೂರ ಅಲ್-ಇಖ್ಲಾಸ್‌ನ ಶ್ರೇಷ್ಠತೆ.

2- ಅದು ಕುರ್‌ಆನ್‌ನ ಮೂರನೇ ಒಂದು ಭಾಗಕ್ಕೆ ಸಮಾನವಾಗಿದೆ.

## ಒಂಬತ್ತನೇ ಹದೀಸ್

**ಪ್ರಶ್ನೆ 9. ،"...لاحول ولا قوة إلا بالله" ಎಂಬ ಹದೀಸ್ ಅನ್ನು ಪೂರ್ಣಗೊಳಿಸಿ ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

ಉತ್ತರ- ಅಬೂ ಮೂಸಾ رَضِيَ اللَّهُ عَنْهُ ರಿಂದ ವರದಿ, ಅಲ್ಲಾಹನ ಪ್ರವಾದಿ ﷺ ಹೇಳಿದರು: **"ಅಲ್ಲಾಹನಲ್ಲಿ ಹೊರತು ಯಾವುದೇ ಶಕ್ತಿ -ಸಾಮರ್ಥ್ಯ ಇಲ್ಲ - ಈ ವಚನವು ಸ್ವರ್ಗದ ನಿಧಿಗಳಲ್ಲಿ ಒಂದಾಗಿದೆ."** [ಬುಖಾರಿ ಮತ್ತು ಮುಸ್ಲಿಂ]

**ಹದೀಸಿನ ಪ್ರಯೋಜನಗಳು:**

1- ಈ ವಚನದ ಶ್ರೇಷ್ಠತೆಯನ್ನು ಮತ್ತು ಇದು ಸ್ವರ್ಗದ ನಿಧಿಗಳಲ್ಲಿ ಒಂದಾಗಿದೆ ಎಂದು ತಿಳಿಸುತ್ತದೆ.

2- ಸತ್ಯವಿಶ್ವಾಸಿಯು ತನ್ನ ಶಕ್ತಿ -ಸಾಮರ್ಥ್ಯಗಳಿಂದ ಮುಕ್ತನಾಗಿ, ಸರ್ವಶಕ್ತನಾದ ಅಲ್ಲಾಹನನ್ನು ಮಾತ್ರ ಅವಲಂಬಿಸುತ್ತಾನೆ.

## ಹತ್ತನೇ ಹದೀಸ್

**ಪ್ರಶ್ನೆ 10. ಹದೀಸ್ ಅನ್ನು ಪೂರ್ಣಗೊಳಿಸಿ ،"...ألا إن في الجسد مضغة" ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

ಉತ್ತರ: ನುಅಮಾನ್ ಬಿನ್ ಬಶೀರ್ رَضِيَ اللَّهُ عَنْهُمَا ರಿಂದ ವರದಿ. ಅಲ್ಲಾಹನ ಸಂದೇಶವಾಹಕರು ﷺ ಹೇಳುತ್ತಾರೆ : **"ಖಂಡಿತವಾಗಿಯೂ ದೇಹದಲ್ಲಿ ಒಂದು ಮಾಂಸದ ಮುದ್ದೆಯಿದೆ . ಅದು ಸರಿಯಾದರೆ ಇಡೀ ದೇಹವು ಸರಿಯಾಗುತ್ತದೆ . ಅದು ಕೆಟ್ಟರೆ ಇಡೀ ದೇಹವು ಕೆಡುತ್ತದೆ . ತಿಳಿಯಿರಿ! ಅದು ಹೃದಯವಾಗಿದೆ."** [ಬುಖಾರಿ ಮತ್ತು ಮುಸ್ಲಿಂ]

**ಹದೀಸಿನ ಪ್ರಯೋಜನಗಳು:**

1- ಹೃದಯವು ಸರಿಯಾದರೆ ಬಾಹ್ಯ ಮತ್ತು ಆಂತರ್ಯವು ಸರಿಯಾಗುತ್ತದೆ.

2- ಹೃದಯವು ಸರಿಯಾಗುವುದಕ್ಕೆ ಗಮನ ಕೊಡಬೇಕು . ಏಕೆಂದರೆ ಮಾನವನ ಸುಧಾರಣೆಯು ಅದನ್ನು ಅವಲಂಬಿಸಿಕೊಂಡಿದೆ.

*** ಹನ್ನೊಂದನೇ ಹದೀಸ್**

**ಪ್ರಶ್ನೆ 11. ಹದೀಸ್ ಅನ್ನು ಪೂರ್ಣಗೊಳಿಸಿ: "من كان آخر كلامه ـــ من الدنيا- لا إله إلا الله.."، ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

ಉತ್ತರ: ಮುಆದ್ ಬಿನ್ ಜಬಲ್ رَضِيَ اللَّهُ عَنْهُ ರಿಂದ ವರದಿ. ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು: **"ಯಾರ ಕೊನೆಯ ಮಾತು ಲಾಇಲಾಹ ಇಲ್ಲಲ್ಲಾಹ್ (ಅಲ್ಲಾಹನ ಹೊರತು ಬೇರೆ ದೇವರಿಲ್ಲ) ಆಗುವುದೋ ಅವನು ಸ್ವರ್ಗವನ್ನು ಪ್ರವೇಶಿಸುವನು."** [ಅಬೂದಾವೂದ್].

**ಹದೀಸಿನ ಪ್ರಯೋಜನಗಳು:**

1- ಅಲ್ಲಾಹನ ಹೊರತು ಅನ್ಯ ದೇವರಿಲ್ಲ ಎಂಬ ಸಾಕ್ಷ್ಯವಚನದ ಶ್ರೇಷ್ಠತೆ ಮತ್ತು ಅದರ ಮೂಲಕ ಸತ್ಯವಿಶ್ವಾಸಿ ಸ್ವರ್ಗವನ್ನು ಪ್ರವೇಶಿಸುತ್ತಾನೆ ಎಂದು ಹೇಳಲಾಗಿದೆ.

2- ಇಹಲೋಕದಲ್ಲಿ ಯಾರ ಕೊನೆಯ ಮಾತುಗಳು ಅಲ್ಲಾಹನ ಹೊರತು ಅನ್ಯ ದೇವರಿಲ್ಲ ಎಂದಾಗುತ್ತದೋ ಎಂಬುದರ ಮಹತ್ವ ವಿವರಿಸಲಾಗಿದೆ.

*** ಹನ್ನೆರಡನೇ ಹದೀಸ್**

**ಪ್ರಶ್ನೆ 12. ಹದೀಸ್ ಅನ್ನು ಪೂರ್ಣಗೊಳಿಸಿ "ليس المؤمن بالطعان،ولا اللعان..."، ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಅಬ್ದುಲ್ಲಾ ಬಿನ್ ಮಸ್‌ಊದ್ رَضِيَ اللَّهُ عَنْهُ ರಿಂದ ವರದಿ. ಅಲ್ಲಾಹನ ಪ್ರವಾದಿ ﷺ ಹೇಳಿದರು: **"ಸತ್ಯವಿಶ್ವಾಸಿಯು ದೂಷಿಸುವವನಲ್ಲ, ಶಪಿಸುವವನಲ್ಲ, ಅಶ್ಲೀಲವಾಗಿ ವರ್ತಿಸುವವನಲ್ಲ ಅಥವಾ ಅವಾಚ್ಯ ಶಬ್ದಗಳನ್ನು ಬಳಸುವವನಲ್ಲ."** [ತಿರ್ಮಿದಿ]

**ಹದೀಸಿನ ಕೆಲವು ಪ್ರಯೋಜನಗಳು:**

1- ಎಲ್ಲಾ ಸುಳ್ಳು ಮತ್ತು ಕೆಟ್ಟ ಪದಗಳ ಬಳಕೆಯನ್ನು ವಿರೋಧಿಸಲಾಗಿದೆ.

2- ಇದು ಸತ್ಯವಿಶ್ವಾಸಿಗಳು ಮಾತನಾಡುವ ವಿಧಾನವಾಗಿದೆ.

*** ಹದಿಮೂರನೇ ಹದೀಸ್**

**ಪ್ರಶ್ನೆ 13. ಹದೀಸ್ ಅನ್ನು ಪೂರ್ಣಗೊಳಿಸಿ ،"من حسن إسلام المرء..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

**ಉತ್ತರ:** ಅಬು ಹುರೈರಾ رَضِيَ اللَّهُ عَنْهُ ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು ﷺ ಹೇಳುತ್ತಾರೆ: **"ತನಗೆ ಸಂಬಂಧಿಸದೇ ಇರುವುದನ್ನು ಬಿಟ್ಟುಬಿಡುವುದು ಒಬ್ಬ ಮುಸಲ್ಮಾನನ ಅತ್ಯುತ್ತಮ ಗುಣವಾಗಿದೆ."** [ತಿರ್ಮಿದಿ ಮತ್ತಿತರರು ಈ ಹದೀಸನ್ನು ವರದಿ ಮಾಡಿದ್ದಾರೆ].

**ಹದೀಸಿನ ಕೆಲವು ಪ್ರಯೋಜನಗಳು:**

1- ಲೌಕಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ತನಗೆ ಸಂಬಂಧಿಸದೇ ಇರುವುದನ್ನು ಬಿಟ್ಟುಬಿಡುವುದು.

2- ತನಗೆ ಸಂಬಂಧಿಸದೇ ಇರುವುದನ್ನು ಬಿಟ್ಟುಬಿಡುವುದು ಇಸ್ಲಾಮಿನ ಸಂಪೂರ್ಣತೆಯಾಗಿದೆ.

*** ಹದಿನಾಲ್ಕನೇ ಹದೀಸ್**

**ಪ್ರಶ್ನೆ 14. ಹದೀಸ್ ಅನ್ನು ಪೂರ್ಣಗೊಳಿಸಿ:** ،"من قرأ حرفًا من كتاب الله..." **ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ?**

ಉತ್ತರ: ಅಬ್ದುಲ್ಲಾ ಬಿನ್ ಮಸ್‌ಊದ್ رَضِيَ اللَّهُ عَنْهُ ರಿಂದ ವರದಿ. ಅಲ್ಲಾಹನ ಪ್ರವಾದಿ ﷺ ಹೇಳಿದರು: **"ಯಾರು ಅಲ್ಲಾಹನ ಗ್ರಂಥದಿಂದ ಒಂದಕ್ಷರವನ್ನು ಓದುತ್ತಾರೋ, ಅದಕ್ಕೊಂದು ಪ್ರತಿಫಲವಿದೆ. ಪ್ರತಿಫಲವು ಅದರ ಹತ್ತರಷ್ಟು ದ್ವಿಗುಣವಾಗುತ್ತದೆ . ಅಲಿಫ್ ಲಾಮ್ ಮೀಮ್ ಇದು ಒಂದಕ್ಷರವಲ್ಲ, ಬದಲಾಗಿ ಅಲಿಫ್ ಒಂದು ಅಕ್ಷರ , ಲಾಮ್ ಒಂದು ಅಕ್ಷರ ಮತ್ತು ಮೀಮ್ ಒಂದು ಅಕ್ಷರ."** [ತಿರ್ಮಿದಿ]

**ಹದೀಸಿನ ಪ್ರಯೋಜನಗಳು:**

1- ಕುರ್‌ಆನ್ ಪಾರಾಯಣದ ಶ್ರೇಷ್ಠತೆ.

2- ನೀವು ಓದುವ ಪ್ರತಿಯೊಂದು ಅಕ್ಷರಕ್ಕೆ ಪ್ರತಿಫಲವಿದೆ.

*******

# ಇಸ್ಲಾಮೀ ಶಿಷ್ಟಾಚಾರದ ವಿಭಾಗ

## ಸರ್ವಶಕ್ತನಾದ ಅಲ್ಲಾಹನೊಂದಿಗಿನ ಶಿಷ್ಟಾಚಾರಗಳು

**ಪ್ರಶ್ನೆ 1. ಸರ್ವಶಕ್ತನಾದ ಅಲ್ಲಾಹನೊಂದಿಗಿನ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಸರ್ವಶಕ್ತನಾದ ಅಲ್ಲಾಹನನ್ನು ಗೌರವಿಸುವುದು.

2- ಯಾವುದೇ ಸಹಭಾಗಿಗಳಿಲ್ಲದ ಅವನನ್ನು ಮಾತ್ರ ಆರಾಧಿಸುವುದು.

3- 3- ಅವನ ಆಜ್ಞೆಗಳನ್ನು ಅನುಸರಿಸುವುದು.

4- 4- ಅವನ ಆಜ್ಞೆಗಳನ್ನು ಉಲ್ಲಂಘಿಸದಿರುವುದು.

5- 5- ಅವನ ಅಸಂಖ್ಯ ಅನುಗ್ರಹ ಮತ್ತು ವರದಾನಗಳಿಗಾಗಿ ಅವನಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ಸ್ತುತಿಸುವುದು.

6- 6- ಅವನ ನಿರ್ಣಯಗಳ (ವಿಧಿ) ಬಗ್ಗೆ ತಾಳ್ಮೆ ವಹಿಸುವುದು.

# ಪ್ರವಾದಿ ﷺ ರೊಂದಿಗಿನ ಶಿಷ್ಟಾಚಾರಗಳು

**ಪ್ರಶ್ನೆ 2. ಪ್ರವಾದಿ ﷺ ರೊಂದಿಗಿನ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಅವರನ್ನು ಅನುಸರಿಸುವುದು ಮತ್ತು ಅನುಕರಿಸುವುದು.

2- ಅವರ ಆಜ್ಞೆಗಳನ್ನು ಅನುಸರಿಸುವುದು.

3- ಅವರ ಆಜ್ಞೆಗಳನ್ನು ಉಲ್ಲಂಘಿಸದಿರುವುದು.

4- ಅವರು ತಿಳಿಸಿಕೊಟ್ಟದ್ದರಲ್ಲಿ ವಿಶ್ವಾಸವಿಡುವುದು.

5- ಅವರ ಸುನ್ನತ್‌ಗೆ ಹೊಸ ಆವಿಷ್ಕಾರಗಳನ್ನು ಸೇರಿಸದಿರುವುದು.

6- ಸ್ವಂತ ದೇಹಕ್ಕಿಂತ ಮತ್ತು ಇತರೆಲ್ಲಾ ಜನರಿಗಿಂತ ಅವರನ್ನು ಹೆಚ್ಚು ಪ್ರೀತಿಸುವುದು.

7- ಅವರನ್ನು ಗೌರವಿಸುವುದು ಮತ್ತು ಅವರನ್ನು ಹಾಗೂ ಅವರ ಸುನ್ನತ್ತನ್ನು ಬೆಂಬಲಿಸುವುದು.

**ಪ್ರಶ್ನೆ 3. ಮಾತಾಪಿತರೊಂದಿಗಿನ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಅಲ್ಲಾಹನ ಆಜ್ಞೋಲ್ಲಂಘನೆಯಾಗದ ರೀತಿಯಲ್ಲಿ ಮಾತಾಪಿತರನ್ನು ಅನುಸರಿಸುವುದು.

2- ಮಾತಾಪಿತರ ಸೇವೆ ಮಾಡುವುದು.

3- ಮಾತಾಪಿತರಿಗೆ ಸಹಾಯ ಮಾಡುವುದು.

4- ಮಾತಾಪಿತರ ಅಗತ್ಯಗಳನ್ನು ಪೂರೈಸುವುದು.

5- ಮಾತಾಪಿತರಿಗಾಗಿ ಪ್ರಾರ್ಥಿಸುವುದು.

6- ಅವರೊಂದಿಗೆ ಮರ್ಯಾದೆಯಿಂದ ಮಾತನಾಡುವುದು , ಅವರ ಮುಂದೆ ಕನಿಷ್ಠ "ಛೇ" ಎಂಬ ಪದವನ್ನು ಕೂಡ ಬಳಸದಿರುವುದು.

7- ಮಾತಾಪಿತರ ಮುಖ ನೋಡಿ ಮಂದಹಾಸ ಬೀರುವುದು . ಅವರ ಮುಂದೆ ಮುಖವನ್ನು ಗಂಟಿಕ್ಕಬಾರದು.

8- ಮಾತಾಪಿತರ ಧ್ವನಿಗಿಂತ ದೊಡ್ಡ ಧ್ವನಿಯಲ್ಲಿ ಮಾತನಾಡಬಾರದು. ಅವರ ಮಾತನ್ನು ಗಮನವಿಟ್ಟು ಕೇಳಬೇಕು. ಅವರ ಮಾತುಗಳಿಗೆ ಅಡ್ಡಿಪಡಿಸಬಾರದು. ಅವರ ಹೆಸರಿನಿಂದ ಅವರನ್ನು ಕರೆಯಬಾರದು. ಬದಲಾಗಿ ಅಪ್ಪ ಅಮ್ಮ ಎಂದು ಕರೆಯುವುದು.

9- ತಂದೆ ಮತ್ತು ತಾಯಿ ಕೋಣೆಯಲ್ಲಿರುವಾಗ ಅವರ ಅನುಮತಿ ಪಡೆದು ಪ್ರವೇಶಿಸುವುದು.

10- ಮಾತಾಪಿತರ ಕೈ ಮತ್ತು ತಲೆಗಳನ್ನು ಚುಂಬಿಸುವುದು.

## ಕುಟುಂಬ ಸಂಬಂಧ ಕಾಪಾಡುವುದರ ಶಿಷ್ಟಾಚಾರಗಳು

**ಪ್ರಶ್ನೆ 4. ಕುಟುಂಬ ಸಂಬಂಧ ಕಾಪಾಡುವುದು ಹೇಗೆ?**

**ಉತ್ತರ:**

1- ಸಹೋದರ, ಸಹೋದರಿ, ಚಿಕ್ಕಪ್ಪ, ಚಿಕ್ಕಮ್ಮ, ಸೋದರ ಮಾವ, ಸೋದರತ್ತೆ ಹಾಗೂ ಇತರ ಸಂಬಂಧಿಕರನ್ನು ಭೇಟಿ ಮಾಡುವುದು.

2- ಮಾತು ಮತ್ತು ಕ್ರಿಯೆಗಳ ಮೂಲಕ ಅವರಿಗೆ ಒಳಿತು ಮತ್ತು ಸಹಾಯ ಮಾಡುವುದು.

3- ಅವರನ್ನು ಸಂಪರ್ಕಿಸುವುದು ಮತ್ತು ಅವರ ಯೋಗಕ್ಷೇಮ ವಿಚಾರಿಸುವುದು.

## ಇಸ್ಲಾಮೀ ಸಹೋದರತೆಯ ಶಿಷ್ಟಾಚಾರಗಳು

**ಪ್ರಶ್ನೆ 5. ನಾನು ನನ್ನ ಇಸ್ಲಾಮೀ ಸಹೋದರರು ಮತ್ತು ಸ್ನೇಹಿತರೊಂದಿಗೆ ಹೇಗೆ ವರ್ತಿಸಬೇಕು?**

**ಉತ್ತರ:**

1- ಒಳ್ಳೆಯ ಜನರನ್ನು ಪ್ರೀತಿಸುವುದು ಮತ್ತು ಅವರೊಂದಿಗೆ ಗೆಳೆತನ ಮಾಡುವುದು.

2- ಕೆಟ್ಟ ಜನರಿಂದ ದೂರವಾಗುವುದು ಮತ್ತು ಅವರ ಗೆಳೆತನವನ್ನು ಬಿಡುವುದು.

3- ಮುಸ್ಲಿಂ ಸಹೋದರರಿಗೆ ಸಲಾಂ ಹೇಳುವುದು ಮತ್ತು ಹಸ್ತಲಾಘವ ಮಾಡುವುದು.

4- ಅವರು ರೋಗಿಯಾದರೆ ಸಂದರ್ಶಿಸುವುದು ಮತ್ತು ಅವರು ಗುಣಮುಖರಾಗಲು ಪ್ರಾರ್ಥಿಸುವುದು.

5- ಸೀನಿದವನಿಗೆ ಯರ್ಹಮುಕಲ್ಲಾಹ್ ಎಂದು ಹೇಳುವುದು.

6- ಅವನನ್ನು ಭೇಟಿ ಮಾಡಲು ಆಮಂತ್ರಿಸಿದರೆ ಆಮಂತ್ರಣವನ್ನು ಸ್ವೀಕರಿಸುವುದು.

7- ಅವನಿಗೆ ಹಿತವಚನ ನೀಡುವುದು.

8- ಅವನು ಅನ್ಯಾಯಕ್ಕೆ ಒಳಗಾದರೆ ಅವನಿಗೆ ಸಹಾಯ ಮಾಡುವುದು ಮತ್ತು ಅವನು ಅನ್ಯಾಯ ಮಾಡದಂತೆ ತಡೆಯುವುದು.

9- ತನಗಾಗಿ ಬಯಸುವುದನ್ನು ಮುಸ್ಲಿಂ ಸಹೋದರನಿಗೂ ಬಯಸುವುದು.

10- ಅವನಿಗೆ ನನ್ನ ಸಹಾಯ ಬೇಕಾದರೆ ಸಹಾಯ ಮಾಡುವುದು.

11- ಮಾತು ಅಥವಾ ಕ್ರಿಯೆಯಿಂದ ಅವನನ್ನು ನೋಯಿಸದಿರುವುದು.

12- ಅವನ ರಹಸ್ಯವನ್ನು ಮುಚ್ಚಿಡುವುದು.

13- ಅವನನ್ನು ಗದರಿಸದಿರುವುದು, ದೂಷಿಸದಿರುವುದು, ಕೀಳಾಗಿಸದಿರುವುದು, ಅಸೂಯೆ ಪಡದಿರುವುದು, ಅವನ ರಹಸ್ಯಗಳನ್ನು ಅನ್ವೇಷಿಸದಿರುವುದು ಮತ್ತು ಅವನನ್ನು ವಂಚಿಸದಿರುವುದು.

# ನೆರೆಹೊರೆಯವರೊಂದಿಗಿನ ಶಿಷ್ಟಾಚಾರಗಳು

**ಪ್ರಶ್ನೆ 6. ನೆರೆಹೊರೆಯವರೊಂದಿಗಿನ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಮಾತು ಮತ್ತು ಕ್ರಿಯೆಯ ಮೂಲಕ ನೆರೆಹೊರೆಯವರಿಗೆ ಒಳಿತನ್ನು ಮಾಡುವುದು ಮತ್ತು ಅವರಿಗೆ ಸಹಾಯ ಬೇಕಾದರೆ ಸಹಾಯ ಮಾಡುವುದು.

2- ಹಬ್ಬ, ಮದುವೆ ಅಥವಾ ಇನ್ನೇನಾದರೂ ಸಂತೋಷದಲ್ಲಿದ್ದರೆ ಅವರನ್ನು ಅಭಿನಂದಿಸುವುದು.

3- ಅವರು ರೋಗಿಯಾದರೆ ಸಂದರ್ಶಿಸುವುದು ಮತ್ತು ಅವರಿಗೆ ನೋವುಂಟಾದರೆ ಸಾಂತ್ವನ ಹೇಳುವುದು.

4- ಮನೆಯಲ್ಲಿ ಆಹಾರ ತಯಾರಿಸುವಾಗ ಸಾಧ್ಯವಾದರೆ ಅವರಿಗೂ ಆಹಾರ ನೀಡುವುದು.

5- ಮಾತು ಅಥವಾ ಕ್ರಿಯೆಯಿಂದ ಅವನನ್ನು ನೋಯಿಸದಿರುವುದು.

6- ದೊಡ್ಡ ಧ್ವನಿಯಿಂದ ಅವನಿಗೆ ತೊಂದರೆ ಕೊಡದಿರುವುದು, ಅಥವಾ ಅವನ ಮೇಲೆ ಬೇಹುಗಾರಿಕೆ ಮಾಡದಿರುವುದು, ಮತ್ತು ಅವನ ಬಗ್ಗೆ ತಾಳ್ಮೆ ವಹಿಸುವುದು.

## ಆತಿಥ್ಯದ ಶಿಷ್ಟಾಚಾರಗಳು

**ಪ್ರಶ್ನೆ 7. ಅತಿಥಿ ಮತ್ತು ಆತಿಥ್ಯದ ಶಿಷ್ಟಾಚಾರಗಳು ಯಾವುವು?**

ಉತ್ತರ:

1- ಆತಿಥ್ಯಕ್ಕೆ ಆಮಂತ್ರಿಸಲಾದರೆ ಸ್ವೀಕರಿಸುವುದು.

2- ಯಾರನ್ನಾದರೂ ಭೇಟಿಯಾಗುವುದಾದರೆ, ಅನುಮತಿ ಮತ್ತು ಸಮಯವನ್ನು ಕೇಳುವುದು.

3- ಪ್ರವೇಶಿಸುವ ಮೊದಲು ಅನುಮತಿ ಕೇಳುವುದು.

4- ಭೇಟಿಯ ಸಂದರ್ಭ ದೀರ್ಘ ಹೊತ್ತು ತಂಗದಿರುವುದು.

5- ಅತಿಥಿಯ ಮನೆಯವರ ಕಡೆ ಕಣ್ಣು ಹಾಯಿಸದಿರುವುದು.

6- ಅತಿಥಿಯನ್ನು ಮಂದಹಾಸದ ಮುಖದಿಂದ ಉತ್ತಮ ರೀತಿಯಲ್ಲಿ ಸ್ವಾಗತಿಸುವುದು.

7- ಅತಿಥಿಯನ್ನು ಉತ್ತಮ ಸ್ಥಳದಲ್ಲಿ ಕೂರಿಸುವುದು.

8- ಆಹಾರ ಮತ್ತು ಪಾನೀಯಗಳನ್ನು ನೀಡಿ ಅತಿಥಿಯನ್ನು ಗೌರವಿಸುವುದು.

## ಕಾಯಿಲೆಯ ಶಿಷ್ಟಾಚಾರಗಳು

**ಪ್ರಶ್ನೆ 8: ರೋಗಿ ಮತ್ತು ರೋಗಿ ಸಂದರ್ಶನದ ಶಿಷ್ಟಾಚಾರಗಳನ್ನು ತಿಳಿಸಿ?**

ಉತ್ತರ-

1- ನೋವು ಅನುಭವವಾಗುವ ಸ್ಥಳದಲ್ಲಿ ಬಲಗೈಯನ್ನಿಟ್ಟು ಮೂರು ಬಾರಿ **ಬಿಸ್ಮಿಲ್ಲಾ** ಪಠಿಸುವುದು ನಂತರ ಏಳು ಬಾರಿ "**ಅವೂದು ಬಿಇಜ್ಜತಿಲ್ಲಾಹಿ ವ ಖುದ್ರತಿಹಿ ಮಿನ್ ಶರ್ರಿ ಮಾ ಅಜಿದು ವ ಉಹಾದಿರು** " ಎಂದು ಹೇಳುವುದು. ಅಂದರೆ "ನಾನು ಅನುಭವಿಸುವುದರಿಂದ ಮತ್ತು ಭಯಪಡುವುದರಿಂದ ಅಲ್ಲಾಹನ ಪ್ರತಾಪ ಮತ್ತು ಶಕ್ತಿಯಲ್ಲಿ ಅಭಯ ಯಾಚಿಸುತ್ತೇನೆ"

2- ಅಲ್ಲಾಹನ ವಿಧಿಯಲ್ಲಿ ಸಂತೃಪ್ತನಾಗುವುದು ಮತ್ತು ತಾಳ್ಮೆ ವಹಿಸುವುದು.

3- ಅನಾರೋಗ್ಯ ಪೀಡಿತ ಸಹೋದರರನ್ನು ಸಂದರ್ಶಿಸಲು ಆತುರಪಡುವುದು ಮತ್ತು ಅವನಿಗಾಗಿ ಪ್ರಾರ್ಥಿಸುವುದು. ಸಂದರ್ಶನದ ವೇಳೆ ಬಹಳ ಹೊತ್ತು ಅಲ್ಲಿ ಕುಳಿತುಕೊಳ್ಳದಿರುವುದು.

4- ಅವನು ವಿನಂತಿಸದಿದ್ದರೂ ಅವನಿಗಾಗಿ ಮಂತ್ರಿಸುವುದು.

5- ಅವನಿಗೆ ತಾಳ್ಮೆಯಿಂದಿರಲು ಮತ್ತು ಪ್ರಾರ್ಥಿಸಲು, ನಮಾಝ್ ನಿರ್ವಹಿಸಲು ಮತ್ತು ಸಾಧ್ಯವಾದಷ್ಟು ಶುದ್ದಿಯಲ್ಲಿರಲು ಸಲಹೆ ನೀಡುವುದು.

6- ರೋಗಿಗಳಿಗಾಗಿ ಹೀಗೆ ಪ್ರಾರ್ಥಿಸುವುದು :**ಅಸ್‌ಅಲುಲ್ಲಾಹಲ್ ಅದೀಮ್ ರಬ್ಬಲ್ ಅರ್ಶಿಲ್ ಅದೀಮ್ ಅಯ್ ಯಶ್ಫಿಯಕ್** " ಅಂದರೆ "ನಿಮ್ಮನ್ನು ಗುಣಪಡಿಸಲೆಂದು ಸರ್ವಶಕ್ತನಾದ ಅಲ್ಲಾಹನಲ್ಲಿ, ಮಹಾ ಸಿಂಹಾಸನದ ಒಡೆಯನಲ್ಲಿ ಬೇಡುತ್ತೇನೆ ." (ಏಳು ಬಾರಿ)

## ಜ್ಞಾನಾರ್ಜನೆಯ ಶಿಷ್ಟಾಚಾರಗಳು

**ಪ್ರಶ್ನೆ 9. ಜ್ಞಾನಾರ್ಜನೆಯ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಉದ್ದೇಶವನ್ನು ಸರ್ವಶಕ್ತನಾದ ಅಲ್ಲಾಹನಿಗೆ ನಿಷ್ಕಳಂಕಗೊಳಿಸುವುದು.

2- ಕಲಿತ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು.

3- ಶಿಕ್ಷಕರನ್ನು ಅವರ ಉಪಸ್ಥಿತಿ ಮತ್ತು ಅನುಪಸ್ಥಿತಿಯಲ್ಲಿ ಗೌರವಿಸುವುದು.

4- ಅವರ ಮುಂದೆ ವಿನಯದಿಂದ ಕುಳಿತುಕೊಳ್ಳುವುದು.

5- ಅವರ ಮಾತನ್ನು ಕಿವಿಗೊಟ್ಟು ಕೇಳುವುದು ಮತ್ತು ಪಾಠದ ಮಧ್ಯೆ ಅಡ್ಡಿಪಡಿಸದಿರುವುದು.

6- ಸಭ್ಯವಾಗಿ ಪ್ರಶ್ನೆಗಳನ್ನು ಕೇಳುವುದು.

7- ಅವರನ್ನು ಹೆಸರಿನಿಂದ ಕರೆಯದಿರುವುದು.

## ಸಭೆಯ ಶಿಷ್ಟಾಚಾರಗಳು

**ಪ್ರಶ್ನೆ 10. ಸಭೆಯ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಸಭೆಯಲ್ಲಿರುವವರಿಗೆ ಸಲಾಂ ಹೇಳುವುದು.

2- ಸಭೆಯ ಕೊನೆಯಲ್ಲಿ ಖಾಲಿ ಸ್ಥಳದಲ್ಲಿ ಕುಳಿತುಕೊಳ್ಳುವುದು. ಯಾರನ್ನೂ ಅವರ ಸ್ಥಳದಿಂದ ಎಬ್ಬಿಸದಿರುವುದು ಅಥವಾ ಇಬ್ಬರ ನಡುವೆ ಅವರ ಅನುಮತಿಯಿಲ್ಲದೆ ಕುಳಿತುಕೊಳ್ಳದಿರುವುದು.

3- ಇತರರು ಕುಳಿತುಕೊಳ್ಳಲು ಸ್ಥಳಾವಕಾಶ ಮಾಡಿಕೊಡುವುದು.

4- ಇತರರ ಮಾತಿಗೆ ಅಡ್ಡಿಪಡಿಸದಿರುವುದು.

5- ಸಭೆಯಿಂದ ಹೊರಡುವಾಗ ಸಲಾಂ ಹೇಳಿ ಅನುಮತಿ ಪಡೆಯುವುದು.

6- ಸಭೆ ಮುಗಿದಾಗ ಸಭೆಯ ಪ್ರಾಯಶ್ಚಿತ್ತದ ಪ್ರಾರ್ಥನೆಯನ್ನು ಪಠಿಸುವುದು.'**ಸುಬ್ಹಾನಕಲ್ಲಾಹುಮ್ಮ ವಿ ಬಿಹಮ್ದಿಕ ಅಶ್ಹದು ಅಲ್ಲಾ ಇಲಾಹ ಇಲ್ಲಾ ಅಂತ ಅಸ್ತಘ್ಫಿರುಕ ವಿ ಅತೂಬು ಇಲೈಕ್** **" ಓ ಅಲ್ಲಾಹನೇ, ನೀನು ಪರಮಪಾವನನು. ನಿನಗೆ ಸ್ತುತಿ. ನಿನ್ನ ಹೊರತು ಬೇರೆ ದೇವರಿಲ್ಲ ಎಂದು ನಾನು ಸಾಕ್ಷಿ ಹೇಳುತ್ತೇನೆ. ನಾನು ನಿನ್ನಲ್ಲಿ ಕ್ಷಮೆಯಾಚಿಸುತ್ತೇನೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪ ಪಟ್ಟು ಮರಳುತ್ತೇನೆ."**

## ನಿದ್ದೆಯ ಶಿಷ್ಟಾಚಾರಗಳು

**ಪ್ರಶ್ನೆ 11: ನಿದ್ದೆಯ ಶಿಷ್ಟಾಚಾರಗಳನ್ನು ತಿಳಿಸಿ?**

**ಉತ್ತರ:**

1- ಬೇಗನೇ ಮಲಗುವುದು.

2- ವುದೂ ಇರುವ ಸ್ಥಿತಿಯಲ್ಲಿ ಮಲಗುವುದು.

3- ಹೊಟ್ಟೆಯ ಮೇಲೆ ಮಲಗದಿರುವುದು.

4- ಬಲಭಾಗಕ್ಕೆ ಸರಿದು ಬಲಗೈಯನ್ನು ಬಲಗೆನ್ನೆಯ ಕೆಳಗಿರಿಸಿ ಮಲಗುವುದು.

5- ಮಲಗುವ ಮೊದಲು ಹಾಸಿಗೆಯನ್ನು ಝಾಡಿಸುವುದು.

6- ಅಯತುಲ್-ಕುರ್ಸಿ, ಸೂರ ಅಲ್-ಇಖ್ಲಾಸ್ ಮತ್ತು ಅಲ್ -ಮಉವ್ವಿಝುತೈನ್ (ಮೂರು ಬಾರಿ) ಮುಂತಾದ ಮಲಗುವಾಗ ಹೇಳುವ ದಿಕ್‌ರ್‌ಗಳನ್ನು ಪಠಿಸುವುದು. ನಂತರ ಹೀಗೆ ಹೇಳುವುದು:**ಬಿಸ್ಮಿಕಲ್ಲಾಹುಮ್ಮ ಅಮೂತು ವ ಅಹ್ಯ** **"ಓ ಅಲ್ಲಾಹನೇ, ನಿನ್ನ ಹೆಸರಿನಲ್ಲಿ ನಾನು ಸಾಯುತ್ತೇನೆ ಮತ್ತು ಬದುಕುತ್ತೇನೆ."**

7- ಫಜ್ರ್ ನಮಾಝಿಗಾಗಿ ಏಳುವುದು.

8- ನಿದ್ದೆಯಿಂದ ಏಳುವಾಗ ಹೀಗೆ ಪಠಿಸುವುದು :**ಅಲ್ ಹಮ್ದು ಲಿಲ್ಲಾಹಿಲ್ಲದೀ ಅಹ್ಯಾನ ಬ'ಅದ ಮಾ ಅಮಾತನ ವ ಇಲೈಹಿನ್ನುಶೂರ್**" **" ನಮ್ಮ ಮರಣದ ನಂತರ ನಮ್ಮನ್ನು ಬದುಕಿಸಿದ ಅಲ್ಲಾಹನಿಗೆ ಸರ್ವಸ್ತುತಿ ಮತ್ತು ಪುನರುತ್ಥಾನವು ಅವನ ಕಡೆಗೇ ಆಗಿದೆ."**

## ಆಹಾರ ಸೇವನೆಯ ಶಿಷ್ಟಾಚಾರಗಳು

**ಪ್ರಶ್ನೆ 12. ಆಹಾರ ಸೇವನೆಯ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಅಲ್ಲಾಹನನ್ನು ಅನುಸರಿಸಲು ಶಕ್ತಿಯನ್ನು ಪಡೆಯುವುದಕ್ಕಾಗಿ ತಿನ್ನುತ್ತೇನೆ ಮತ್ತು ಕುಡಿಯುತ್ತೇನೆ ಎಂದು ನಿಯ್ಯತ್ ಮಾಡುವುದು.

2- ಆಹಾರ ಸೇವನೆಯ ಮೊದಲು ಕೈಗಳನ್ನು ತೊಳೆಯುವುದು.

3- ಬಿಸ್ಮಿಲಾ ಎಂದು ಹೇಳುವುದು , ಬಲಗೈಯಿಂದ ಆಹಾರ ಸೇವಿಸುವುದು ಮತ್ತು ಹತ್ತಿರದಲ್ಲಿರುವಲ್ಲಿಂದಲೇ ಸೇವಿಸುವುದು. ತಟ್ಟೆಯ ಮಧ್ಯದಿಂದ ಅಥವಾ ಇತರರ ಮುಂಭಾಗದಲ್ಲಿರುವುದರಿಂದ ಸೇವಿಸದಿರುವುದು.

4- **ಬಿಸ್ಮಿಲ್ಲಾ ಹೇಳಲು ಮರೆತರೆ , ಬಿಸ್ಮಿಲ್ಲಾಹಿ ಅವ್ವಲಿಹಿ ವ ಆಖಿರಿಹಿ " "ಇದರ ಪ್ರಾರಂಭ ಮತ್ತು ಅಂತ್ಯ ಅಲ್ಲಾಹನ ಹೆಸರಿನಲ್ಲಿ"** ಎಂದು ಹೇಳುವುದು.

5- ಇರುವ ಆಹಾರದಲ್ಲಿ ಸಂತೃಪ್ತನಾಗುವುದು . ಆಹಾರವನ್ನು ದೂಷಿಸದಿರುವುದು. ಇಷ್ಟವಾದರೆ ತಿನ್ನುವುದು, ಇಷ್ಟವಿಲ್ಲದಿದ್ದರೆ ಬಿಟ್ಟುಬಿಡುವುದು.

6- ಕೆಲವು ತುತ್ತುಗಳನ್ನು ಸೇವಿಸುವುದು, ಅತಿಯಾಗಿ ಸೇವಿಸದಿರುವುದು.

7- ಆಹಾರ ಅಥವಾ ಪಾನೀಯಕ್ಕೆ ಊದದಿರುವುದು . ಅದನ್ನು ತಣ್ಣಗಾಗಲು ಹಾಗೆಯೇ ಬಿಟ್ಟುಬಿಡುವುದು.

8- ಕುಟುಂಬಿಕರು ಅಥವಾ ಅತಿಥಿಗಳೊಂದಿಗೆ ಆಹಾರ ಸೇವಿಸುವುದು.

9- ಹಿರಿಯರಿಗಿಂತ ಮೊದಲು ಆಹಾರ ಸೇವಿಸದಿರುವುದು.

10- ಪಾನೀಯ ಸೇವಿಸುವಾಗ ಬಿಸ್ಮಿಲ್ಲಾ ಹೇಳುವುದು ಮತ್ತು ಕುಳಿತುಕೊಂಡು ಮೂರು ಗುಟುಕುಗಳಲ್ಲಿ ಕುಡಿಯುವುದು.

11- ಆಹಾರ ಸೇವಿಸಿದ ಬಳಿಕ ಅಲ್ಲಾಹುವಿಗೆ ಧನ್ಯವಾದ ಹೇಳುವುದು.

## ವಸ್ತ್ರಧಾರಣೆಯ ಶಿಷ್ಟಾಚಾರಗಳು

**ಪ್ರಶ್ನೆ 13: ವಸ್ತ್ರಧಾರಣೆಯ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಬಲಭಾಗದಿಂದ ಉಡುಪು ಧರಿಸುವುದು ಮತ್ತು ಅದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆ ಹೇಳುವುದು.

2- ಉಡುಪನ್ನು ಹರಡುಗಂಟುಗಳಿಗಿಂತ ಕೆಳಗಿಳಿಸದಿರುವುದು.

3- ಹುಡುಗರು ಹುಡುಗಿಯರ ಉಡುಪುಗಳನ್ನು ಧರಿಸದಿರುವುದು ಮತ್ತು ಹುಡುಗಿಯರು ಹುಡುಗರ ಉಡುಪುಗಳನ್ನು ಧರಿಸದಿರುವುದು.

4- ಸತ್ಯನಿಷೇಧಿಗಳು ಅಥವಾ ದುಷ್ಟರು ಧರಿಸುವ ಉಡುಪುಗಳನ್ನು ಧರಿಸದಿರುವುದು.

5- ಉಡುಪು ಕಳಚುವಾಗ ಬಿಸ್ಮಿಲ್ಲಾ ಹೇಳುವುದು.

6- ಪಾದರಕ್ಷೆ ಧರಿಸುವಾಗ ಮೊದಲು ಬಲಗಾಲಿಗೆ ಧರಿಸುವುದು ಮತ್ತು ಕಳಚುವಾಗ ಮೊದಲು ಎಡಗಾಲಿನಿಂದ ಕಳಚುವುದು.

## ಸವಾರಿ ಮಾಡುವುದರ ಶಿಷ್ಟಾಚಾರಗಳು

**ಪ್ರಶ್ನೆ 14. ಸವಾರಿ ಮಾಡುವುದರ ಶಿಷ್ಟಾಚಾರಗಳನ್ನು ತಿಳಿಸಿ?**

**ಉತ್ತರ:**

1- **ಬಿಸ್ಮಿಲ್ಲಾ, ಅಲ್-ಹಮ್ದುಲಿಲ್ಲಾಹ್** ಎಂದು ಹೇಳುವುದು.

﴿سُبۡحَٰنَ ٱلَّذِي سَخَّرَ لَنَا هَٰذَا وَمَا كُنَّا لَهُۥ مُقۡرِنِينَ ١٣ وَإِنَّآ إِلَىٰ رَبِّنَا لَمُنقَلِبُونَ﴾

**{ನಮಗೋಸ್ಕರ ಇದನ್ನು ವಿಧೇಯಗೊಳಿಸಿಕೊಟ್ಟವನು ಪರಮಪಾವನನು. ಇದನ್ನು ಪಳಗಿಸಲು ನಮಗೆ ಸಾಧ್ಯವಿರಲಿಲ್ಲ . ಖಂಡಿತವಾಗಿಯೂ ನಾವು ನಮ್ಮ ಪ್ರಭುವಿನೆಡೆಗೆ ಮರಳಿಹೋಗುವವರೇ ಆಗಿರುವೆವು.}** [ಸೂರ ಝುಖ್ರುಫ್: 13-14]

2- ಮುಸ್ಲಿಂ ವ್ಯಕ್ತಿಯ ಮೂಲಕ ಹಾದುಹೋಗವಾಗ ಅವನಿಗೆ ಸಲಾಂ ಹೇಳುವುದು.

## ರಸ್ತೆಯ ಶಿಷ್ಟಾಚಾರಗಳು

**ಪ್ರಶ್ನೆ 15. ರಸ್ತೆಯ ಶಿಷ್ಟಾಚಾರಗಳನ್ನು ತಿಳಿಸಿ?**

**ಉತ್ತರ:**

1- ಹದವಾಗಿ ಮತ್ತು ವಿನಯವಾಗಿ ನಡೆಯುವುದು. ರಸ್ತೆಯ ಬಲಭಾಗದಲ್ಲಿ ನಡೆಯುವುದು.

2- ರಸ್ತೆಯಲ್ಲಿ ಭೇಟಿಯಾಗುವವರಿಗೆ ಸಲಾಂ ಹೇಳುವುದು.

3- ದೃಷ್ಟಿಯನ್ನು ತಗ್ಗಿಸುವುದು ಮತ್ತು ಯಾರಿಗೂ ಹಾನಿ ಮಾಡದಿರುವುದು.

4- ಒಳಿತನ್ನು ಆದೇಶಿಸುವುದು ಮತ್ತು ಕೆಡುಕನ್ನು ವಿರೋಧಿಸುವುದು.

5- ರಸ್ತೆಯಿಂದ ಅಡೆತಡೆಗಳನ್ನು ನಿವಾರಿಸುವುದು.

# ಮನೆಯನ್ನು ಪ್ರವೇಶಿಸುವ ಮತ್ತು ಮನೆಯಿಂದ ಹೊರಡುವ ಶಿಷ್ಟಾಚಾರಗಳು

**ಪ್ರಶ್ನೆ 16. ಮನೆಯನ್ನು ಪ್ರವೇಶಿಸುವ ಮತ್ತು ಮನೆಯಿಂದ ಹೊರಡುವ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1- ಎಡಗಾಲಿಟ್ಟು ಮನೆಯಿಂದ ಹೊರಬರುವುದು . ಹೊರಬರುವಾಗ ಹೀಗೆ ಹೇಳುವುದು : **"ಬಿಸ್ಮಿಲ್ಲಾಹಿ,ತವಕ್ಕಲ್ತು ಅಲಲ್ಲಾಹಿ ಲಾ ಹವ್ಲಾ ವಲಾ ಖುವ್ವತ ಇಲ್ಲಾ ಬಿಲ್ಲಾ ಅಲ್ಲಾಹುಮ್ಮ ಇನ್ನಿ ಅವೂದುಬಿಕ ಅನ್ ಅದಲ್ಲ ಅವ್ ಉದಲ್ಲ ,ಅವ್ ಅದಲ್ಲ ಅವ್ ಉದಲ್ಲ ಅವ್ ಅಧ್ಲಿಮ ಅವ್ ಉಧ್ಲಮ ಅವ್ ಅಜ್ಹಲ ಅವ್ ಯುಜ್ಹಲ ಅಲಯ್". "ಅಲ್ಲಾಹನ ಹೆಸರಿನಿಂದ, ನಾನು ಅಲ್ಲಾಹನಲ್ಲಿ ಭರವಸೆಯಿಟ್ಟಿದ್ದೇನೆ, ಅಲ್ಲಾಹನಲ್ಲಿಯೇ ಹೊರತು ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ . ಓ ಅಲ್ಲಾಹನೇ, ನಾನು ದಾರಿ ತಪ್ಪದಿರಲು ಅಥವಾ ಇತರರು ನನ್ನನ್ನು ದಾರಿ ತಪ್ಪಿಸದಿರಲು , ಅಥವಾ ನಾನು ಜಾರದಿರಲು ಅಥವಾ ಇತರರು ನನ್ನನ್ನು ಜಾರುವಂತೆ ಮಾಡದಿರಲು , ಅಥವಾ ನಾನು ಅನ್ಯಾಯವೆಸಗಿದಂತೆ ಅಥವಾ ನನಗೆ ಅನ್ಯಾಯವಾಗದಂತೆ , ನಾನು ತಿಳಿಗೇಡಿಯಂತೆ ವರ್ತಿಸದಿರಲು ಅಥವಾ ಇತರರು ನನ್ನನ್ನು ತಿಳಿಗೇಡಿಯಂತೆ ಮಾಡದಿರಲು ನಾನು ನಿನ್ನಲ್ಲಿ ಅಭಯಕೋರುತ್ತೇನೆ."**

2- ಬಲಗಾಲಿಟ್ಟು ಮನೆಯನ್ನು ಪ್ರವೇಶಿಸುವುದು . ಪ್ರವೇಶಿಸುವಾಗ ಹೀಗೆ ಹೇಳುವುದು :**ಬಿಸ್ಮಿಲ್ಲಾಹಿ ವಲಜ್‌ನಾ ವಬಿಸ್ಮಿಲ್ಲಾಹಿ ಖರಜ್‌ನಾ ವಅಲಲ್ಲಾಹಿ ರಬ್ಬಿನಾ ತವಕ್ಕಲ್‌ನಾ . "ಅಲ್ಲಾಹನ ನಾಮದೊಂದಿಗೆ ನಾವು (ಈ ಮನೆಯನ್ನು) ಪ್ರವೇಶಿಸಿದ್ದೇವೆ ಮತ್ತು ಅಲ್ಲಾಹನ ನಾಮದೊಂದಿಗೆ ನಾವು (ಇದರಿಂದ) ಹೊರಟಿದ್ದೇವೆ. ಮತ್ತು ನಮ್ಮ ರಬ್ಬ್ ಆದ ಅಲ್ಲಾಹನ ಮೇಲೆ ನಾವು ಭರವಸೆಯನ್ನಿಟ್ಟಿದ್ದೇವೆ."**

3- ಮೊದಲು ಮಿಸ್ವಾಕಿನಿಂದ ಹಲ್ಲುಜ್ಜುವುದು, ನಂತರ ಮನೆಯವರಿಗೆ ಸಲಾಮ್ ಹೇಳುವುದು.

## ಮಲಮೂತ್ರ ವಿಸರ್ಜನೆಯ ಶಿಷ್ಟಾಚಾರಗಳು

**ಪ್ರಶ್ನೆ 17. ಮಲಮೂತ್ರ ವಿಸರ್ಜನೆಯ ಶಿಷ್ಟಾಚಾರಗಳನ್ನು ತಿಳಿಸಿ?**

**ಉತ್ತರ:**

1- ಎಡಗಾಲಿನಿಂದ ಶೌಚಾಲಯವನ್ನು ಪ್ರವೇಶಿಸುವುದು.

2- ಪ್ರವೇಶಿಸುವ ಮೊದಲು ಹೀಗೆ ಹೇಳುವುದು : **"ಅಲ್ಲಾಹನ ನಾಮದಿಂದ , ಓ ಅಲ್ಲಾಹನೇ, ನಾನು ಗಂಡು ಮತ್ತು ಹೆಣ್ಣು ಶೈತಾನರಿಂದ ನಿನ್ನಲ್ಲಿ ಅಭಯ ಯಾಚಿಸುತ್ತೇನೆ."**

3- ಅಲ್ಲಾಹನ ಹೆಸರನ್ನು ಹೊಂದಿರುವ ಯಾವುದನ್ನೂ ಶೌಚಾಲಯದ ಒಳಗೆ ಒಯ್ಯದಿರುವುದು.

4- ವಿಸರ್ಜನೆಯ ಸಮಯದಲ್ಲಿ ಗುಹ್ಯಭಾಗವನ್ನು ಮರೆಮಾಚುವುದು.

5- ವಿಸರ್ಜನೆ ಮಾಡುವ ಸ್ಥಳದಲ್ಲಿ ಮಾತನಾಡದಿರುವುದು.

6- ಮಲ ಮೂತ್ರ ವಿಸರ್ಜನೆ ಮಾಡುವಾಗ ಕಿಬ್ಲಾದೆಡೆಗೆ ಮುಖ ಮಾಡದಿರುವುದು ಅಥವಾ ಬೆನ್ನು ತೋರಿಸದಿರುವುದು.

7- ಕಲ್ಮಶವನ್ನು ನಿವಾರಿಸಲು ಎಡಗೈಯನ್ನು ಬಳಸುವುದು . ಬಲಗೈಯನ್ನು ಬಳಸದಿರುವುದು.

8- ಜನರು ನಡೆದಾಡುವ ರಸ್ತೆಯಲ್ಲಿ ಅಥವಾ ಜನರು ಉಪಯೋಗಿಸುವ ನೆರಳಿನಲ್ಲಿ ವಿಸರ್ಜನೆ ಮಾಡದಿರುವುದು.

9- ವಿಸರ್ಜನೆಯ ನಂತರ ಕೈಗಳನ್ನು ತೊಳೆಯುವುದು.

10- ಎಡಗಾಲಿಟ್ಟು ಶೌಚಾಲಯದಿಂದ ಹೊರಬರುವುದು ಮತ್ತು ಗುಫ್ರಾನಕ್ ಎಂದು ಹೇಳುವುದು.

# ಮಸೀದಿಯ ಶಿಷ್ಟಾಚಾರಗಳು

**ಪ್ರಶ್ನೆ 18. ಮಸೀದಿಯ ಶಿಷ್ಟಾಚಾರಗಳನ್ನು ತಿಳಿಸಿ?**

**ಉತ್ತರ:**

1- ಬಲಗಾಲಿಟ್ಟು ಮಸೀದಿಯನ್ನು ಪ್ರವೇಶಿಸುವುದು . ಪ್ರವೇಶಿಸುವಾಗ ಹೀಗೆ ಹೇಳುವುದು : **ಬಿಸ್ಮಿಲ್ಲಾಹಿ ಅಲ್ಲಾಹುಮ್ಮ ಫ್ತಹ್ ಲೀ ಅಬ್ವಾಬ ರಹ್ಮತಿಕ್. "ಅಲ್ಲಾಹನ ಹೆಸರಿನಿಂದ, ಓ ಅಲ್ಲಾಹನೇ, ನಿನ್ನ ಕರುಣೆಯ ಬಾಗಿಲುಗಳನ್ನು ನನಗೆ ತೆರೆದುಕೊಡು."**

2- ಕುಳಿತುಕೊಳ್ಳುವುದಕ್ಕೆ ಮುಂಚೆ ಎರಡು ರಕ್‌ಅತ್ ನಮಾಝ್ ನಿರ್ವಹಿಸುವುದು.

3- ನಮಾಝ್ ಮಾಡುವವರ ಮುಂದೆ ಹಾದುಹೋಗದಿರುವುದು , ಮಸೀದಿಯಲ್ಲಿ ಕಳೆದುಹೋದ ವಸ್ತುಗಳನ್ನು ಹುಡುಕದಿರುವುದು ಮತ್ತು ಮಸೀದಿಯಲ್ಲಿ ಮಾರಾಟ ಮತ್ತು ಖರೀದಿ ಮಾಡದಿರುವುದು.

4- ಎಡಗಾಲಿಟ್ಟು ಮಸೀದಿಯಿಂದ ಹೊರಬರುವುದು ಮತ್ತು ಹೀಗೆ ಹೇಳುವುದು : **"ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನ್ ಫದ್‌ಲಿಕ" (ಓ ಅಲ್ಲಾಹ್! ನಾನು ನಿನ್ನ ಔದಾರ್ಯದೊಂದಿಗೆ ನಿನ್ನಲ್ಲಿ ಬೇಡುತ್ತಿದ್ದೇನೆ.)**

# ಸಲಾಮ್ ಹೇಳುವ ಶಿಷ್ಟಾಚಾರಗಳು

**ಪ್ರಶ್ನೆ 19. ಸಲಾಮ್ ಹೇಳುವ ಶಿಷ್ಟಾಚಾರಗಳನ್ನು ತಿಳಿಸಿ?**

**ಉತ್ತರ:**

1- ಮುಸ್ಲಿಮನನ್ನು ಭೇಟಿಯಾದಾಗ ಮೊತ್ತಮೊದಲು ಸಲಾಮ್ ಹೇಳುವುದು: **"ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹಿ ವಬರಕಾತುಹು".** ಸಲಾಂ ಅಲ್ಲದ ಬೇರೆ ಯಾವುದನ್ನು ಮೊದಲು ಹೇಳದಿರುವುದು. ಸನ್ನೆಯ ಮೂಲಕ ಸಲಾಮ್ ಹೇಳಿದರೆ ಸಾಕಾಗುವುದಿಲ್ಲ.

2- ಸಲಾಮ್ ಹೇಳುವ ವ್ಯಕ್ತಿಯ ಮುಖ ನೋಡಿ ಮುಗುಳು ನಗೆ ಬೀರುವುದು.

3- ಬಲಗೈಯಿಂದ ಹಸ್ತಲಾಘವ ಮಾಡುವುದು.

4- ಯಾರಾದರೂ ಸಲಾಮ್ ಹೇಳಿದರೆ, ಅದಕ್ಕಿಂತಲೂ ಉತ್ತಮವಾದುದರ ಮೂಲಕ ಉತ್ತರ ನೀಡುವುದು ಅಥವಾ ಕನಿಷ್ಠ ಅಷ್ಟನ್ನೇ ಹಿಂದಿರುಗಿಸುವುದು.

5- ಸತ್ಯನಿಷೇಧಿಗೆ ಮೊದಲು ಸಲಾಮ್ ಹೇಳದಿರುವುದು . ಒಂದು ವೇಳೆ ಅವನೇ ಸಲಾಮ್ ಹೇಳಿದರೆ ಅದೇ ರೀತಿ ಉತ್ತರಿಸುವುದು.

6- ಕಿರಿಯರು ಹಿರಿಯರಿಗೆ, ಸವಾರಿ ಮಾಡುವವರು ಪಾದಚಾರಿಗಳಿಗೆ , ಚಲಿಸುವವರು ಕುಳಿತವರಿಗೆ ಮತ್ತು ಚಿಕ್ಕ ಗುಂಪು ದೊಡ್ಡ ಗುಂಪಿಗೆ ಸಲಾಮ್ ಹೇಳುವುದು.

## ಅನುಮತಿ ಕೇಳುವ ಶಿಷ್ಟಾಚಾರಗಳು

**ಪ್ರಶ್ನೆ 20. ಅನುಮತಿ ಕೇಳುವ ಶಿಷ್ಟಾಚಾರಗಳನ್ನು ತಿಳಿಸಿ?**

**ಉತ್ತರ:**

1- ಒಂದು ಸ್ಥಳಕ್ಕೆ ಪ್ರವೇಶಿಸುವ ಮೊದಲು ಅನುಮತಿ ಕೇಳುವುದು.

2- ಮೂರು ಬಾರಿಗಿಂತ ಹೆಚ್ಚು ಅನುಮತಿ ಕೇಳದಿರುವುದು. ನಂತರ ಹೊರಟುಹೋಗುವುದು.

3- ಬಾಗಿಲನ್ನು ನಿಧಾನವಾಗಿ ತಟ್ಟುವುದು , ಬಾಗಿಲಿನ ಎದುರುಭಾಗದಲ್ಲಿ ನಿಲ್ಲದೆ , ಬಲ ಅಥವಾ ಎಡಬದಿಯಲ್ಲಿ ನಿಲ್ಲುವುದು.

4- ತಂದೆ-ತಾಯಿ ಅಥವಾ ಇತರರ ಕೋಣೆಯನ್ನು ಅವರ ಅನುಮತಿ ಕೇಳದೆ ಪ್ರವೇಶಿಸದಿರುವುದು. ವಿಶೇಷವಾಗಿ ಫಜ್ರ್ ನಮಾಝಿಗೆ ಮುಂಚೆ, ಮಧ್ಯಾಹ್ನದ ನಿದ್ದೆಯ ಮತ್ತು ಇಶಾ ನಮಾಝಿನ ಬಳಿಕ.

5- ಆಸ್ಪತ್ರೆ, ಅಂಗಡಿ ಮುಂತಾದ ಜನರು ವಾಸಿಸದ ಸ್ಥಳಗಳನ್ನು ಅನುಮತಿಯಿಲ್ಲದೆ ಪ್ರವೇಶಿಸಬಹುದು.

## ಪ್ರಾಣಿದಯೆಯ ಶಿಷ್ಟಾಚಾರಗಳು

**ಪ್ರಶ್ನೆ 21: ಪ್ರಾಣಿಗಳಿಗೆ ದಯೆ ತೋರುವ ಶಿಷ್ಟಾಚಾರಗಳನ್ನು ತಿಳಿಸಿ.**

**ಉತ್ತರ:**

1. ಪ್ರಾಣಿಗಳಿಗೆ ಆಹಾರ ಮತ್ತು ಪಾನೀಯವನ್ನು ನೀಡುವುದು.
2. ಪ್ರಾಣಿಗಳಿಗೆ ದಯೆ ಮತ್ತು ಸೌಮ್ಯತೆ ತೋರುವುದು ; ಮತ್ತು ಅವುಗಳಿಗೆ ಹೊರಲಾಗದ ಹೊರೆಯನ್ನು ಹೊರಿಸದಿರುವುದು.
3. ಪ್ರಾಣಿಗಳಿಗೆ ಯಾವುದೇ ರೀತಿಯಲ್ಲಿ ಹಿಂಸಿಸುವುದು ಅಥವಾ ತೊಂದರೆ ನೀಡುವುದರಿಂದ ದೂರವಿರುವುದು.

**ಕ್ರೀಡೆಯ ಶಿಷ್ಟಾಚಾರಗಳು:**

**ಪ್ರಶ್ನೆ 22. ಕ್ರೀಡೆಯ ಶಿಷ್ಟಾಚಾರಗಳನ್ನು ತಿಳಿಸಿ.**

**ಉತ್ತರ:**

1. ಅಲ್ಲಾಹನನ್ನು ಅನುಸರಿಸಲು ಮತ್ತು ಅವನ ಸಂಪ್ರೀತಿಗೆ ಪಾತ್ರನಾಗಲು ಶಕ್ತಿಯನ್ನು ಪಡೆಯುವುದಕ್ಕಾಗಿ ಕ್ರೀಡೆಗಳಲ್ಲಿ ಭಾಗವಹಿಸುತ್ತೇನೆಂದು ನಿಯ್ಯತ್ ಮಾಡುವುದು.
2. ನಮಾಝಿನ ಸಮಯದಲ್ಲಿ ಆಡದಿರುವುದು.
3. ಹುಡುಗರು ಮತ್ತು ಹುಡುಗಿಯರು ಜೊತೆಗೂಡಿ ಆಡದಿರುವುದು.
4. 'ಔರತ್' (ದೇಹದ ನಗ್ನ ಭಾಗಗಳನ್ನು ) ಮುಚ್ಚುವ ಕ್ರೀಡಾ ಉಡುಪುಗಳನ್ನು ಮಾತ್ರ ಧರಿಸುವುದು.
5. ಮುಖಕ್ಕೆ ಹೊಡೆಯುವುದು ಅಥವಾ **'ಔರತ್'** (ದೇಹದ ನಗ್ನ ಭಾಗಗಳನ್ನು ) ಪ್ರದರ್ಶಿಸುವಂತಹ ನಿಷಿದ್ಧ ಕ್ರೀಡೆಗಳನ್ನು ಆಡದಿರುವುದು.

## ಹಾಸ್ಯದ ಶಿಷ್ಟಾಚಾರಗಳು

**ಪ್ರಶ್ನೆ 23: ಹಾಸ್ಯದ ಕೆಲವು ಶಿಷ್ಟಾಚಾರಗಳನ್ನು ತಿಳಿಸಿ.**

**ಉತ್ತರ:**

1. ಹಾಸ್ಯ ಮಾಡುವಾಗ ಸತ್ಯ ಹೇಳುವುದು ಮತ್ತು ಸುಳ್ಳು ಹೇಳದಿರುವುದು.

2. ಹಾಸ್ಯವು ಅಪಹಾಸ್ಯ, ಮಾನಹಾನಿ ಮತ್ತು ಬೆದರಿಕೆಗಳಿಂದ ಮುಕ್ತವಾಗಿರುವುದು.
3. ಹೆಚ್ಚು ಹೆಚ್ಚು ಹಾಸ್ಯ ಮಾಡದಿರುವುದು.

## ಸೀನುವುದರ ಶಿಷ್ಟಾಚಾರಗಳು

**ಪ್ರಶ್ನೆ 24. ಸೀನುವುದರ ಶಿಷ್ಟಾಚಾರಗಳನ್ನು ತಿಳಿಸಿ.**

**ಉತ್ತರ:**

1. ಸೀನುವಾಗ ಕೈ, ಬಟ್ಟೆ ಅಥವಾ ಕರವಸ್ತ್ರವನ್ನು ಬಳಸುವುದು.
2. ಸೀನಿದ ನಂತರ ಅಲ್ಲಾಹನನ್ನು ಸ್ತುತಿಸುವುದು : "ಅಲ್-ಹಮ್ದುಲಿಲ್ಲಾಹ್" (ಅಲ್ಲಾಹನಿಗೆ ಸ್ತುತಿ) ಎಂದು ಹೇಳುವುದು.
3. ಸೀನಿದವನ ಸಹೋದರ ಅಥವಾ ಸಹಚರ ಹೀಗೆ ಹೇಳಬೇಕು : "ಯರ್ಹಮುಕಲ್ಲಾಹ್" (ಅಲ್ಲಾಹನು ನಿನ್ನ ಮೇಲೆ ಕರುಣೆ ತೋರಲಿ).

ಸೀನಿದವನು ಅದಕ್ಕೆ ಹೀಗೆ ಉತ್ತರಿಸಬೇಕು **: "ಯಹ್ದೀಕುಮುಲ್ಲಾಹು ವಯುಸ್ಲಿಹು ಬಾಲಕುಮ್ "**
**(ಅಲ್ಲಾಹನು ನಿಮಗೆ ಮಾರ್ಗದರ್ಶನ ಮಾಡಲಿ ಮತ್ತು ನಿಮ್ಮ ಸ್ಥಿತಿಯನ್ನು ಉತ್ತಮಗೊಳಿಸಲಿ)**

**ಆಕಳಿಕೆಯ ಶಿಷ್ಟಾಚಾರಗಳು:**

**ಪ್ರಶ್ನೆ 25: ಆಕಳಿಕೆಯ ಶಿಷ್ಟಾಚಾರಗಳು ಯಾವುವು?**

**ಉತ್ತರ:**

1. ಆಕಳಿಕೆಯನ್ನು ನಿಯಂತ್ರಿಸಲು ಪ್ರಯತ್ನಿಸುವುದು.
2. ಆಕಳಿಸುವಾಗ "ಆಹ್" "ಆಹ್" ಎಂದು ಸದ್ದು ಮಾಡದಿರುವುದು.
3. ಬಾಯಿಯ ಮೇಲೆ ಕೈ ಇಡುವುದು.

## ಪವಿತ್ರ ಕುರ್‌ಆನ್ ಪಠಣದ ಶಿಷ್ಟಾಚಾರಗಳು

**ಪ್ರಶ್ನೆ 26: ಕುರ್‌ಆನ್ ಪಠಣದ ಶಿಷ್ಟಾಚಾರಗಳನ್ನು ತಿಳಿಸಿ.**

**ಉತ್ತರ:**

1. ವುದೂ ನಿರ್ವಹಿಸಿದ ನಂತರ ಶುದ್ಧಾವಸ್ಥೆಯಲ್ಲಿ ಪಠಿಸುವುದು.
2. ಮರ್ಯಾದೆಯೊಂದಿಗೆ ಗಂಭೀರವಾಗಿ ಕುಳಿತುಕೊಳ್ಳುವುದು.
3. ಪಠಣದ ಪ್ರಾರಂಭದಲ್ಲಿ ಶೈತಾನನಿಂದ ಅಲ್ಲಾಹನಲ್ಲಿ ಅಭಯಕೋರುವುದು.
4. ಅರ್ಥವರಿತು ಪಠಣ ಮಾಡುವುದು.

*******

## ಗುಣನಡತೆಯ ವಿಭಾಗ

**ಪ್ರಶ್ನೆ 1. ಉತ್ತಮ ಗುಣನಡತೆಯ ಶ್ರೇಷ್ಠತೆಯನ್ನು ವಿವರಿಸಿ?**

ಉತ್ತರ: ಪ್ರವಾದಿ ﷺ ರವರು ಹೇಳಿದರು: **"ಅತ್ಯುತ್ತಮ ಗುಣನಡವಳಿಕೆಯನ್ನು ಹೊಂದಿರುವವರು ಯಾರೋ ಅವರೇ ಸಂಪೂರ್ಣ ಈಮಾನನ್ನು ಹೊಂದಿರುವ ಸತ್ಯ ವಿಶ್ವಾಸಿಗಳಾಗಿದ್ದಾರೆ."** [ತಿರ್ಮಿದಿ, ಅಹ್ಮದ್]

**ಪ್ರಶ್ನೆ 2. ನಾವೇಕೆ ಇಸ್ಲಾಮಿ ಗುಣನಡತೆಗಳನ್ನು ಅಳವಡಿಸಿಕೊಳ್ಳಬೇಕು?**

ಉತ್ತರ:

1. ಏಕೆಂದರೆ ಅದು ಅಲ್ಲಾಹನ ಪ್ರೀತಿಗೆ ಕಾರಣವಾಗುತ್ತದೆ.

2. ಜನರ ಪ್ರೀತಿಗೆ ಕಾರಣವಾಗುತ್ತದೆ.

3. ಅದು ತಕ್ಕಡಿಯಲ್ಲಿ ಅತಿಹೆಚ್ಚು ಭಾರ ತೂಗುತ್ತದೆ.

4. ಉತ್ತಮ ಗುಣ ನಡತೆಯಿಂದ ಪ್ರತಿಫಲಗಳು ಹಲವು ಪಟ್ಟು ಹೆಚ್ಚಾಗುತ್ತವೆ.

5. ಅದು ಪರಿಪೂರ್ಣ ಸತ್ಯವಿಶ್ವಾಸದ ಚಿಹ್ನೆಯಾಗಿದೆ.

**ಪ್ರಶ್ನೆ 3. ನಾವು ಗುಣನಡತೆಗಳನ್ನು ಎಲ್ಲಿಂದ ಪಡೆಯಬೇಕು?**

ಉತ್ತರ: ಪವಿತ್ರ ಕುರ್‌ಆನ್‌ನಿಂದ. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿إِنَّ هَٰذَا ٱلْقُرْءَانَ يَهْدِي لِلَّتِي هِيَ أَقْوَمُ﴾ **"ಖಂಡಿತವಾಗಿಯೂ ಈ ಕುರ್‌ಆನ್ ಅತ್ಯಂತ ನೇರವಾಗಿರುವ ಮಾರ್ಗದೆಡೆಗೆ ಮುನ್ನಡೆಸುತ್ತದೆ."** [ಸೂರ ಅಲ್-ಇಸ್ರಾ:9].

ಪ್ರವಾದಿಯವರ ಸುನ್ನತ್ತಿನಿಂದ. ಪ್ರವಾದಿ(ಸ) ರವರು ಹೇಳಿದರು: **"ನಿಶ್ಚಯವಾಗಿಯೂ ಉತ್ತಮ ಗುಣನಡತೆಗಳ ಪೂರ್ತೀಕರಣಕ್ಕಾಗಿ ನನ್ನನ್ನು ಕಳುಹಿಸಲಾಗಿದೆ."** [ಅಹ್ಮದ್].

**ಪ್ರಶ್ನೆ 4. ಇಹ್ಸಾನ್(ಉತ್ತಮ ವರ್ತನೆ) ಎಂದರೇನು ಮತ್ತು ಅದರ ರೂಪಗಳು ಯಾವುವು?**

ಉತ್ತರ: ಇಹ್ಸಾನ್ ಎಂದರೆ ಪ್ರತಿಯೊಂದು ಕಾರ್ಯದಲ್ಲಿ ಅಲ್ಲಾಹನಿಗಾಗಿ ನಿಷ್ಕಪಟತೆಯನ್ನು ಹೊಂದಿರುವುದು ಮತ್ತು ಸಹಜೀವಿಗಳೊಂದಿಗೆ ಉತ್ತಮ ರೀತಿಯಿಂದ ವರ್ತಿಸುವುದು.

ಪ್ರವಾದಿ ﷺ ರವರು ಹೇಳಿದರು: **"ನಿಶ್ಚಯವಾಗಿಯೂ ಅಲ್ಲಾಹು ಎಲ್ಲಾ ವಿಷಯಗಳಲ್ಲೂ ಇಹ್ಸಾನ್ ಅನ್ನು (ಉತ್ತಮ ರೀತಿಯಿಂದ ವರ್ತಿಸುವುದನ್ನು)ಕಡ್ಡಾಯಗೊಳಿಸಿದ್ದಾನೆ."** [ಮುಸ್ಲಿಮ್].

**ಇಹ್ಸಾನ್‌ನ (ಉತ್ತಮ ವರ್ತನೆಯ) ರೂಪಗಳು:**

- ಅಲ್ಲಾಹನ ಆರಾಧನೆಯಲ್ಲಿ ಇಹ್ಸಾನ್ ಮಾಡುವುದು . ಅಂದರೆ ಅಲ್ಲಾಹನನ್ನು ನಿಷ್ಕಳಂಕವಾಗಿ ಆರಾಧಿಸುವುದು.
- ಮಾತಾಪಿತರಿಗೆ ಇಹ್ಸಾನ್ ಮಾಡುವುದು . ಅಂದರೆ ಮಾತು ಮತ್ತು ಕ್ರಿಯೆಯಲ್ಲಿ ಅವರೊಂದಿಗೆ ಉತ್ತಮವಾಗಿ ವರ್ತಿಸುವುದು.
- ರಕ್ತ ಸಂಬಂಧಿಕರಿಗೆ ಮತ್ತು ಆಪ್ತ ಸಂಬಂಧಿಕರಿಗೆ ಇಹ್ಸಾನ್ ಮಾಡುವುದು.
- ನೆರೆಹೊರೆಯವರಿಗೆ ಇಹ್ಸಾನ್ ಮಾಡುವುದು.
- ಅನಾಥರಿಗೆ ಮತ್ತು ಬಡವರಿಗೆ ಇಹ್ಸಾನ್ ಮಾಡುವುದು.
- ನಿಮ್ಮೊಂದಿಗೆ ಕೆಟ್ಟದಾಗಿ ವರ್ತಿಸಿದವರಿಗೆ ಇಹ್ಸಾನ್ ಮಾಡುವುದು.
- ಮಾತನಾಡುವಾಗ ಇಹ್ಸಾನ್ ಮಾಡುವುದು
- ತರ್ಕಿಸುವಾಗ ಇಹ್ಸಾನ್ ಮಾಡುವುದು.
- ಪ್ರಾಣಿಗಳಿಗೆ ಇಹ್ಸಾನ್ ಮಾಡುವುದು.

**ಪ್ರಶ್ನೆ 5. ಇಹ್ಸಾನ್‌ಗೆ (ಉತ್ತಮ ವರ್ತನೆಗೆ) ವಿರುದ್ಧವಾದುದು ಯಾವುದು?**

**ಉತ್ತರ:** ಇಸಾಅತ್ (ಕೆಟ್ಟ ವರ್ತನೆ) ಇಹ್ಸಾನ್‌ಗೆ ವಿರುದ್ಧವಾಗಿದೆ.

ಇಸಾಅತ್‌ಗೆ ಉದಾಹರಣೆಗಳು;

- ಅಲ್ಲಾಹನ ಆರಾಧನೆಯಲ್ಲಿ ನಿಷ್ಕಳಂಕತೆಯಿಲ್ಲದಿರುವುದು.
- ಮಾತಾಪಿತರೊಡನೆ ಕೆಟ್ಟದಾಗಿ ವರ್ತಿಸುವುದು.
- ಕುಟುಂಬ ಸಂಬಂಧವನ್ನು ಕಡಿಯುವುದು.
- ನೆರೆಯವರೊಂದಿಗೆ ಕೆಟ್ಟದಾಗಿ ವರ್ತಿಸುವುದು.
- ಬಡವರು ಮತ್ತು ನಿರ್ಗತಿಕರೊಂದಿಗೆ ತನ್ನ ಕೆಟ್ಟ ಮಾತು ಮತ್ತು ವರ್ತನೆಗಳಿಂದ ಕೆಟ್ಟದಾಗಿ ವರ್ತಿಸುವುದು.

**ಪ್ರಶ್ನೆ 6: ಅಮಾನತ್‌ನ (ನಂಬಿಕಾರ್ಹತೆಯ) ವಿಧಗಳು ಮತ್ತು ರೂಪಗಳು ಯಾವುವು?**

**ಉತ್ತರ:**

1. ಸರ್ವಶಕ್ತನಾದ ಅಲ್ಲಾಹನ ಹಕ್ಕುಗಳನ್ನು ಸಂರಕ್ಷಿಸುವುದು ನಮ್ಮ ಮೇಲೆ ಅಮಾನತ್ ಆಗಿದೆ.

ಅದರ ರೂಪಗಳು: ನಮಾಝ್, ಝಕಾತ್, ಉಪವಾಸ, ಹಜ್ಜ್ ಮುಂತಾದ ಅಲ್ಲಾಹು ನಮ್ಮ ಮೇಲೆ ಕಡ್ಡಾಯಗೊಳಿಸಿದ ಆರಾಧನಾ ಕರ್ಮಗಳನ್ನು ನಿರ್ವಹಿಸುವುದು.

2. ಮಾನವರ ಹಕ್ಕುಗಳನ್ನು ಸಂರಕ್ಷಿಸುವುದೂ ಸಹ ನಮ್ಮ ಮೇಲೆ ಅಮಾನತ್ ಆಗಿದೆ.

- ಜನರ ಘನತೆ-ಗೌರವಗಳನ್ನು ಸಂರಕ್ಷಿಸುವುದು.
- ಜನರ ಆಸ್ತಿಪಾಸ್ತಿಗಳನ್ನು ಸಂರಕ್ಷಿಸುವುದು.
- ಜನರ ಜೀವವನ್ನು ಸಂರಕ್ಷಿಸುವುದು.
- ಜನರ ರಹಸ್ಯಗಳನ್ನು ಸಂರಕ್ಷಿಸುವುದು ಮತ್ತು ಜನರು ನಿಮ್ಮ ಮೇಲೆ ನಂಬಿಕೆಯಿಡುವ ಎಲ್ಲಾ ವಿಷಯಗಳಲ್ಲೂ ನಂಬಿಗಸ್ತನಾಗಿರುವುದು.

ಯಶಸ್ವಿಯಾದವರ ಗುಣಗಳನ್ನು ವಿವರಿಸುತ್ತಾ ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَٱلَّذِينَ هُمۡ لِأَمَٰنَٰتِهِمۡ وَعَهۡدِهِمۡ رَٰعُونَ﴾ [المؤمنون: 8].

**"ಅಂದರೆ ಆ ಸತ್ಯ ವಿಶ್ವಾಸಿಗಳು ತಮ್ಮ ನಂಬಿಕಾರ್ಹತೆಯನ್ನು ಮತ್ತು ಕರಾರುಗಳನ್ನು ಕಾಪಾಡಿಸಕೊಳ್ಳುವವರಾಗಿದ್ದಾರೆ."** [ಸೂರ ಅಲ್-ಮೂಮಿನೂನ್:8]

## ಪ್ರಶ್ನೆ 7. ಅಮಾನತ್‌ಗೆ (ನಂಬಿಕಾರ್ಹತೆಗೆ) ವಿರುದ್ಧವಾದುದು ಯಾವುದು?

**ಉತ್ತರ:** ಖಿಯಾನತ್ (ನಂಬಿಕೆದ್ರೋಹ). ಅಂದರೆ ಅಲ್ಲಾಹನ ಹಕ್ಕುಗಳನ್ನು ಮತ್ತು ಮನುಷ್ಯರ ಹಕ್ಕುಗಳನ್ನು ನೆರವೇರಿಸದಿರುವುದು.

ಪ್ರವಾದಿ ﷺ ರವರು ಹೇಳಿದರು : **"ಕಪಟಿಗಳಿಗೆ ಮೂರು ಲಕ್ಷಣಗಳಿವೆ ." ಅವುಗಳಲ್ಲೊಂದು: "ಅವನ ಮೇಲೆ ನಂಬಿಕೆಯಿಟ್ಟರೆ ಅವನು ನಂಬಿಕೆದ್ರೋಹ ಮಾಡುತ್ತಾನೆ."** (ಮುತ್ತಫಕುನ್ ಅಲೈಹಿ).

## ಪ್ರಶ್ನೆ 8. ಸತ್ಯವಂತಿಕೆಯ ಗುಣ ಯಾವುದು?

**ಉತ್ತರ:** ಸತ್ಯವಂತಿಕೆ ಎಂದರೆ ನಿಜಸ್ಥಿತಿಗೆ ಅನುಗುಣವಾಗಿ ಅಥವಾ ಇದ್ದದ್ದು ಇದ್ದಂತೆ ಹೇಳುವುದು.

ಅದರ ರೂಪಗಳು:

- ಜನರೊಂದಿಗೆ ಮಾತನಾಡುವಾಗ ಸತ್ಯ ಹೇಳುವುದು.
- ಮಾತು ಕೊಟ್ಟರೆ ಅದನ್ನು ಪಾಲಿಸುವುದು.
- ಪ್ರತಿಯೊಂದು ಮಾತು ಮತ್ತು ಕಾರ್ಯದಲ್ಲಿ ಸತ್ಯವಂತನಾಗಿರುವುದು.

ಪ್ರವಾದಿ ﷺ ರವರು ಹೇಳಿದರು: **"ನಿಶ್ಚಯವಾಗಿಯೂ, ಸತ್ಯವು ಒಳಿತಿನೆಡೆಗೆ ಒಯ್ಯುತ್ತದೆ ಮತ್ತು ಒಳಿತು ಸ್ವರ್ಗಕ್ಕೆ ಒಯ್ಯುತ್ತದೆ. ಒಬ್ಬ ವ್ಯಕ್ತಿಯು ನಿರಂತರ ಸತ್ಯವನ್ನೇ ಹೇಳುತ್ತಾ ಇದ್ದರೆ ಅವನು ಅಲ್ಲಾಹನ ಬಳಿ ಸತ್ಯವಂತನೆಂದು ದಾಖಲಿಸಲ್ಪಡುತ್ತಾನೆ."** (ಮುತ್ತಫಕುನ್ ಅಲೈಹಿ).

## ಪ್ರಶ್ನೆ 9. ಸತ್ಯಕ್ಕೆ ವಿರುದ್ಧವಾದುದು ಯಾವುದು?

**ಉತ್ತರ: ಸುಳ್ಳು;** ಅದು ನಿಜಸ್ಥಿತಿಗೆ ವಿರುದ್ಧವಾದುದು . ಉದಾಹರಣೆಗೆ; ಜನರೊಡನೆ ಸುಳ್ಳು ಹೇಳುವುದು, ಮಾತು ಕೊಟ್ಟರೆ ಉಲ್ಲಂಘಿಸುವುದು, ಸುಳ್ಳು ಸಾಕ್ಷಿ ಹೇಳುವುದು.

ಪ್ರವಾದಿ ﷺ ರವರು ಹೇಳಿದರು : **"ನಿಶ್ಚಯವಾಗಿಯೂ ಸುಳ್ಳು ಕೆಡುಕಿನೆಡೆಗೆ ಒಯ್ಯುತ್ತದೆ ಮತ್ತು ಕೆಡುಕು ನರಕಕ್ಕೆ ಒಯ್ಯುತ್ತದೆ . ಒಬ್ಬ ವ್ಯಕ್ತಿ ಸುಳ್ಳು ಹೇಳುತ್ತಲೇ ಇದ್ದರೆ ಅಲ್ಲಾಹನ ಬಳಿ ಅವನು ಸುಳ್ಳುಗಾರನೆಂದು ದಾಖಲಿಸಲ್ಪಡುತ್ತಾನೆ."** (ಮುತ್ತಫಕುನ್ ಅಲೈಹಿ).

ಪ್ರವಾದಿ ﷺ ರವರು ಹೇಳಿದರು **: "ಕಪಟವಿಶ್ವಾಸಿಗೆ ಮೂರು ಲಕ್ಷಣಗಳಿವೆ. ಅವುಗಳಲ್ಲಿ ಎರಡು ಹೀಗಿವೆ: ಮಾತನಾಡಿದರೆ ಸುಳ್ಳು ಹೇಳುವುದು ಮತ್ತು ವಾಗ್ದಾನ ಮಾಡಿದರೆ ಉಲ್ಲಂಘಿಸುವುದು."** (ಮುತ್ತಫಕುನ್ ಅಲೈಹಿ).

**ಪ್ರಶ್ನೆ 10: ತಾಳ್ಮೆಯ ವಿಧಗಳನ್ನು ತಿಳಿಸಿ.**

**ಉತ್ತರ:**

- ಅಲ್ಲಾಹನಿಗೆ ವಿಧೇಯತೆ ತೋರುವುದರಲ್ಲಿ ತಾಳ್ಮೆ ವಹಿಸುವುದು.
- ಅವಿಧೇಯತೆಯನ್ನು ತೊರೆಯುವುದರಲ್ಲಿ ತಾಳ್ಮೆ ವಹಿಸುವುದು.
- ವೇದನಾಯುಕ್ತ ವಿಧಿ-ನಿರ್ಣಯಗಳಲ್ಲಿ ತಾಳ್ಮೆ ವಹಿಸುವುದು ಮತ್ತು ಎಲ್ಲಾ ಸ್ಥಿತಿಗಳಲ್ಲೂ ಅಲ್ಲಾಹನನ್ನು ಸ್ತುತಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ :﴿وَٱللَّهُ يُحِبُّ ٱلصَّٰبِرِينَ﴾ **"ಮತ್ತು ಅಲ್ಲಾಹು ತಾಳ್ಮೆ ವಹಿಸುವವರನ್ನು ಪ್ರೀತಿಸುತ್ತಾನೆ."** [ಸೂರ ಆಲು ಇಮ್ರಾನ್:146].

ಪ್ರವಾದಿ ﷺ ರವರು ಹೇಳಿದರು : **"ವಿಶ್ವಾಸಿಯ ಸಂಗತಿ ಅದ್ಭುತವಾಗಿದೆ ! ಅವನ ಸಂಗತಿಗಳೆಲ್ಲವೂ ಅವನಿಗೆ ಒಳಿತೇ ಆಗಿವೆ. ಅದು ವಿಶ್ವಾಸಿಗಳಿಗಲ್ಲದೆ ಇನ್ನಾರಿಗೂ ಇಲ್ಲ. ಅವನಿಗೆ ಸಂತೋಷವಾದರೆ ಅವನು ಕೃತಜ್ಞತೆ ಸಲ್ಲಿಸುತ್ತಾನೆ. ಅದು ಅವನಿಗೆ ಒಳಿತಾಗಿದೆ. ಇನ್ನು ಅವನಿಗೆ ಕಷ್ಟ ಬಂದರೆ ಅವನು ತಾಳ್ಮೆ ವಹಿಸುತ್ತಾನೆ. ಅದೂ ಕೂಡ ಅವನಿಗೆ ಒಳಿತಾಗಿದೆ."** [ಮುಸ್ಲಿಮ್].

**ಪ್ರಶ್ನೆ 11. ತಾಳ್ಮೆಗೆ ವಿರುದ್ಧವಾದುದು ಯಾವುದು?**

**ಉತ್ತರ:** - ಅಲ್ಲಾಹನಿಗೆ ವಿಧೇಯತೆ ತೋರುವುದರಲ್ಲಿ ತಾಳ್ಮೆ ವಹಿಸದಿರುವುದು, ಅವಿಧೇಯತೆಯನ್ನು ತೊರೆಯುವುದರಲ್ಲಿ ತಾಳ್ಮೆ ವಹಿಸದಿರುವುದು ಮತ್ತು ಮಾತು ಮತ್ತು ಕ್ರಿಯೆಯ ಮೂಲಕ ವಿಧಿ - ನಿರ್ಣಯಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವುದು.

ಅದರ ರೂಪಗಳು:

- ಸಾವನ್ನು ಬಯಸುವುದು.
- ಮುಖಕ್ಕೆ ಬಡಿಯುವುದು.
- ಬಟ್ಟೆಗಳನ್ನು ಹರಿಯುವುದು.
- ಕೂದಲನ್ನು ಕೆದರುವುದು.
- ಸ್ವಯಂ ವಿನಾಶಕ್ಕಾಗಿ ಪ್ರಾರ್ಥಿಸುವುದು.

ಪ್ರವಾದಿ ﷺ ರವರು ಹೇಳಿದರು : **"ಪರೀಕ್ಷೆಯ ಗಾತ್ರಕ್ಕೆ ಅನುಗುಣವಾಗಿ ಪ್ರತಿಫಲ ಇರುತ್ತದೆ. ಅಲ್ಲಾಹು ಒಂದು ಜನತೆಯನ್ನು ಪ್ರೀತಿಸಿದರೆ , ಅವರನ್ನು ಪರೀಕ್ಷಿಸುತ್ತಾನೆ. ಯಾರು ಸಂತೃಪ್ತಿ ಸೂಚಿಸುತ್ತಾರೋ ಅವರಿಗೆ ಸಂತೃಪ್ತಿಯಿದೆ. ಯಾರು ಅಸಂತೃಪ್ತಿ ಸೂಚಿಸುತ್ತಾರೋ ಅವರಿಗೆ ಅಸಂತೃಪ್ತಿಯಿದೆ.** [ತಿರ್ಮಿದಿ ಮತ್ತು ಇಬ್ನ್ ಮಾಜ].

## ಪ್ರಶ್ನೆ 12. ಸಹಕಾರದ ಗುಣವನ್ನು ವಿವರಿಸಿ.

**ಉತ್ತರ:** ಸಹಕಾರ ಎಂದರೆ ಸತ್ಯ ಮತ್ತು ಒಳಿತಿನಲ್ಲಿ ಜನರೊಡನೆ ಸಹಕರಿಸುವುದು.

ಸಹಕಾರದ ರೂಪಗಳು:

- ಹಕ್ಕುಗಳನ್ನು ನೀಡುವುದರಲ್ಲಿ ಸಹಕರಿಸುವುದು.
- ಅನ್ಯಾಯವನ್ನು ತಡೆಗಟ್ಟುವುದರಲ್ಲಿ ಸಹಕರಿಸುವುದು.
- ಜನರ ಮತ್ತು ಬಡವರ ಅಗತ್ಯಗಳನ್ನು ಪೂರೈಸುವುದರಲ್ಲಿ ಸಹಕರಿಸುವುದು.
- ಎಲ್ಲಾ ಒಳಿತುಗಳಲ್ಲೂ ಸಹಕರಿಸುವುದು.
- ಪಾಪ, ತೊಂದರೆ ಮತ್ತು ದ್ವೇಷದ ಕಾರ್ಯದಲ್ಲಿ ಸಹಕರಿಸದಿರುವುದು.

**ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:**

﴿وَتَعَاوَنُواْ عَلَى ٱلۡبِرِّ وَٱلتَّقۡوَىٰ وَلَا تَعَاوَنُواْ عَلَى ٱلۡإِثۡمِ وَٱلۡعُدۡوَٰنِۚ وَٱتَّقُواْ ٱللَّهَۖ إِنَّ ٱللَّهَ شَدِيدُ ٱلۡعِقَابِ﴾ [المائدة: 2].

**"ಪುಣ್ಯ ಮತ್ತು ಧರ್ಮನಿಷ್ಠೆಯಲ್ಲಿ ಪರಸ್ಪರ ಸಹಕರಿಸಿರಿ . ಪಾಪ ಮತ್ತು ಅತಿಕ್ರಮದಲ್ಲಿ ಪರಸ್ಪರ ಸಹಕರಿಸದಿರಿ. ನೀವು ಅಲ್ಲಾಹುವನ್ನು ಭಯ ಪಡಿರಿ . ಖಂಡಿತವಾಗಿಯೂ ಅಲ್ಲಾಹು ಕಠಿಣವಾಗಿ ಶಿಕ್ಷಿಸುವವನಾಗಿರುವನು."** [ಸೂರ ಅಲ್-ಮಾಇದ:2]

ಪ್ರವಾದಿ ﷺ ರವರು ಹೇಳಿದರು : **"ಒಬ್ಬ ಸತ್ಯವಿಶ್ವಾಸಿ ಇನ್ನೊಬ್ಬ ಸತ್ಯವಿಶ್ವಾಸಿಗೆ ಪರಸ್ಪರ ಬಿಗಿಯಾಗಿ ಹಿಡಿದುಕೊಂಡ ಒಂದು ಕಟ್ಟಡದಂತೆ."** (ಮುತ್ತಫಕುನ್ ಅಲೈಹಿ).

ಪ್ರವಾದಿ ﷺ ರವರು ಹೇಳಿದರು : **"ಒಬ್ಬ ಮುಸ್ಲಿಮ್ ಇನ್ನೊಬ್ಬ ಮುಸ್ಲಿಮನ ಸಹೋದರ. ಅವನು ಅವನಿಗೆ ಅನ್ಯಾಯ ಮಾಡಲಾರ. ಅವನನ್ನು (ಅನ್ಯಾಯ ಮಾಡುವವನ ಕೈಗೆ) ಒಪ್ಪಿಸಲಾರ. ಯಾರು ತನ್ನ ಸಹೋದರನ ಅಗತ್ಯವನ್ನು ಪೂರೈಸುತ್ತಾನೋ ಅವನ ಅಗತ್ಯವನ್ನು ಅಲ್ಲಾಹು ಪೂರೈಸುವನು. ಯಾರು ಮುಸ್ಲಿಮನನ್ನು ಒಂದು ಕಷ್ಟದಿಂದ ಪಾರು ಮಾಡುತ್ತಾನೋ ಅದರ ಕಾರಣದಿಂದಾಗಿ ಅಲ್ಲಾಹು ಅವನನ್ನು ಪುನರುತ್ಥಾನ ದಿನದ ಕಷ್ಟಗಳಲ್ಲಿ ಸೇರಿದ ಒಂದು ಕಷ್ಟದಿಂದ ಪಾರು ಮಾಡುವನು. ಯಾರು ಒಬ್ಬ ಮುಸ್ಲಿಮನ ನ್ಯೂನತೆಯನ್ನು ಮರೆಮಾಚುತ್ತಾನೋ ಅವನ ನ್ಯೂನತೆಯನ್ನು ಪುನರುತ್ಥಾನ ದಿನದಂದು ಅಲ್ಲಾಹು ಮರೆಮಾಚುವನು."** (ಮುತ್ತಫಕುನ್ ಅಲೈಹಿ).

## ಪ್ರಶ್ನೆ 13. ಲಜ್ಜೆಯ ಗುಣದ ವಿಧಗಳು ಯಾವುವು?

**ಉತ್ತರ:**

**1. ಅಲ್ಲಾಹನ ಬಗ್ಗೆ ಲಜ್ಜೆ ಪಡುವುದು** . ಅಂದರೆ ಅಲ್ಲಾಹನಿಗೆ ಅವಿಧೇಯತೆ ತೋರಲು ಸಂಕೋಚಪಡುವುದು.

**2. ಜನರ ಬಗ್ಗೆ ಲಜ್ಜೆ ಪಡುವುದು.** ಜನರೊಡನೆ ಅಶ್ಲೀಲವಾಗಿ ಮಾತನಾಡದಿರುವುದು ಮತ್ತು ಅವರ ಮುಂದೆ ಗುಹ್ಯಭಾಗಗಳನ್ನು ಪ್ರದರ್ಶಿಸದಿರುವುದು ಇದರಲ್ಲಿ ಒಳಪಡುತ್ತದೆ.

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು : **"ಸತ್ಯವಿಶ್ವಾಸವು ಎಪ್ಪತ್ತಕ್ಕಿಂತಲೂ ಹೆಚ್ಚು ಶಾಖೆಗಳನ್ನು ಹೊಂದಿದೆ ." ಅಥವಾ "ಅರುವತ್ತಕ್ಕಿಂತಲೂ ಹೆಚ್ಚು ." - "ಅವುಗಳಲ್ಲಿ ಅತ್ಯುನ್ನತ ಶಾಖೆಯು ಲಾ ಇಲಾಹ ಇಲ್ಲಲ್ಲಾಹ್ ಎಂಬ ವಚನ . ಅವುಗಳಲ್ಲಿ ಅತ್ಯಂತ ಕೆಳಗಿನ ಶಾಖೆಯು ರಸ್ತೆಯಿಂದ ಅಡ್ಡಿಗಳನ್ನು ನಿವಾರಿಸುವುದು . ಲಜ್ಜೆಯು ಸತ್ಯವಿಶ್ವಾಸದ ಒಂದು ಶಾಖೆಯಾಗಿದೆ."** [ಮುಸ್ಲಿಮ್].

## ಪ್ರಶ್ನೆ 14. ದಯಾಗುಣದ ರೂಪಗಳನ್ನು ತಿಳಿಸಿ.

**ಉತ್ತರ:**

- ಹಿರಿಯ ವಯಸ್ಸಿನವರಿಗೆ ದಯೆ ತೋರುವುದು ಮತ್ತು ಗೌರವಿಸುವುದು.
- ಕಿರಿಯ ವಯಸ್ಸಿನವರಿಗೆ ಮತ್ತು ಮಕ್ಕಳಿಗೆ ದಯೆ ತೋರುವುದು.
- ಬಡವರಿಗೆ, ನಿರ್ಗತಿಕರಿಗೆ ಮತ್ತು ಅಗತ್ಯವುಳ್ಳವರಿಗೆ ದಯೆ ತೋರುವುದು.
- ಪ್ರಾಣಿಗಳಿಗೆ ದಯೆ ತೋರುವುದು . ಅಂದರೆ ಅವುಗಳಿಗೆ ತಿನ್ನಲು ಕೊಡುವುದು ಮತ್ತು ಅವುಗಳಿಗೆ ಕಿರುಕುಳ ಕೊಡದಿರುವುದು.

ಅವುಗಳಲ್ಲೊಂದು ಪ್ರವಾದಿ ﷺ ರವರು ಹೇಳಿದ ಈ ವಚನ: **"ಪರಸ್ಪರ ದಯೆ ತೋರುವುದರಲ್ಲಿ, ಪರಸ್ಪರ ಪ್ರೀತಿಸುವುದರಲ್ಲಿ ಮತ್ತು ಪರಸ್ಪರ ಸಹಾನುಭೂತಿ ತೋರುವುದರಲ್ಲಿ ಸತ್ಯವಿಶ್ವಾಸಿಗಳ ಉದಾಹರಣೆಯು ಒಂದು ದೇಹದಂತೆ. ಅದರ ಒಂದು ಅಂಗಕ್ಕೆ ನೋವಾದರೆ ಸಂಪೂರ್ಣ ದೇಹವು ನಿದ್ದೆಗೆಡುವಿಕೆ ಮತ್ತು ಜ್ವರದಿಂದ ನರಳುತ್ತದೆ."** (ಮುತ್ತಫಕುನ್ ಅಲೈಹಿ).

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು : **"ದಯೆ ತೋರುವವರಿಗೆ ಪರಮ ದಯಾಮಯನು (ಅಲ್ಲಾಹು) ದಯೆ ತೋರುತ್ತಾನೆ. ಭೂಮಿಯಲ್ಲಿರುವವರಿಗೆ ದಯೆ ತೋರಿರಿ . ಆಕಾಶದಲ್ಲಿರುವವನು ನಿಮಗೆ ದಯೆ ತೋರುತ್ತಾನೆ."** [ಅಬೂದಾವೂದ್ ಮತ್ತು ತಿರ್ಮಿದಿ].

## ಪ್ರಶ್ನೆ 15. ಪ್ರೀತಿಸುವ ಗುಣದ ವಿಧಗಳು ಯಾವುವು?

**ಉತ್ತರ:** ಅಲ್ಲಾಹನನ್ನು ಪ್ರೀತಿಸುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ : ﴿وَٱلَّذِينَ ءَامَنُوٓاْ أَشَدُّ حُبًّا لِّلَّهِ﴾ [البقرة: 165]. "ಸತ್ಯವಿಶ್ವಾಸಿಗಳು ಅಲ್ಲಾಹನಲ್ಲಿ ಗಾಢವಾದ ಪ್ರೀತಿಯನ್ನು ಹೊಂದಿರುವರು ." [ಸೂರ ಅಲ್-ಬಕರ:165].

ಪ್ರವಾದಿಯವರನ್ನು(ಸ) ಪ್ರೀತಿಸುವುದು.

ಪ್ರವಾದಿ ﷺ ರವರು ಹೇಳಿದರು : "ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲಾಣೆ! ನಿಮ್ಮಲ್ಲೊಬ್ಬನಿಗೆ ಅವನ ತಂದೆ -ತಾಯಿ ಮತ್ತು ಮಕ್ಕಳಿಗಿಂತಲೂ ನಾನು ಅವನಿಗೆ ಅತ್ಯಂತ ಪ್ರಿಯನಾಗುವ ತನಕ ನಿಮ್ಮಲ್ಲಿ ಯಾರೊಬ್ಬರೂ ಸತ್ಯವಿಶ್ವಾಸಿಗಳಾಗಲಾರಿರಿ." [ಬುಖಾರಿ].

ಸತ್ಯವಿಶ್ವಾಸಿಗಳನ್ನು ಪ್ರೀತಿಸುವುದು ಮತ್ತು ತನಗೆ ಒಳಿತನ್ನು ಪ್ರೀತಿಸುವಂತೆಯೇ ಅವರಿಗೂ ಒಳಿತನ್ನು ಪ್ರೀತಿಸುವುದು.

ಪ್ರವಾದಿ ﷺ ರವರು ಹೇಳಿದರು : "ತನಗಾಗಿ ಪ್ರೀತಿಸುವುದನ್ನು ತನ್ನ ಸಹೋದರನಿಗಾಗಿ ಪ್ರೀತಿಸುವವರೆಗೂ ನಿಮ್ಮ ಪೈಕಿ ಯಾರೂ ನೈಜ ಸತ್ಯವಿಶ್ವಾಸಿಯಾಗಲಾರರು." [ಬುಖಾರಿ].

## ಪ್ರಶ್ನೆ 16. ಪ್ರಸನ್ನತೆ ಎಂದರೇನು?

**ಉತ್ತರ:** ಜನರನ್ನು ಭೇಟಿಯಾಗುವಾಗ, ಸಂತೋಷ, ಮುಗುಳ್ನಗೆ, ಅನುಕಂಪ ಮತ್ತು ಹರ್ಷ ಪ್ರಕಟಣೆಯೊಂದಿಗೆ ಮುಖ ಮಂದಸ್ಮಿತವಾಗಿರುವುದು.

ಜನರನ್ನು ಕಂಡಾಗ ದ್ವೇಷದಿಂದ ಮುಖ ಸಿಂಡರಿಸಿಕೊಂಡು ಭೇಟಿಯಾಗಬಾರದು.

ಇದರ ಶ್ರೇಷ್ಠತೆಯನ್ನು ವಿವರಿಸುವ ಅನೇಕ ಹದೀಸ್‌ಗಳಿವೆ . ಅಬೂ ದರ್(ರ) ರಿಂದ ವರದಿ. ಪ್ರವಾದಿ(ಸ) ರವರು ನನಗೆ ಹೇಳಿದರು: "ಒಳಿತಿನಲ್ಲಿ ಯಾವುದನ್ನೂ ತುಚ್ಛವಾಗಿ ಕಾಣಬೇಡ . ಅದು ನಗುಮುಖದಿಂದ ನಿನ್ನ ಸಹೋದರನನ್ನು ಭೇಟಿಯಾಗುವುದಾದರೂ ಸರಿ." [ಮುಸ್ಲಿಮ್].

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು: "ನಿನ್ನ ಸಹೋದರನ ಮುಖ ನೋಡಿ ಮಂದಹಾಸ ಬೀರುವುದು ನಿನಗೆ ದಾನಧರ್ಮವಾಗಿದೆ." [ತಿರ್ಮಿದಿ]

## ಪ್ರಶ್ನೆ 17. ಅಸೂಯೆ ಎಂದರೇನು?

**ಉತ್ತರ:** ಇತರರಿಗೆ ದೊರಕಿದ ಅನುಗ್ರಹವು ನಿವಾರಣೆಯಾಗಬೇಕೆಂದು ಬಯಸುವುದು ಅಥವಾ ಇತರರಿಗೆ ಅನುಗ್ರಹ ದೊರೆಯುವುದನ್ನು ಅಸಹ್ಯಪಡುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ : **"ಮತ್ತು ಅಸೂಯೆಪಡುವವನ ಕೆಡುಕಿನಿಂದ , ಅವನು ಅಸೂಯೆಪಡುವಾಗ."** [ಸೂರ ಅಲ್-ಫಲಕ್: 5]

ಅನಸ್(ರ) ರಿಂದ ವರದಿ, ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು**: "ನೀವು ಪರಸ್ಪರ ದ್ವೇಷಿಸಬೇಡಿ, ನೀವು ಪರಸ್ಪರ ಅಸೂಯೆಪಡಬೇಡಿ, ನೀವು ಪರಸ್ಪರ ಮುಖ ತಿರುಗಿಸಿ ನಡೆಯಬೇಡಿ. ಅಲ್ಲಾಹನ ದಾಸರಾಗಿ ಸಹೋದರರಂತೆ ಬಾಳಿರಿ."** [ಬುಖಾರಿ ಮತ್ತು ಮುಸ್ಲಿಮ್]

## ಪ್ರಶ್ನೆ 18. ಅಪಹಾಸ್ಯ ಎಂದರೇನು?

**ಉತ್ತರ:** ಅಪಹಾಸ್ಯ ಎಂದರೆ ನಿನ್ನ ಮುಸ್ಲಿಂ ಸಹೋದರನನ್ನು ಗೇಲಿ ಮಾಡುವುದು ಮತ್ತು ತುಚ್ಛವಾಗಿ ಕಾಣುವುದು. ಇದು ಧರ್ಮಸಮ್ಮತವಲ್ಲ.ಇದನ್ನು ವಿರೋಧಿಸುತ್ತಾ ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿يَٰٓأَيُّهَا ٱلَّذِينَ ءَامَنُواْ لَا يَسۡخَرۡ قَوۡمٞ مِّن قَوۡمٍ عَسَىٰٓ أَن يَكُونُواْ خَيۡرٗا مِّنۡهُمۡ وَلَا نِسَآءٞ مِّن نِّسَآءٍ عَسَىٰٓ أَن يَكُنَّ خَيۡرٗا مِّنۡهُنَّۖ وَلَا تَلۡمِزُوٓاْ أَنفُسَكُمۡ وَلَا تَنَابَزُواْ بِٱلۡأَلۡقَٰبِۖ بِئۡسَ ٱلِٱسۡمُ ٱلۡفُسُوقُ بَعۡدَ ٱلۡإِيمَٰنِۚ وَمَن لَّمۡ يَتُبۡ فَأُوْلَٰٓئِكَ هُمُ ٱلظَّٰلِمُونَ﴾ [الحجرات: 11].

**"ಓ ಸತ್ಯವಿಶ್ವಾಸಿಗಳೇ ! ಒಂದು ಜನತೆಯು ಇನ್ನೊಂದು ಜನತೆಯನ್ನು ಅಪಹಾಸ್ಯ ಮಾಡದಿರಲಿ . ಇವರು (ಅಪಹಾಸ್ಯಕ್ಕೊಳಗಾದವರು) ಅವರಿಗಿಂತಲೂ ಉತ್ತಮರಾಗಿರಬಹುದು. ಸ್ತ್ರೀಯರ ಪೈಕಿ ಒಂದು ಗುಂಪು ಇನ್ನೊಂದು ಗುಂಪಿನ ಸ್ತ್ರೀಯರನ್ನು ಅಪಹಾಸ್ಯ ಮಾಡದಿರಲಿ. ಇವರು (ಅಪಹಾಸ್ಯಕ್ಕೊಳಗಾದವರು) ಅವರಿಗಿಂತಲೂ ಉತ್ತಮರಾಗಿರಬಹುದು. ನೀವು ಪರಸ್ಪರ ಚುಚ್ಚಿ ಮಾತನಾಡದಿರಿ. ನೀವು ಅಡ್ಡಹೆಸರುಗಳಿಂದ ಕರೆದು ಪರಸ್ಪರ ಅವಮಾನ ಮಾಡದಿರಿ . ಸತ್ಯವಿಶ್ವಾಸವನ್ನು ಸ್ವೀಕರಿಸಿದ ನಂತರ ಕೆಟ್ಟ ಹೆಸರು (ಕರೆಯುವುದು) ಎಷ್ಟು ನೀಚವಾದುದು! ಯಾರು ಪಶ್ಚಾತ್ತಾಪಪಡುವುದಿಲ್ಲವೋ ಅವರು ಅಕ್ರಮಿಗಳಾಗಿರುವರು."** [ಸೂರ ಅಲ್-ಹುಜುರಾತ್: 11].

## ಪ್ರಶ್ನೆ 19. ವಿನಯ ಎಂದರೇನು?

**ಉತ್ತರ:** ವಿನಯ ಎಂದರೆ ತಾನು ಇತರರಿಗಿಂತ ಮೇಲು ಎಂದು ಭಾವಿಸದಿರುವುದು , ಜನರನ್ನು ತಿರಸ್ಕಾರದಿಂದ ಕಾಣದಿರುವುದು ಮತ್ತು ಸತ್ಯವನ್ನು ತಿರಸ್ಕರಿಸದಿರುವುದು.

- ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: ﴿وَعِبَادُ ٱلرَّحۡمَٰنِ ٱلَّذِينَ يَمۡشُونَ عَلَى ٱلۡأَرۡضِ هَوۡنٗا﴾ [الفرقان: 63]

**"ಪರಮ ದಯಾಮಯನ ದಾಸರು ಭೂಮಿಯಲ್ಲಿ ವಿನಯದೊಂದಿಗೆ ಚಲಿಸುವವರಾಗಿರುವರು."** [ಸೂರತ್ ಅಲ್-ಫುರ್ಖಾನ್: 63] ಅಂದರೆ ವಿನಯವಂತರಾಗಿ ಚಲಿಸುವರು.

- ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು : **"ಅಲ್ಲಾಹನಿಗಾಗಿ ವಿನಯ ತೋರುವವರ ಸ್ಥಾನವನ್ನು ಅಲ್ಲಾಹು ಎತ್ತರಿಸದೇ ಇರಲಾರನು."** [ಮುಸ್ಲಿಮ್].

ಪ್ರವಾದಿ ﷺ ರವರು ಹೇಳಿದರು: **"ನಿಮ್ಮಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಜಂಭ ತೋರದೆ, ಮತ್ತು ನಿಮ್ಮಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ದಬ್ಬಾಳಿಕೆ ಮಾಡದೆ, ನೀವೆಲ್ಲರೂ ವಿನಯವಂತರಾಗಬೇಕೆಂದು ಅಲ್ಲಾಹು ನನಗೆ ದೇವವಾಣಿ ಅವತೀರ್ಣಗೊಳಿಸಿದ್ದಾನೆ."** [ಮುಸ್ಲಿಮ್].

## ಪ್ರಶ್ನೆ 20. ನಿಷೇಧಿತ ಅಹಂಕಾರದ ವಿಧಗಳು ಯಾವುವು?

**ಉತ್ತರ:**

**1. ಸತ್ಯದ ವಿರುದ್ಧ ಅಹಂಕಾರಪಡುವುದು. ಅಂದರೆ ಸತ್ಯವನ್ನು ಸ್ವೀಕರಿಸದೆ ತಿರಸ್ಕರಿಸುವುದು.**

**2. ಜನರ ವಿರುದ್ಧ ಅಹಂಕಾರಪಡುವುದು . ಅಂದರೆ ಅವರನ್ನು ತಿರಸ್ಕಾರ ಮತ್ತು ನಿಕೃಷ್ಟವಾಗಿ ಕಾಣುವುದು.**

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು : **"ನಿಶ್ಚಯವಾಗಿಯೂ ಹೃದಯದಲ್ಲಿ ಒಂದು ಅಣುವಿನ ತೂಕದಷ್ಟು ಅಹಂಕಾರ ಇರುವವನು ಸ್ವರ್ಗವನ್ನು ಪ್ರವೇಶಿಸಲಾರ."ಆಗ ಒಬ್ಬ ವ್ಯಕ್ತಿ ಕೇಳಿದರು: "ಒಬ್ಬ ವ್ಯಕ್ತಿ ತನ್ನ ಬಟ್ಟೆ -ಬರೆ ಸುಂದರವಾಗಿರಲು ಮತ್ತು ತನ್ನ ಪಾದರಕ್ಷೆ ಸುಂದರವಾಗಿರಲು ಬಯಸುತ್ತಾನೆ. ಇದು ಅಹಂಕಾರವೇ?" ಅವರು ಉತ್ತರಿಸಿದರು:"ನಿಶ್ಚಯವಾಗಿಯೂ ಅಲ್ಲಾಹು ಸುಂದರನಾಗಿರುವನು . ಮತ್ತು ಅವನು**

**ಸೌಂದರ್ಯವನ್ನು ಇಷ್ಟಪಡುತ್ತಾನೆ . ಅಹಂಕಾರ ಎಂದರೆ ಸತ್ಯವನ್ನು ತಿರಸ್ಕರಿಸುವುದು ಮತ್ತು ಜನರನ್ನು ತುಚ್ಛವಾಗಿ ಕಾಣುವುದು."** [ಮುಸ್ಲಿಮ್].

- ಸತ್ಯವನ್ನು ತಿರಸ್ಕರಿಸುವುದು ಎಂದರೆ ಸತ್ಯವನ್ನು ಸ್ವೀಕರಿಸದಿರುವುದು.
- ಜನರನ್ನು ತುಚ್ಛವಾಗಿ ಕಾಣುವುದು ಎಂದರೆ ಜನರನ್ನು ಕೀಳಾಗಿ ಕಾಣುವುದು.
- ಸುಂದರ ಬಟ್ಟೆ ಮತ್ತು ಸುಂದರ ಪಾದರಕ್ಷೆಗಳನ್ನು ಧರಿಸುವುದು ಅಹಂಕಾರವಲ್ಲ.

## ಪ್ರಶ್ನೆ 21. ನಿಷೇಧಿತ ವಂಚನೆಯ ಕೆಲವು ವಿಧಗಳು ಯಾವುವು?

**ಉತ್ತರ:**

- ಮಾರಾಟ ಮತ್ತು ಖರೀದಿಯಲ್ಲಿ ವಂಚಿಸುವುದು . ಅಂದರೆ ಸರಕುಗಳ ನ್ಯೂನತೆಯನ್ನು ಮುಚ್ಚಿಡುವುದು.
- ಕಲಿಯುವುದರಲ್ಲಿ ಮತ್ತು ಕಲಿಸುವುದರಲ್ಲಿ ವಂಚಿಸುವುದು . ಉದಾಹರಣೆಗೆ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ವಂಚನೆ ಮಾಡುವುದು.
- ಮಾತಿನಲ್ಲಿ ವಂಚಿಸುವುದು. ಅಂದರೆ ಸುಳ್ಳು ಹೇಳುವುದು ಮತ್ತು ಸುಳ್ಳು ಸಾಕ್ಷಿ ನುಡಿಯುವುದು.
- ಜನರಿಗೆ ಮಾತು ಕೊಟ್ಟರೆ ಅಥವಾ ಒಪ್ಪಂದ ಮಾಡಿದರೆ ಅದನ್ನು ನೆರವೇರಿಸದಿರುವುದು.

ವಂಚಿಸುವುದು ನಿಷೇಧಿಸಲಾಗಿದೆ ಎನ್ನುವುದಕ್ಕೆ ಒಂದು ಪುರಾವೆಯೇನೆಂದರೆ , ಒಮ್ಮೆ ಪ್ರವಾದಿಯವರು(ಸ) ಆಹಾರ ಧಾನ್ಯದ ಒಂದು ರಾಶಿಯ ಬಳಿಯಿಂದ ಹಾದುಹೋಗುತ್ತಿದ್ದಾಗ, ಅದರೊಳಗೆ ಕೈ ತೂರಿಸಿದರು. ಆಗ ಅವರ ಬೆರಳುಗಳು ಒದ್ದೆಯಾದವು . ಅವರು ಕೇಳಿದರು: "ಓ ಆಹಾರ ಧಾನ್ಯ ಮಾರುವವನೇ , ಇದೇನು?" ಆತ ಹೇಳಿದ: **"ಓ ಅಲ್ಲಾಹನ ಸಂದೇಶವಾಹಕರೇ, ಮಳೆ ಬಂದು ಒದ್ದೆಯಾಗಿದೆ." ಅವರು ಹೇಳಿದರು:"ಜನರು ಕಾಣುವಂತೆ ಅದನ್ನು ನೀನು ರಾಶಿಯ ಮೇಲ್ಭಾಗದಲ್ಲಿ ಏಕೆ ಹಾಕಲಿಲ್ಲ? ವಂಚನೆ ಮಾಡುವವನು ನಮ್ಮಲ್ಲಿ ಸೇರಿದವನಲ್ಲ."** [ಮುಸ್ಲಿಮ್].

ಆಹಾರ ಧಾನ್ಯದ ರಾಶಿ ಎಂದರೆ ಆಹಾರ ಧಾನ್ಯವನ್ನು ಮಾರಾಟಕ್ಕೆ ಕುಪ್ಪೆ ಮಾಡಿಟ್ಟಿರುವುದು.

## ಪ್ರಶ್ನೆ 22. ಪರದೂಷಣೆ ಎಂದರೇನು?

**ಉತ್ತರ:** ಪರದೂಷಣೆ ಎಂದರೆ ನಿನ್ನ ಸಹೋದರನ ಅನುಪಸ್ಥಿತಿಯಲ್ಲಿ ಅವನಿಗೆ ಇಷ್ಟವಿಲ್ಲದ್ದನ್ನು ಹೇಳುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَلَا يَغۡتَب بَّعۡضُكُم بَعۡضًاۚ أَيُحِبُّ أَحَدُكُمۡ أَن يَأۡكُلَ لَحۡمَ أَخِيهِ مَيۡتٗا فَكَرِهۡتُمُوهُۚ وَٱتَّقُواْ ٱللَّهَۚ إِنَّ ٱللَّهَ تَوَّابٞ رَّحِيمٞ﴾ [الحجرات: 12]

**"ನಿಮ್ಮಲ್ಲಿ ಕೆಲವರು ಇತರ ಕೆಲವರ ಬಗ್ಗೆ ಅವರ ಅನುಪಸ್ಥಿತಿಯಲ್ಲಿ ಕೆಟ್ಟದಾಗಿ ಮಾತನಾಡಬಾರದು. ತನ್ನ ಸಹೋದರನು ಮೃತಪಟ್ಟು ಮಲಗಿರುವಾಗ ಅವನ ಮಾಂಸವನ್ನು ತಿನ್ನಲು ನಿಮ್ಮಲ್ಲಿ ಯಾರಾದರೂ ಇಷ್ಟಪಡುವರೇ ? ನೀವು ಅದನ್ನು (ತಿನ್ನುವುದನ್ನು) ಅಸಹ್ಯಪಡುತ್ತೀರಿ! ನೀವು ಅಲ್ಲಾಹನನ್ನು ಭಯಪಡಿರಿ. ಖಂಡಿತವಾಗಿಯೂ ಅಲ್ಲಾಹು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಸೂರ ಅಲ್-ಹುಜುರಾತ್: 12].

## ಪ್ರಶ್ನೆ 23. ಚಾಡಿ ಮಾತು ಎಂದರೇನು?

**ಉತ್ತರ:** ಚಾಡಿ ಎಂದರೆ ಜನರ ಮಧ್ಯೆ ಜಗಳ ಉಂಟುಮಾಡಲು ಒಬ್ಬರ ಮಾತನ್ನು ಇನ್ನೊಬ್ಬರಿಗೆ ತಲುಪಿಸುವುದು.

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು: "**ಚಾಡಿಕೋರ ಸ್ವರ್ಗವನ್ನು ಪ್ರವೇಶಿಸಲಾರ.**" [ಮುಸ್ಲಿಮ್].

## ಪ್ರಶ್ನೆ 24. ಆಲಸ್ಯ ಎಂದರೇನು?

ಉತ್ತರ: ಆಲಸ್ಯ ಎಂದರೆ ಒಳಿತು ಮಾಡಲು ಮತ್ತು ತನ್ನ ಕಡ್ಡಾಯ ಕರ್ತವ್ಯಗಳನ್ನು ನಿರ್ವಹಿಸಲು ಉದಾಸೀನ ತೋರುವುದು.

ಉದಾಹರಣೆಗೆ, ಕಡ್ಡಾಯ ಕರ್ಮಗಳನ್ನು ಮಾಡಲು ಆಲಸ್ಯ ತೋರುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ :**"ಖಂಡಿತವಾಗಿಯೂ ಕಪಟವಿಶ್ವಾಸಿಗಳು ಅಲ್ಲಾಹನನ್ನು ವಂಚಿಸುತ್ತಿರುವರು. ಆದರೆ ವಾಸ್ತವಿಕವಾಗಿ ಅಲ್ಲಾಹು ಅವರನ್ನು ವಂಚಿಸುತ್ತಿರುವನು. ಅವರು**

ನಮಾಝ್‌ಗಾಗಿ ನಿಂತರೆ ಉದಾಸೀನರಾಗಿ ಮತ್ತು ಜನರಿಗೆ ತೋರಿಸುವ ಸಲುವಾಗಿ ನಿಲ್ಲುವರು. ಅಲ್ಪವೇ ವಿನಾ ಅವರು ಅಲ್ಲಾಹನನ್ನು ಸ್ಮರಿಸಲಾರರು." [ಸೂರ ಅನ್ನಿಸಾ:: 142].

ಆದ್ದರಿಂದ ಸತ್ಯವಿಶ್ವಾಸಿ ಆಲಸ್ಯ , ಸೋಮಾರಿತನ ಮತ್ತು ಜಡವನ್ನು ತೊರೆದು , ಜೀವನದಲ್ಲಿ ಅಲ್ಲಾಹನನ್ನು ಸಂಪ್ರೀತಗೊಳಿಸುವ ಕೆಲಸಗಳನ್ನು ನಿರ್ವಹಿಸಲು ಅತಿಯಾಗಿ ಪರಿಶ್ರಮಿಸಬೇಕು.

## ಪ್ರಶ್ನೆ 25: ಕೋಪದ ವಿಧಗಳನ್ನು ತಿಳಿಸಿ.

**ಉತ್ತರ:**

1. **ಪ್ರಶಂಸಾರ್ಹ ಕೋಪ:** ಅಂದರೆ ಸತ್ಯನಿಷೇಧಿಗಳು, ಕಪಟಿಗಳು ಅಥವಾ ಇತರರು ಅಲ್ಲಾಹನ ಪಾವಿತ್ರ್ಯಕ್ಕೆ ಧಕ್ಕೆ ಮಾಡುವಾಗ ಅಲ್ಲಾಹನಿಗಾಗಿ ಕೋಪಿಸುವುದು.

2. **ಖಂಡನಾರ್ಹ ಕೋಪ:** ಒಬ್ಬ ವ್ಯಕ್ತಿಯಿಂದ ಹೇಳಬಾರದ ಮಾತನ್ನು ಮತ್ತು ಮಾಡಬಾರದ ಕೆಲಸವನ್ನು ಮಾಡಿಸುವ ಕೋಪ.

**ಖಂಡನಾರ್ಹ ಕೋಪಕ್ಕೆ ಮದ್ದು:**

- ವುದೂ.
- ನಿಂತಿದ್ದರೆ ಕುಳಿತುಕೊಳ್ಳುವುದು; ಕುಳಿತಿದ್ದರೆ ಮಲಗುವುದು.
- ಕೋಪ ಬರುವಾಗ, "ಕೋಪ ಮಾಡಿಕೊಳ್ಳಬಾರದು" ಎಂಬ ಪ್ರವಾದಿಯವರ (ಸ) ಮಾತನ್ನು ಪಾಲಿಸುವುದು.
- ಕೋಪ ಬರುವಾಗ ಮನಸ್ಸನ್ನು ನಿಯಂತ್ರಿಸಿಕೊಳ್ಳುವುದು.
- ಶಾಪಗ್ರಸ್ತ ಸೈತಾನನಿಂದ ಅಲ್ಲಾಹನಲ್ಲಿ ಆಶ್ರಯಬೇಡುವುದು."
- ಮೌನ ಪಾಲಿಸುವುದು.

## ಪ್ರಶ್ನೆ 26. ಗೂಢಚರ್ಯೆ ಎಂದರೇನು?

**ಉತ್ತರ:** ಗೂಢಚರ್ಯೆ ಎಂದರೆ ಜನರ ರಹಸ್ಯಗಳನ್ನು ಮತ್ತು ಅವರು ಮುಚ್ಚಿಡುವ ವಿಷಯಗಳನ್ನು ಹುಡುಕುವುದು ಮತ್ತು ಬಹಿರಂಗಪಡಿಸುವುದು.

**ಗೂಢಚರ್ಯೆಯ ನಿಷೇಧಿತ ರೂಪಗಳು:**

- ಜನರ ಮನೆಗಳಲ್ಲಿ ಅವರ ಖಾಸಗಿ ವಿಷಯಗಳನ್ನು ತಿಳಿಯಲು ಪ್ರಯತ್ನಿಸುವುದು.
- ಜನರ ಅನುಮತಿಯಿಲ್ಲದೆ ಅವರ ಮಾತಿಗೆ ಕಿವಿಗೊಡುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ :[الحجرات: 12] ( وَلَا تَجَسَّسُوا ) **"ನೀವು ಗೂಢಚರ್ಯೆ ಮಾಡಬೇಡಿ..."**[ಸೂರ ಅಲ್-ಹುಜುರಾತ್: 12].

**ಪ್ರಶ್ನೆ 27. ದುರ್ವ್ಯಯ ಎಂದರೇನು? ಜಿಪುಣತನ ಎಂದರೇನು? ಉದಾರತೆ ಎಂದರೇನು?**

**ಉತ್ತರ:** ದುರ್ವ್ಯಯ ಎಂದರೆ ಲೆಕ್ಕಕ್ಕಿಂತ ಹೆಚ್ಚು ಖರ್ಚು ಮಾಡುವುದು.

ಜಿಪುಣತನ ಇದಕ್ಕೆ ವಿರುದ್ಧವಾಗಿದೆ. ಅದು ಲೆಕ್ಕಕ್ಕಿಂತ ಕಡಿಮೆ ಖರ್ಚು ಮಾಡುವುದು.

ಸರಿಯಾಗಿ ರೀತಿ ಇವೆರಡರ ಮಧ್ಯದಲ್ಲಿದ್ದು, ಮುಸಲ್ಮಾನನು ಉದಾರಿಯಾಗಿರಬೇಕು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ[الفرقان: 67] ﴿وَٱلَّذِينَ إِذَآ أَنفَقُواْ لَمۡ يُسۡرِفُواْ وَلَمۡ يَقۡتُرُواْ وَكَانَ بَيۡنَ ذَٰلِكَ قَوَامٗا﴾ **"ಅವರು ಖರ್ಚು ಮಾಡುವಾಗ ದುಂದುಗಾರಿಕೆ ಮಾಡದೆ ಮತ್ತು ಜಿಪುಣತನ ತೋರಿಸದೆ ಅವೆರಡರ ನಡುವಿನ ಮಧ್ಯಮ ಮಾರ್ಗವನ್ನು ಸ್ವೀಕರಿಸುವರು."** [ಸೂರ ಅಲ್-ಫುರ್ಕಾನ್ 67].

**ಪ್ರಶ್ನೆ 28. ಹೇಡಿತನ ಎಂದರೇನು? ಶೌರ್ಯ ಎಂದರೇನು?**

**ಉತ್ತರ: ಹೇಡಿತನ:** ಭಯಪಡಬಾರದ್ದನ್ನು ಭಯಪಡುವುದು.

ಉದಾಹರಣೆಗೆ, ಸತ್ಯವನ್ನು ಹೇಳಲು ಮತ್ತು ಕೆಡುಕನ್ನು ವಿರೋಧಿಸಲು ಭಯಪಡುವುದು.

**ಧೈರ್ಯ:** ಅಂದರೆ ಸತ್ಯಕ್ಕಾಗಿ ಮುಂದೆ ಬರುವುದು . ಉದಾಹರಣೆಗೆ ಇಸ್ಲಾಂ ಮತ್ತು ಮುಸ್ಲಿಮರನ್ನು ರಕ್ಷಿಸಲು ಯುದ್ಧಭೂಮಿಯಲ್ಲಿ ಮುಂದೆ ಬರುವುದು.

ಪ್ರವಾದಿ ﷺ ರವರು ತಮ್ಮ ಪ್ರಾರ್ಥನೆಯಲ್ಲಿ ಹೇಳುತ್ತಿದ್ದರು: **"ಓ ಅಲ್ಲಾಹ್ ನಾನು ನಿನ್ನೊಂದಿಗೆ ಹೇಡಿತನದಿಂದ ಅಭಯ ಯಾಚಿಸುತ್ತೇನೆ."**

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು : **"ಶಕ್ತಿಶಾಲಿ ಸತ್ಯವಿಶ್ವಾಸಿಯು ದುರ್ಬಲ ಸತ್ಯವಿಶ್ವಾಸಿಗಿಂತ ಉತ್ತಮ ಮತ್ತು ಅಲ್ಲಾಹನಿಗೆ ಹೆಚ್ಚು ಪ್ರಿಯನು. ಪ್ರತಿಯೊಬ್ಬರಲ್ಲೂ ಒಳಿತಿದೆ."** [ಮುಸ್ಲಿಮ್].

## ಪ್ರಶ್ನೆ 29. ಕೆಲವು ನಿಷಿದ್ಧ ಮಾತುಗಳು ಯಾವುವು?

**ಉತ್ತರ:**

- ಶಪಿಸುವುದು ಮತ್ತು ತೆಗಳುವುದು.
- ಪ್ರಾಣಿಯ ಹೆಸರು ಮುಂತಾದವುಗಳಿಂದ ಕರೆಯುವುದು.
- ಅಶ್ಲೀಲ ಮತ್ತು ಅವಾಚ್ಯವಾಗಿ ಮಾತನಾಡುವುದು.

ಪ್ರವಾದಿ ﷺ ರವರು ಇವೆಲ್ಲವನ್ನೂ ನಿಷೇಧಿಸಿ , ಹೀಗೆ ಹೇಳಿದರು:**"ಸತ್ಯವಿಶ್ವಾಸಿಯು ದೂಷಿಸಲಾರ, ಶಪಿಸಲಾರ, ಅಶ್ಲೀಲ ಅಥವಾ ಅವಾಚ್ಯ ಮಾತುಗಳನ್ನಾಡಲಾರ."** [ತಿರ್ಮಿದಿ ಮತ್ತು ಇಬ್ನ್ ಹಿಬ್ಬಾನ್].

## ಪ್ರಶ್ನೆ 30. ಮುಸಲ್ಮಾನನು ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಗುವ ಅಂಶಗಳು ಯಾವುವು?

**ಉತ್ತರ:** 1- ಅಲ್ಲಾಹು ಉತ್ತಮ ಗುಣವನ್ನು ದಯಪಾಲಿಸಿ ಸಹಾಯ ಮಾಡಲು ಪ್ರಾರ್ಥಿಸುವುದು.

2- ಅಲ್ಲಾಹನ ಬಗ್ಗೆ ಜಾಗರೂಕನಾಗಿರುವುದು , ಅಲ್ಲಾಹು ನೋಡುತ್ತಿದ್ದಾನೆ ಮತ್ತು ಕೇಳುತ್ತಿದ್ದಾನೆ ಎಂಬ ಪ್ರಜ್ಞೆಯನ್ನು ಹೊಂದಿರುವುದು.

3- ಉತ್ತಮ ಗುಣದ ಪ್ರತಿಫಲವನ್ನು ಜ್ಞಾಪಿಸುವುದು ಮತ್ತು ಅದು ಸ್ವರ್ಗ ಪ್ರವೇಶಕ್ಕೆ ಒಂದು ಕಾರಣವೆಂದು ತಿಳಿಯುವುದು.

4- ಕೆಟ್ಟ ಗುಣದ ಪರಿಣಾಮವನ್ನು ಜ್ಞಾಪಿಸುವುದು ಮತ್ತು ಅದು ನರಕ ಪ್ರವೇಶಕ್ಕೆ ಒಂದು ಕಾರಣವೆಂದು ತಿಳಿಯುವುದು.

5- ಉತ್ತಮ ಗುಣದಿಂದ ಅಲ್ಲಾಹನ ಪ್ರೀತಿ ಮತ್ತು ಜನರ ಪ್ರೀತಿ ದೊರಕುತ್ತದೆ . ಕೆಟ್ಟ ಗುಣವು ಅಲ್ಲಾಹನ ಕೋಪ ಮತ್ತು ಜನರ ಕೋಪಕ್ಕೆ ಕಾರಣವಾಗುತ್ತದೆ ಎಂದು ತಿಳಿಯುವುದು.

6- ಪ್ರವಾದಿ ಚರಿತ್ರೆಯನ್ನು ಓದುವುದು, ಮತ್ತು ಅವರನ್ನು ಅನುಸರಿಸುವುದು.

7- ಒಳ್ಳೆಯವರ ಸಹವಾಸ ಮಾಡುವುದು ಮತ್ತು ಕೆಟ್ಟವರ ಸಹವಾಸವನ್ನು ತ್ಯಜಿಸುವುದು.

*******

## ಪ್ರಾರ್ಥನೆ ಮತ್ತು ದಿಕ್‌ರ್‌ಗಳ ವಿಭಾಗ

**ಪ್ರಶ್ನೆ 1. ದಿಕ್‌ರ್‌ನ ಶ್ರೇಷ್ಠತೆಯನ್ನು ತಿಳಿಸಿ?**

**ಉತ್ತರ:** ಪ್ರವಾದಿ ﷺ ರವರು ಹೇಳಿದರು :**"ಅಲ್ಲಾಹನನ್ನು ಸ್ಮರಿಸುವವನ ಮತ್ತು ಸ್ಮರಿಸದವನ ಉದಾಹರಣೆಯು ಜೀವಂತವಿರುವವನು ಮತ್ತು ಸತ್ತವನಂತಿದೆ."** [ಬುಖಾರಿ].

- ಏಕೆಂದರೆ ಮನುಷ್ಯನ ಜೀವನದ ಮೌಲ್ಯವು ಅವನು ಅಲ್ಲಾಹನನ್ನು ಎಷ್ಟು ಸ್ಮರಿಸುತ್ತಾನೆ ಎಂಬುದನ್ನು ಅವಲಂಬಿಸಿದೆ.

**ಪ್ರಶ್ನೆ 2. ದಿಕ್‌ರ್‌ನ ಕೆಲವು ಪ್ರಯೋಜನಗಳನ್ನು ತಿಳಿಸಿ?**

ಉತ್ತರ: 1- ಅದು ಅಲ್ಲಾಹನಿಗೆ ಇಷ್ಟವಾಗಿದೆ.

2- ಅದು ಶೈತಾನನನ್ನು ಓಡಿಸುತ್ತದೆ.

3- ಅದು ಮುಸ್ಲಿಮನನ್ನು ಕೆಡುಕುಗಳಿಂದ ರಕ್ಷಿಸುತ್ತದೆ.

4- ಅದರಿಂದ ಪ್ರತಿಫಲ ಮತ್ತು ಪುಣ್ಯ ದೊರಕುತ್ತದೆ.

**ಪ್ರಶ್ನೆ 3. ಅತ್ಯುತ್ತಮ ದಿಕ್ರ್ ಯಾವುದು?**

**ಉತ್ತರ: ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ).** [ತಿರ್ಮಿದಿ ಮತ್ತು ಇಬ್ನ್ ಮಾಜ].

**ಪ್ರಶ್ನೆ 4. ನಿದ್ದೆಯಿಂದ ಎದ್ದೇಳುವಾಗ ಏನು ಹೇಳಬೇಕು?**

**ಉತ್ತರ: (ಅಲ್-ಹಮ್ದುಲಿಲ್ಲಾಹಿಲ್ಲದೀ ಅಹ್ಯಾನಾ ಬಅ್‌ದ ಮಾ ಅಮಾತನಾ ವಇಲೈಹಿ ನ್ನುಶೂರ್)** **"ನಮ್ಮ ಮರಣದ ನಂತರ ನಮ್ಮನ್ನು ಬದುಕಿಸಿದ ಅಲ್ಲಾಹನಿಗೆ ಸರ್ವಸ್ತುತಿ ಮತ್ತು ಪುನರುತ್ಥಾನವು ಅವನ ಕಡೆಗೇ ಆಗಿದೆ."** (ಮುತ್ತಫಕುನ್ ಅಲೈಹಿ).

| |
|---|
| **ಪ್ರಶ್ನೆ 5. ಉಡುಪು ಧರಿಸುವಾಗ ಏನು ಹೇಳಬೇಕು?** |

ಉತ್ತರ: **(ಅಲ್-ಹಮ್ದುಲಿಲ್ಲಾಹಿಲ್ಲದೀ ಕಸಾನೀ ಹಾದಸ್ಸೌಬ ವರಝುಕನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಕುವ್ವ)** **"ಸ್ವಶಕ್ತಿಯಾಗಲಿ, ಸ್ವಸಾಮರ್ಥ್ಯವಾಗಲಿ ಇಲ್ಲದ ನನಗೆ ಈ ಉಡುಪನ್ನು ಉಡಿಸಿದ ಮತ್ತು ಇದನ್ನು ನನಗೆ ಒದಗಿಸಿದ ಅಲ್ಲಾಹನಿಗೆ ಸರ್ವಸ್ತುತಿ."** [ಅಬೂದಾವೂದ್, ತಿರ್ಮಿದಿ ಹಾಗೂ ಇತರರು ಈ ಹದೀಸನ್ನು ವರದಿ ಮಾಡಿದ್ದಾರೆ].

| |
|---|
| **ಪ್ರಶ್ನೆ 6. ಉಡುಪು ಕಳಚುವಾಗ ಏನು ಹೇಳಬೇಕು?** |

**ಉತ್ತರ: (ಬಿಸ್ಮಿಲ್ಲಾ) ಅಲ್ಲಾಹನ ನಾಮದಿಂದ.**[ತಿರ್ಮಿದಿ]

| |
|---|
| **ಪ್ರಶ್ನೆ 7. ಹೊಸ ಉಡುಪು ಧರಿಸುವಾಗ ಏನು ಪ್ರಾರ್ಥಿಸಬೇಕು?** |

**ಉತ್ತರ: (ಅಲ್ಲಾಹುಮ್ಮ ಲಕಲ್ ಹಮ್ದು ಅನ್ತ ಕಸೌತನೀಹಿ, ಅಸ್‌ಅಲುಕ ಖೈರಹು ವಖೈರ ಮಾ ಸುನಿಅ ಲಹು, ವಅಊದು ಬಿಕ ಮಿನ್ ಶರ್‍ರಿಹೀ ವಶರ್‍ರಿಮಾ ಸುನಿಅ ಲಹು)** **"ಓ ಅಲ್ಲಾಹ್! ನಿನಗೆ ಸ್ತುತಿ, ಈ ಉಡುಪನ್ನು ನೀನು ನನಗೆ ಉಡಿಸಿರುವೆ , ಇದರ ಒಳಿತನ್ನು ಮತ್ತು ಇದು ನಿರ್ಮಿಸಲ್ಪಟ್ಟುದರ ಒಳಿತನ್ನು ನಾನು ನಿನ್ನೊಂದಿಗೆ ಬೇಡುತ್ತೇನೆ, ಮತ್ತು ಇದರ ಕೆಡುಕಿನಿಂದ ಮತ್ತು ಇದು ನಿರ್ಮಿಸಲ್ಪಟ್ಟುದರ ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತೇನೆ."** [ಅಬೂದಾವೂದ್ ಮತ್ತು ತಿರ್ಮಿದಿ].

| |
|---|
| **ಪ್ರಶ್ನೆ 8. ಇತರರು ಹೊಸ ಉಡುಪು ಧರಿಸಿದ್ದನ್ನು ಕಾಣುವಾಗ ಏನು ಪ್ರಾರ್ಥಿಸಬೇಕು?** |

ಉತ್ತರ: ಇತರರು ಹೊಸ ಉಡುಪು ಧರಿಸಿರುವುದನ್ನು ಕಂಡಾಗ ಅವರಿಗೆ ಈ ರೀತಿ ಪ್ರಾರ್ಥಿಸಬೇಕು:**(ತುಬ್ಲೀ ವಯುಖ್ಲಿಫುಲ್ಲಾಹು ತಆಲಾ )** **"ಧರಿಸು ಮತ್ತು ಅಲ್ಲಾಹು ನಿನಗೆ ಇದರ ನಂತರ (ಬೇರೊಂದನ್ನು) ನೀಡುವನು."** [ಅಬೂದಾವೂದ್].

| |
|---|
| **ಪ್ರಶ್ನೆ 9. ಶೌಚಾಲಯವನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು?** |

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಖುಬುಸಿ ವಲ್ ಖಬಾಇಸ್)** **"ಓ ಅಲ್ಲಾಹ್! ನಾನು ಗಂಡು ಶೈತಾನರಿಂದ ಮತ್ತು ಹೆಣ್ಣು ಶೈತಾನರಿಂದ ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ."** (ಮುತ್ತಫಕುನ್ ಅಲೈಹಿ).

**ಪ್ರಶ್ನೆ 10. ಶೌಚಾಲಯದಿಂದ ಹೊರಬರುವಾಗ ಏನು ಪ್ರಾರ್ಥಿಸಬೇಕು?**

**(ಗುಫ್ರಾನಕ್)** **"(ಓ ಅಲ್ಲಾಹ್) ನಿನ್ನೊಂದಿಗೆ ಕ್ಷಮೆಯನ್ನು ಬೇಡುತ್ತಿದ್ದೇನೆ"** [ಅಬೂದಾವೂದ್ ಮತ್ತು ತಿರ್ಮಿದಿ].

**ಪ್ರಶ್ನೆ 11. ವುದೂ ಮಾಡುವ ಮೊದಲು ಏನು ಹೇಳಬೇಕು?**

**ಉತ್ತರ: (ಬಿಸ್ಮಿಲ್ಲಾ)** **ಅಲ್ಲಾಹನ ನಾಮದಿಂದ.** [ಅಬೂದಾವೂದ್ ಮತ್ತಿತರರು ಈ ಹದೀಸನ್ನು ವರದಿ ಮಾಡಿದ್ದಾರೆ].

**ಪ್ರಶ್ನೆ 12. ವುದೂ ಪೂರ್ಣಗೊಳಿಸಿದ ನಂತರದ ಏನು ಪ್ರಾರ್ಥಿಸಬೇಕು?**

**ಉತ್ತರ: (ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹು, ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹು)** **"ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲವೆಂದೂ ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆಂದೂ ನಾನು ಸಾಕ್ಷ್ಯ ವಹಿಸುತ್ತೇನೆ. ಮುಹಮ್ಮದ್ ಅವನ ದಾಸರೂ ಸಂದೇಶವಾಹಕರೂ ಆಗಿದ್ದಾರೆಂದೂ ನಾನು ಸಾಕ್ಷ್ಯ ವಹಿಸುತ್ತೇನೆ."** [ಮುಸ್ಲಿಮ್].

**ಪ್ರಶ್ನೆ 13. ಮನೆಯಿಂದ ಹೊರಡುವಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಬಿಸ್ಮಿಲ್ಲಾಹಿ ತವಕ್ಕಲ್ತು ಅಲಲ್ಲಾಹ್, ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್)** **"ಅಲ್ಲಾಹನ ನಾಮದೊಂದಿಗೆ, ನಾನು ಅಲ್ಲಾಹನ ಮೇಲೆ ಭರವಸೆಯನ್ನಿಟ್ಟಿರುವೆನು , ಅಲ್ಲಾಹನ ಹೊರತು ಶಕ್ತಿಯಾಗಲಿ, ಸಾಮರ್ಥ್ಯವಾಗಲಿ ಇಲ್ಲ."** [ಅಬೂದಾವೂದ್ ಮತ್ತು ತಿರ್ಮಿದಿ].

**ಪ್ರಶ್ನೆ 14. ಮನೆಯನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಬಿಸ್ಮಿಲ್ಲಾಹಿ ವಲಜ್‌ನಾ ವಬಿಸ್ಮಿಲ್ಲಾಹಿ ಖರಜ್‌ನಾ ವಅಲಲ್ಲಾಹಿ ರಬ್ಬಿನಾ ತವಕ್ಕಲ್‌ನಾ )** **"ಅಲ್ಲಾಹನ ನಾಮದೊಂದಿಗೆ ನಾವು (ಈ ಮನೆಯನ್ನು) ಪ್ರವೇಶಿಸಿದ್ದೇವೆ ಮತ್ತು ಅಲ್ಲಾಹನ ನಾಮದೊಂದಿಗೆ ನಾವು (ಇದರಿಂದ) ಹೊರಟಿದ್ದೇವೆ. ಮತ್ತು ನಮ್ಮ ರಬ್ಬ್ ಆದ ಅಲ್ಲಾಹನ ಮೇಲೆ ನಾವು ಭರವಸೆಯನ್ನಿಟ್ಟಿದ್ದೇವೆ."** ನಂತರ ಮನೆಯವರಿಗೆ ಸಲಾಂ ಹೇಳಬೇಕು. [ಅಬೂದಾವೂದ್].

**ಪ್ರಶ್ನೆ 15. ಮಸೀದಿಯನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಅಲ್ಲಾಹುಮ್ಮ ಫ್ತಹ್ ಲೀ ಅಬ್ವಾಬ ರಹ್ಮತಿಕ )** **"ಓ ಅಲ್ಲಾಹ್! ನಿನ್ನ ಅನುಗ್ರಹದ ಬಾಗಿಲುಗಳನ್ನು ನನಗೆ ತೆರೆದುಕೊಡು."** [ಮುಸ್ಲಿಂ]

**ಪ್ರಶ್ನೆ 16. ಮಸೀದಿಯಿಂದ ಹೊರಡುವಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನ್ ಫದ್‌ಲಿಕ )** **"ಓ ಅಲ್ಲಾಹ್! ನಾನು ನಿನ್ನ ಔದಾರ್ಯದೊಂದಿಗೆ ನಿನ್ನಲ್ಲಿ ಬೇಡುತ್ತಿದ್ದೇನೆ."** [ಮುಸ್ಲಿಂ]

**ಪ್ರಶ್ನೆ 17. ಅಝಾನ್ ಕೇಳುವಾಗ ಏನು ಹೇಳಬೇಕು?**

**ಉತ್ತರ:** ಮುಅದ್ದಿನ್ ಹೇಳುವಂತೆಯೇ ಹೇಳಬೇಕು . ಆದರೆ ಮುಅದ್ದಿನ್ **"ಹಯ್ಯ ಅಲಸ್ಸಲಾಹ್ "** **ಮತ್ತು "ಹಯ್ಯ ಅಲಲ್ ಫಲಾಹ್"** ಎಂದು ಹೇಳುವಾಗ **"ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್"** **(ಅಲ್ಲಾಹನಲ್ಲೇ ಹೊರತು ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ )** ಎಂದು ಹೇಳಬೇಕು. (ಮುತ್ತಫಕುನ್ ಅಲೈಹಿ).

**ಪ್ರಶ್ನೆ 18. ಅಝಾನ್ ನಂತರ ಏನು ಹೇಳಬೇಕು?**

**ಉತ್ತರ: ಪ್ರವಾದಿ(ಸ) ರವರ ಮೇಲೆ ಸ್ವಲಾತ್ (ದರೂದ್) ಪಠಿಸಬೇಕು.**[ಮುಸ್ಲಿಮ್].

ನಂತರ ಹೀಗೆ ಹೇಳಬೇಕು : **(ಅಲ್ಲಾಹುಮ್ಮ ರಬ್ಬ ಹಾದಿಹಿ ದ್ದಅ್‌ವತಿ ತ್ತಾಮ್ಮ , ವಸ್ಸಲಾತಿಲ್ ಕಾಇಮ, ಆತಿ ಮುಹಮ್ಮದನಿಲ್ ವಸೀಲತ ವಲ್ ಫದೀಲತ , ವಬ್‌ಅಸ್‌ಹು ಮಕಾಮನ್ ಮಹ್ಮೂದನಿಲ್ಲದೀ ವಅದ್‌ತಹು )** **"ಓ ಅಲ್ಲಾಹ್! ಈ ಪರಿಪೂರ್ಣವಾದ ಕರೆಯ ಮತ್ತು ಸಂಸ್ಥಾಪಿಸಲ್ಪಡುವ ನಮಾಝ್‌ನ ಒಡೆಯನೇ! ನೀನು ಮುಹಮ್ಮದ್(ಸ)ರಿಗೆ ವಸೀಲ ಮತ್ತು**

**ಫದೀಲಗಳನ್ನು ನೀಡು. ಮತ್ತು ನೀನು ನೀಡಿದ ವಾಗ್ದಾನದಂತೆ ಅವರನ್ನು ಮಕಾಮ್ ಮಹ್ಮೂದ್‌ಗೆ ಕಳುಹಿಸು."** [ಬುಖಾರಿ].

ಅದಾನ್ ಮತ್ತು ಇಕಾಮತ್‌ಗಳ ಮಧ್ಯೆ ಸ್ವಂತಕ್ಕಾಗಿ ಪ್ರಾರ್ಥಿಸಬೇಕು. ಏಕೆಂದರೆ ಆ ಸಮಯದ ಪ್ರಾರ್ಥನೆ ತಿರಸ್ಕೃತವಾಗುವುದಿಲ್ಲ.

## ಪ್ರಶ್ನೆ 19. ಬೆಳಿಗ್ಗೆ ಮತ್ತು ಸಂಜೆ ಯಾವ ದಿಕ್ರ್‌ಗಳನ್ನು ಹೇಳಬೇಕು?

**ಉತ್ತರ:** 1- ಆಯತುಲ್-ಕುರ್ಸಿ ಪಠಿಸಬೇಕು.

﴿ٱللَّهُ لَآ إِلَٰهَ إِلَّا هُوَ ٱلۡحَيُّ ٱلۡقَيُّومُۚ لَا تَأۡخُذُهُۥ سِنَةٞ وَلَا نَوۡمٞۚ لَّهُۥ مَا فِي ٱلسَّمَٰوَٰتِ وَمَا فِي ٱلۡأَرۡضِۗ مَن ذَا ٱلَّذِي يَشۡفَعُ عِندَهُۥٓ إِلَّا بِإِذۡنِهِۦۚ يَعۡلَمُ مَا بَيۡنَ أَيۡدِيهِمۡ وَمَا خَلۡفَهُمۡۖ وَلَا يُحِيطُونَ بِشَيۡءٖ مِّنۡ عِلۡمِهِۦٓ إِلَّا بِمَا شَآءَۚ وَسِعَ كُرۡسِيُّهُ ٱلسَّمَٰوَٰتِ وَٱلۡأَرۡضَۖ وَلَا يَـُٔودُهُۥ حِفۡظُهُمَاۚ وَهُوَ ٱلۡعَلِيُّ ٱلۡعَظِيمُ﴾ [البقرة: 255].

**ಅಲ್ಲಾಹು ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಕಯ್ಯೂಮ್, ಲಾ ತಅ್‌ಖುದುಹೂ ಸಿನತುನ್ ವಲಾ ನೌಮ್, ಲಹೂ ಮಾ ಫಿ ಸ್ಸಮಾವಾತಿ ವಮಾ ಫಿಲ್ ಅರ್ದ್, ಮನ್ ದಲ್ಲದೀ ಯಶ್ಫಉ ಇನ್ದಹೂ ಇಲ್ಲಾ ಬಿಇದ್ನಿಲಹ್, ಯಅ್‌ಲಮು ಮಾ ಬೈನ ಐದೀಹಿಮ್ ವಮಾ ಖಲ್ಫಹುಮ್ ವಲಾ ಯುಹೀತೂನ ಬಿಶೈಇನ್ ಮಿನ್ ಇಲ್ಮಿಹೀ ಇಲ್ಲಾ ಬಿಮಾ ಶಾಅ್, ವಸಿಅ ಕುರ್ಸಿಯ್ಯುಹು ಸ್ಸಮಾವಾತಿ ವಲ್ ಅರ್ದ ವಲಾ ಯಊದುಹೂ ಹಿಫ್‌ಝುಹುಮಾ , ವಹುವಲ್ ಅಲಿಯ್ಯುಲ್ ಅಝೀಮ್"** "ಅಲ್ಲಾಹು! ಅವನ ಹೊರತು ಅನ್ಯ ಆರಾಧ್ಯರಿಲ್ಲ . ಅವನು ಎಂದೆಂದಿಗೂ ಜೀವಿಸಿರುವವನೂ ಎಲ್ಲವನ್ನೂ ನಿಯಂತ್ರಿಸುವವನೂ ಆಗಿರುವನು. ತೂಕಡಿಕೆಯಾಗಲಿ, ನಿದ್ರೆಯಾಗಲಿ ಅವನನ್ನು ಬಾಧಿಸದು . ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನದ್ದಾಗಿವೆ. ಅವನ ಅನುಮತಿಯ ವಿನಾ ಅವನ ಬಳಿ ಶಿಫಾರಸು ಮಾಡುವವನು ಯಾರಿರುವನು ? ಅವರ ಮುಂದಿರುವುದನ್ನೂ, ಅವರ ಹಿಂದಿರುವುದನ್ನೂ ಅವನು ಅರಿಯುತ್ತಾನೆ . ಅವನ ಜ್ಞಾನದಿಂದ ಅವನು ಇಚ್ಛೆಸಿರುವುದನ್ನಲ್ಲದೆ (ಬೇರೇನನ್ನೂ) ಸೂಕ್ಷ್ಮವಾಗಿ ಅರಿಯಲು ಅವರಿಗೆ ಸಾಧ್ಯವಿಲ್ಲ. ಅವನ ಕುರ್ಸೀ ಆಕಾಶಗಳನ್ನು ಮತ್ತು ಭೂಮಿಯನ್ನು ಆವರಿಸಿಕೊಂಡಿದೆ. ಅವುಗಳ ಸಂರಕ್ಷಣೆಯು ಅವನಿಗೆ ಕಿಂಚಿತ್ತೂ ಭಾರವಿರುವುದಲ್ಲ. ಅವನು ಉನ್ನತನೂ, ಮಹಾನನೂ ಆಗಿರುವನು." [ಸೂರ ಅಲ್-ಬಕರ:255].

2- **ನಂತರ ಇದನ್ನು ಪಠಿಸಬೇಕು ಬಿಸ್ಮಿಲ್ಲಾಹಿ ರ್ರಹ್ಮಾನಿ ರ್ರಹೀಮ್ :** ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

﴿قُلۡ هُوَ ٱللَّهُ أَحَدٌ١ ٱللَّهُ ٱلصَّمَدُ٢ لَمۡ يَلِدۡ وَلَمۡ يُولَدۡ ٣ وَلَمۡ يَكُن لَّهُۥ كُفُوًا أَحَدُۢ٤﴾ [الإخلاص: 1-4]

**"ಹೇಳಿರಿ- ಅವನು ಅಲ್ಲಾಹನು ಏಕೈಕನು . ಅಲ್ಲಾಹನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವುದೇ ಸಂತಾನವಿಲ್ಲ, ಅವನು ಯಾರ ಸಂತಾನವೂ ಅಲ್ಲ. ಅವನಿಗೆ ಸರಿಸಮಾನರು ಯಾರೂ ಇಲ್ಲ."** ಮೂರು ಸಲ.

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

﴿قُلۡ أَعُوذُ بِرَبِّ ٱلۡفَلَقِ١ مِن شَرِّ مَا خَلَقَ٢ وَمِن شَرِّ غَاسِقٍ إِذَا وَقَبَ٣ وَمِن شَرِّ ٱلنَّفَّٰثَٰتِ فِي ٱلۡعُقَدِ٤ وَمِن شَرِّ حَاسِدٍ إِذَا حَسَدَ٥﴾ [الفلق: 1-5]

**"ಹೇಳಿರಿ- ನಾನು ಪ್ರಭಾತದ ಪ್ರಭುವಿನ ಅಭಯ ಯಾಚಿಸುತ್ತೇನೆ. ಅವನು (ಅಲ್ಲಾಹನು) ಸೃಷ್ಟಿಸಿದ ಸಕಲ ವಸ್ತುಗಳ ಕೇಡಿನಿಂದ . ಇರುಳಿನ ಅಂಧಕಾರವು ಕವಿದಾಗ ಉಂಟಾಗುವ ಕೇಡಿನಿಂದ.. ಗಂಟುಗಳ ಮೇಲೆ ಊದುವವರ (ಸ್ತ್ರೀಯರ) ಕೇಡಿನಿಂದ . ( ಮತ್ತು ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ (ಅಭಯ ಯಾಚಿಸುತ್ತೇನೆ)".**ಮೂರು ಸಲ.

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ.

﴿قُلۡ أَعُوذُ بِرَبِّ ٱلنَّاسِ١ مَلِكِ ٱلنَّاسِ٢ إِلَٰهِ ٱلنَّاسِ٣ مِن شَرِّ ٱلۡوَسۡوَاسِ ٱلۡخَنَّاسِ٤ ٱلَّذِي يُوَسۡوِسُ فِي صُدُورِ ٱلنَّاسِ٥ مِنَ ٱلۡجِنَّةِ وَٱلنَّاسِ٦﴾ [الناس: 1-6]

**“ಹೇಳಿರಿ- ನಾನು ಮಾನವರ ಪ್ರಭುವಿನ ಅಭಯ ಯಾಚಿಸುತ್ತೇನೆ. ಮಾನವರ ಸಾಮ್ರಾಟನ. ಮಾನವರ ನೈಜ ಆರಾಧ್ಯನ. ಪದೇಪದೇ ಬಂದು ದುಷ್ಪ್ರೇರಣೆ ನೀಡುವವನ ಕೇಡಿನಿಂದ . ಜನರ ಮನಸ್ಸುಗಳಲ್ಲಿ ದುಷ್ಪ್ರೇರಣೆ ಉಂಟು ಮಾಡುವವನ ಕೇಡಿನಿಂದ . ಅವನು ಜಿನ್‌ನ್‌ಗಳ ಪೈಕಿಯಾಗಿರಲಿ, ಮಾನವರ ಪೈಕಿಯಾಗಿರಲಿ.”** ಮೂರು ಸಲ

3. **“ಅಲ್ಲಾಹುಮ್ಮ ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್ತನೀ ವಅನ ಅಬ್ದುಕ , ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು , ಅಊದು ಬಿಕ ಮಿನ್ ಶರ್‍ರಿನ ಮಾ ಸನಅ್‌ತು , ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ ಫಗ್ಫಿರ್ ಲೀ ಫಇನ್ನಹೂ ಲಾ ಯಗ್ಫಿರು ದ್ದುನೂಬ ಇಲ್ಲಾ ಅನ್ತ್.”** **(ಅರ್ಥ: ಓ ಅಲ್ಲಾಹ್! ನೀನು ನನ್ನ ರಬ್ಬ್. ನಿನ್ನ ಹೊರತು ಅನ್ಯ ಆರಾಧ್ಯರಿಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ. ನಾನು ನಿನ್ನ ದಾಸ. ನನಗೆ ಸಾಧ್ಯವಾಗುವ ಮಟ್ಟಿಗೆ ನಾನು ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿದ್ದೇನೆ. ನಾನು ಮಾಡಿದ ಕರ್ಮಗಳ ಕೆಡುಕಿನಿಂದ ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ನೀನು ನನಗೆ ಅನುಗ್ರಹಿಸಿದ ಅನುಗ್ರಹಗಳನ್ನು ನಾನು ಒಪ್ಪಿಕೊಳ್ಳುತ್ತೇನೆ . ನನ್ನ ಪಾಪವನ್ನೂ ನಾನು ಒಪ್ಪಿಕೊಳ್ಳುತ್ತೇನೆ . ಆದುದರಿಂದ ನನ್ನನ್ನು ಕ್ಷಮಿಸು . ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ.)** [ಬುಖಾರಿ].

**ಪ್ರಶ್ನೆ 20. ಮಲಗುವಾಗ ಏನು ಹೇಳಬೇಕು?**

**ಉತ್ತರ:"ಬಿಸ್ಮಿಕಲ್ಲಾಹುಮ್ಮ ಅಮೂತು ವಅಹ್ಯಾ ”** **(ಓ ಅಲ್ಲಾಹನೇ, ನಿನ್ನ ಹೆಸರಿನಲ್ಲಿ ನಾನು ಸಾಯುತ್ತೇನೆ ಮತ್ತು ಬದುಕುತ್ತೇನೆ.)** (ಮುತ್ತಫಕುನ್ ಅಲೈಹಿ).

**ಪ್ರಶ್ನೆ 21. ಆಹಾರ ಸೇವಿಸುವ ಮೊದಲು ಏನು ಹೇಳಬೇಕು?**

ಉತ್ತರ: ಬಿಸ್ಮಿಲ್ಲಾ

ಆಹಾರ ಸೇವಿಸುವ ಮೊದಲು ಬಿಸ್ಮಿಲ್ಲಾ ಹೇಳಲು ಮರೆತರೆ ಹೀಗೆ ಹೇಳಬೇಕು:

**“ಬಿಸ್ಮಿಲ್ಲಾಹಿ ಫೀ ಅವ್ವಲಿಹೀ ವಆಖಿರಿಹೀ .”** **(ಇದರ ಪ್ರಾರಂಭ ಮತ್ತು ಅಂತ್ಯ ಅಲ್ಲಾಹನ ಹೆಸರಿನಲ್ಲಿ).** [ಅಬೂದಾವೂದ್ ಮತ್ತು ತಿರ್ಮಿದಿ].

**ಪ್ರಶ್ನೆ 22. ಆಹಾರ ಸೇವಿಸಿದ ಬಳಿಕ ಏನು ಹೇಳುತ್ತೀರಿ?**

**ಉತ್ತರ: “ಅಲ್-ಹಮ್ದುಲಿಲ್ಲಾಹಿಲ್ಲದೀ ಅತ್‌ಅಮನೀ ಹಾದಾ ವರಝುಕನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಕುವ್ವ .”** **(ಸ್ವಶಕ್ತಿಯಾಗಲಿ, ಸ್ವಸಾಮರ್ಥ್ಯವಾಗಲಿ ಇಲ್ಲದ ನನಗೆ ಈ ಆಹಾರವನ್ನು**

**ಉಣಿಸಿದ ಮತ್ತು ಇದನ್ನು ನನಗೆ ಒದಗಿಸಿದ ಅಲ್ಲಾಹನಿಗೆ ಸರ್ವಸ್ತುತಿ .)** [ಅಬೂದಾವೂದ್, ಇಬ್ನ್ ಮಾಜ ಹಾಗೂ ಇತರರು].

**ಪ್ರಶ್ನೆ 23. ಆಹಾರ ನೀಡಿದ ಆತಿಥೇಯನಿಗೆ ಅತಿಥಿ ಏನು ಪ್ರಾರ್ಥಿಸಬೇಕು?**

**ಉತ್ತರ: "ಅಲ್ಲಾಹುಮ್ಮ ಬಾರಿಕ್ ಲಹುಮ್ ಫೀಮಾ ರಝುಕ್ತಹುಮ್ ವಗ್‌ಫಿರ್ ಲಹುಮ್ ವರ್ಹಮ್‌ಹುಮ್." (ಓ ಅಲ್ಲಾಹ್! ಇವರಿಗೆ ನೀನು ದಯಪಾಲಿಸಿರುವುದರಲ್ಲಿ ಬರಕತ್ತನ್ನು ನೀಡು . ಅವರನ್ನು ಕ್ಷಮಿಸು ಮತ್ತು ಅವರಿಗೆ ದಯೆ ತೋರು).** [ಮುಸ್ಲಿಮ್].

**ಪ್ರಶ್ನೆ 24. ಸೀನಿದಾಗ ಏನು ಹೇಳಬೇಕು?**

**ಉತ್ತರ: ಅಲ್-ಹಮ್ದುಲಿಲ್ಲಾ**

ಆಗ ಸೀನಿದವನ ಸಹೋದರ ಅಥವಾ ಸಹಚರ ಹೀಗೆ ಹೇಳಬೇಕು: **"ಯರ್ಹಮುಕಲ್ಲಾಹ್" (ಅಲ್ಲಾಹನು ನಿನಗೆ ಕರುಣೆ ತೋರಲಿ).**

ಸೀನಿದವನು ಅದಕ್ಕೆ ಹೀಗೆ ಉತ್ತರಿಸಬೇಕು : **"ಯಹ್ದೀಕುಮುಲ್ಲಾಹು-ವ-ಯುಸ್ಲಿಹು ಬಾಲಕುಮ್ " (ಅಲ್ಲಾಹನು ನಿಮಗೆ ಮಾರ್ಗದರ್ಶನ ಮಾಡಲಿ ಮತ್ತು ನಿಮ್ಮ ಸ್ಥಿತಿಯನ್ನು ಉತ್ತಮಗೊಳಿಸಲಿ)** [ಬುಖಾರಿ].

**ಪ್ರಶ್ನೆ 25. ಸಭೆ ಮುಗಿದು ಎದ್ದೇಳುವಾಗ ಹೇಳುವ ಕಫ್ಫಾರತುಲ್ ಮಜ್ಲಿಸ್ ನ ಪ್ರಾರ್ಥನೆ ಏನು?**

**ಉತ್ತರ: "ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ, ಅಶ್‌ಹದು ಅನ್ ಲಾ ಇಲಾಹ ಇಲ್ಲಾ ಅನ್ತ , ಅಸ್ತಗ್ಫಿರುಕ ವಅತೂಬು ಇಲೈಕ್." (ಓ ಅಲ್ಲಾಹನೇ, ನೀನು ಪರಮಪಾವನನು. ನಿನಗೆ ಸ್ತುತಿ. ನಿನ್ನ ಹೊರತು ಅನ್ಯ ನೈಜ ದೇವರಿಲ್ಲ ಎಂದು ನಾನು ಸಾಕ್ಷಿ ಹೇಳುತ್ತೇನೆ . ನಾನು ನಿನ್ನಲ್ಲಿ ಕ್ಷಮೆಯಾಚಿಸುತ್ತೇನೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪ ಪಟ್ಟು ಮರಳುತ್ತೇನೆ .)** [ಅಬೂದಾವೂದ್, ತಿರ್ಮಿದಿ ಹಾಗೂ ಇತರರು].

**ಪ್ರಶ್ನೆ 26. ಸವಾರಿ ಮಾಡುವಾಗ ಹೇಳುವ ಪ್ರಾರ್ಥನೆ ಯಾವುದು?**

ಉತ್ತರ: (ಬಿಸ್ಮಿಲ್ಲಾಹಿ, ವಲ್‌ಹಮ್ದುಲಿಲ್ಲಾಹಿ, ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್ , ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್ , ಅಲ್‌ಹಮ್ದುಲಿಲ್ಲಾಹಿ, ಅಲ್‌ಹಮ್ದುಲಿಲ್ಲಾಹಿ, ಅಲ್‌ಹಮ್ದುಲಿಲ್ಲಾಹಿ, ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್ ಸುಬ್‌ಹಾನಕಲ್ಲಾಹುಮ್ಮ ಇನ್ನೀ ದಲಮ್ತು ನಫ್ಸೀ ಫಗ್‌ಫಿರ್ ಲೀ ಫಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ್) "ಅಲ್ಲಾಹನ ನಾಮದಿಂದ, ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು, ಇದನ್ನು ನಮಗೆ ಆಧೀನಗೊಳಿಸಿಕೊಟ್ಟವನು ಪರಮಪಾವನನು, ನಾವು ಇದರ ನಿಯಂತ್ರಕರಾಗಿರಲಿಲ್ಲ . ಮತ್ತು ನಾವು ನಮ್ಮ ರಬ್ಬಿನೆಡೆಗೆ ಮರಳುವವರಾಗಿದ್ದೇವೆ. ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು , ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು , ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು , ಅಲ್ಲಾಹು ಮಹಾನನು, ಅಲ್ಲಾಹು ಮಹಾನನು, ಅಲ್ಲಾಹು ಮಹಾನನು, ಪರಮಪಾವನನಾಗಿರುವ ಓ ಅಲ್ಲಾಹ್! ನಾನು ನನ್ನ ಶರೀರದ ಮೇಲೆ ಅನ್ಯಾಯವೆಸಗಿರುವೆನು . ಆದ್ದರಿಂದ ನನಗೆ ಕ್ಷಮಿಸು . ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಾರೂ ಇಲ್ಲ." [ಅಬೂದಾವೂದ್ ಮತ್ತು ತಿರ್ಮಿದಿ].

| ಪ್ರಶ್ನೆ 27: ಪ್ರಯಾಣದ ಪ್ರಾರ್ಥನೆ ಯಾವುದು? |
|---|

ಉತ್ತರ: (ಅಲ್ಲಾಹು ಅಕ್ಬರ್ (ಮೂರು ಬಾರಿ), ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್ , ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್ , ಅಲ್ಲಾಹುಮ್ಮ ಇನ್ನಾ ನಸ್‌ಅಲುಕ ಫೀ ಸಫರಿನಾ ಹಾದಲ್ ಬಿರ್‍ರ ವತ್ತಕ್ವಾ ವಮಿನಲ್ ಅಮಲಿ ಮಾ ತರ್ದಾ , ಅಲ್ಲಾಹುಮ್ಮ ಹವ್ವಿನ್ ಅಲೈನಾ ಸಫರನಾ ಹಾದಾ , ವತ್ವಿ ಅನ್ನಾ ಬುಅದಹೂ , ಅಲ್ಲಾಹುಮ್ಮ ಅನ್ತ ಸ್ಸಾಹಿಬು ಫಿ ಸ್ಸಫರಿ ವಲ್‌ಖಲೀಫತು ಫಿಲ್ ಅಹ್ಲಿ , ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ವಅಸಾಇ ಸ್ಸಫರಿ ವಕಆಬತಿಲ್ ಮನ್ದರಿ ವಸೂಇಲ್ ಮುನ್ಕಲಬಿ ಫಿಲ್ ಮಾಲಿ ವಲ್‌ಅಹ್ಲ್ ) "ಅಲ್ಲಾಹು ಮಹಾನನು. ಇದನ್ನು ನಮಗೆ ಆಧೀನಗೊಳಿಸಿಕೊಟ್ಟವನು ಪರಮಪಾವನನು, ನಾವು ಇದರ ನಿಯಂತ್ರಕರಾಗಿರಲಿಲ್ಲ. ಮತ್ತು ನಾವು ನಮ್ಮ ರಬ್ಬಿನೆಡೆಗೆ ಮರಳುವವರಾಗಿದ್ದೇವೆ. ಓ ಅಲ್ಲಾಹ್! ನಮ್ಮ ಈ ಯಾತ್ರೆಯಲ್ಲಿ ಒಳಿತನ್ನು, ಭಯಭಕ್ತಿಯನ್ನು ಮತ್ತು ಕರ್ಮಗಳಲ್ಲಿ ನೀನು ತೃಪ್ತಿಪಡುವುದನ್ನು ನಾವು ನಿನ್ನೊಂದಿಗೆ ಬೇಡುತ್ತಿದ್ದೇವೆ . ಓ ಅಲ್ಲಾಹ್! ನಮಗೆ ಈ ಯಾತ್ರೆಯನ್ನು ಸುಲಭೀಕರಿಸು

ಮತ್ತು ಇದರ ದೂರವನ್ನು ನಮಗೆ ಕಿರಿದಾಗಿಸು. ಓ ಅಲ್ಲಾಹ್! ಯಾತ್ರೆಯಲ್ಲಿ ನೀನು ಜೊತೆಗಾರನಾಗಿರುವೆ ಮತ್ತು (ನಾನು ಬಿಟ್ಟು ಬಂದ) ಕುಟುಂಬದ ಉತ್ತರಾಧಿಕಾರಿಯಾಗಿರುವೆ. ಓ ಅಲ್ಲಾಹ್! ಯಾತ್ರೆಯ ಸಂಕಷ್ಟಗಳಿಂದ, ನೋಟದ ವ್ಯಾಕುಲತೆಯಿಂದ ಮತ್ತು ಸಂಪತ್ತು ಹಾಗೂ ಕುಟುಂಬದಲ್ಲಿ ಕೆಟ್ಟ ಪರಿಣಾಮಗಳಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ."

ಹಿಂದಿರುಗಿ ಬರುವಾಗ ಇದರ ಕೊನೆಯಲ್ಲಿ ಕೆಳಗಿನ ಪ್ರಾರ್ಥನೆಯನ್ನು ಸೇರಿಸಿ ಹೇಳಬೇಕು:

**(ಆಯಿಬೂನ ತಾಇಬೂನ ಆಬಿದೂನ ಲಿರಬ್ಬಿನಾ ಹಾಮಿದೂನ್)** "ನಾವು ಮರಳುತ್ತಿದ್ದೇವೆ, ಪಶ್ಚಾತ್ತಾಪ ಪಡುತ್ತಿದ್ದೇವೆ, ಆರಾಧಿಸುತ್ತಿದ್ದೇವೆ ಮತ್ತು ನಮ್ಮ ರಬ್ಬಿಗೆ ನಾವು ಸ್ತುತಿ ಅರ್ಪಿಸುತ್ತಿದ್ದೇವೆ." [ಮುಸ್ಲಿಮ್].

### ಪ್ರಶ್ನೆ 28: ನಿವಾಸಿಗಾಗಿ ಪ್ರಯಾಣಿಕನು ಹೇಗೆ ಪ್ರಾರ್ಥಿಸಬೇಕು?

ಉತ್ತರ: **(ಅಸ್ತೌದಿಉಕುಮುಲ್ಲಾಹಲ್ಲದೀ ಲಾ ತದೀಉ ವದಾಇಉಹೂ)** "ನಾನು ನಿಮ್ಮನ್ನು ಅಲ್ಲಾಹನ ಸಂರಕ್ಷಣೆಯಲ್ಲಿ ಅರ್ಪಿಸಿದ್ದೇನೆ. ಅವನ ಸಂರಕ್ಷಣೆಯಲ್ಲಿ ಅರ್ಪಿಸಲ್ಪಟ್ಟದ್ದು ಎಂದೂ ನಷ್ಟವಾಗದು." [ಅಹ್ಮದ್ ಮತ್ತು ಇಬ್ನ್ ಮಾಜ].

### ಪ್ರಶ್ನೆ 29: ಪ್ರಯಾಣಿಕನನ್ನು ಬೀಳ್ಕೊಡುವಾಗ ನಿವಾಸಿ ಏನು ಪ್ರಾರ್ಥಿಸಬೇಕು?

ಉತ್ತರ: **(ಅಸ್ತೌದಿಉಲ್ಲಾಹ ದೀನಕ ವಅಮಾನತಕ ವಖವಾತೀಮ ಅಮಲಿಕ್ )** "ನಾನು ನಿನ್ನ ಧರ್ಮವನ್ನು, ಪ್ರಾಮಾಣಿಕತೆಯನ್ನು ಮತ್ತು ನಿನ್ನ ಕರ್ಮದ ಅಂತ್ಯಗಳನ್ನು ಅಲ್ಲಾಹನ ಸಂರಕ್ಷಣೆಯಲ್ಲಿಡುತ್ತೇನೆ." [ಅಹ್ಮದ್ ಮತ್ತು ತಿರ್ಮಿದಿ].

### ಪ್ರಶ್ನೆ 30: ಮಾರುಕಟ್ಟೆಯನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು?

ಉತ್ತರ: **"ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ಯುಹ್ಯೀ ವಯುಮೀತು, ವಹುವ ಹಯ್ಯುನ್ ಲಾ ಯಮೂತ್ , ಬಿಯದಿಹಿಲ್ ಖೈರ್, ವಹುವ ಅಲಾ ಕುಲ್ಲಿ ಶೈಇನ್ ಕದೀರ್ ."** (ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಸ್ತುತಿ ಅಲ್ಲಾಹನಿಗೆ, ಅಲ್ಲಾಹು ಮಹಾನನಾಗಿದ್ದಾನೆ. ಅಲ್ಲಾಹನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ,

**ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆ , ಆಧಿಪತ್ಯವು ಅವನದಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ, ಅವನು ಎಂದೆಂದಿಗೂ ಜೀವಿಸುವವನು ಮತ್ತು ಎಂದಿಗೂ ಸಾಯದವನು , ಒಳಿತೆಲ್ಲವೂ ಅವನ ಕೈಯಲ್ಲಿದೆ, ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ.)** [ತಿರ್ಮಿದಿ ಮತ್ತು ಇಬ್ನ್ ಮಾಜ].

**ಪ್ರಶ್ನೆ 31. ಕೋಪ ಬರುವಾಗ ಹೇಳುವ ಪ್ರಾರ್ಥನೆ ಯಾವುದು?**

**ಉತ್ತರ: "ಅಊದು ಬಿಲ್ಲಾಹಿ ಮಿನ ಶ್ಶೈತಾನಿ ರ್ರಜೀಮ್." (ಶಾಪಗ್ರಸ್ತ ಸೈತಾನನಿಂದ ನಾನು ಅಲ್ಲಾಹನಲ್ಲಿ ಆಶ್ರಯ ಪಡೆಯುತ್ತೇನೆ).** (ಮುತ್ತಫಕುನ್ ಅಲೈಹಿ).

**ಪ್ರಶ್ನೆ 32. ಯಾರಾದರೂ ಉಪಕಾರ ಮಾಡಿದರೆ ಏನು ಹೇಳಬೇಕು?**

**ಉತ್ತರ: "ಜಝಾಕಲ್ಲಾಹು ಖೈರನ್." (ಅಲ್ಲಾಹು ನಿನಗೆ ಅತ್ಯುತ್ತಮ ಪ್ರತಿಫಲ ನೀಡಲಿ).** [ತಿರ್ಮಿದಿ]

**ಪ್ರಶ್ನೆ 33. ವಾಹನ ಮುಗ್ಗರಿಸಿದರೆ ಏನು ಪ್ರಾರ್ಥಿಸಬೇಕು?**

**ಉತ್ತರ: ಬಿಸ್ಮಿಲ್ಲಾ (ಅಲ್ಲಾಹನ ನಾಮದಿಂದ)** [ಅಬೂದಾವೂದ್].

**ಪ್ರಶ್ನೆ 34. ಏನಾದರೂ ಒಳ್ಳೆಯದು ಸಂಭವಿಸಿದರೆ ಏನು ಹೇಳಬೇಕು?**

**ಉತ್ತರ: "ಅಲ್-ಹಮ್ದುಲಿಲ್ಲಾಹಿಲ್ಲದೀ ಬಿನಿಅ್‌ಮತಿಹೀ ತತಿಮ್ಮು ಸ್ಸಾಲಿಹಾತ್." (ಅಲ್ಲಾಹನಿಗೆ ಸರ್ವಸ್ತುತಿ. ಅವನ ಅನುಗ್ರಹದಿಂದಲೇ ಉತ್ತಮ ಕಾರ್ಯಗಳು ಪೂರ್ಣವಾಗುತ್ತವೆ).**

[ಹಾಕಿಂ ಮತ್ತಿತರರು].

**ಪ್ರಶ್ನೆ 35. ಏನಾದರೂ ಕೆಟ್ಟದು ಸಂಭವಿಸಿದರೆ ಏನು ಹೇಳಬೇಕು?**

**ಉತ್ತರ: "ಅಲ್-ಹಮ್ದುಲಿಲ್ಲಾಹಿ ಅಲಾ ಕುಲ್ಲಿ ಹಾಲ್ ." (ಎಲ್ಲಾ ಅವಸ್ಥೆಗಳಲ್ಲೂ ಅಲ್ಲಾಹನಿಗೆ ಸರ್ವಸ್ತುತಿ).** [ಸಹೀಹುಲ್ ಜಾಮಿಅ್]

**ಪ್ರಶ್ನೆ 36. ಸಲಾಂ ಹೇಳುವುದು ಮತ್ತು ಅದಕ್ಕೆ ಉತ್ತರಿಸುವುದು ಹೇಗೆ?**

**ಉತ್ತರ:** ಮುಸಲ್ಮಾನನು, **"ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹಿ ವಬರಕಾತುಹು "** ಎಂದು ಸಲಾಂ ಹೇಳಬೇಕು.

ಸಲಾಂ ಹೇಳಿದವರಿಗೆ, **"ವಅಲೈಕುಮು ಸ್ಸಲಾಂ ವರಹ್ಮತುಲ್ಲಾಹಿ ವಬರಕಾತುಹು "** ಎಂದು ಉತ್ತರಿಸಬೇಕು. [ತಿರ್ಮಿದಿ, ಅಬೂದಾವೂದ್ ಮತ್ತಿತರರು].

**ಪ್ರಶ್ನೆ 37. ಮಳೆ ಸುರಿಯುವಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಅಲ್ಲಾಹುಮ್ಮ ಸಯ್ಯಿಬನ್ ನಾಫಿಅನ್) "ಓ ಅಲ್ಲಾಹ್! ಪ್ರಯೋಜನಕರ ಮಳೆಯಾಗಿರಲಿ."** [ಬುಖಾರಿ].

**ಪ್ರಶ್ನೆ 38. ಮಳೆ ಸುರಿಯುವುದು ನಿಂತರೆ ಏನು ಪ್ರಾರ್ಥಿಸಬೇಕು?**

**ಉತ್ತರ: (ಮುತಿರ್‌ನಾ ಬಿಫದ್ಲಿಲ್ಲಾಹಿ ವರಹ್ಮತಿಹೀ ) "ಅಲ್ಲಾಹನ ಔದಾರ್ಯದಿಂದ ಮತ್ತು ಕರುಣೆಯಿಂದ ನಮಗೆ ಮಳೆ ಸುರಿಯಿತು."** [ಬುಖಾರಿ ಮತ್ತು ಮುಸ್ಲಿಂ]

**ಪ್ರಶ್ನೆ 39: ಗಾಳಿ ಬೀಸುವಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರಹಾ , ವಅಊದು ಬಿಕ ಮಿನ್ ಶರ್ರಿಹಾ) "ಓ ಅಲ್ಲಾಹ್! ನಾನು ಅದರ (ಗಾಳಿಯ) ಒಳಿತನ್ನು ನಿನ್ನಲ್ಲಿ ಬೇಡುತ್ತಿದ್ದೇನೆ . ಮತ್ತು ನಾನು ಅದರ ಕೆಡುಕಿನಿಂದ ನಿನ್ನ ರಕ್ಷೆ ಬೇಡುತ್ತಿದ್ದೇನೆ."** [ಅಬೂದಾವೂದ್ ಮತ್ತು ಇಬ್ನ್ ಮಾಜ].

**ಪ್ರಶ್ನೆ 40. ಗುಡುಗಿನ ಶಬ್ಧವನ್ನು ಕೇಳುವಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಸುಬ್‌ಹಾನಲ್ಲದೀ ಯುಸಬ್ಬಿಹು ರ್‍ರ ಅದು ಬಿಹಮ್ದಿಹೀ ವಲ್‌ಮಲಾಇಕತು ಮಿನ್ ಖೀಫತಿಹೀ ) "ಗುಡುಗು ಸ್ತುತಿಯೊಂದಿಗೆ ಮತ್ತು ಮಲಕ್‌ಗಳು ಭಯದಿಂದ ಪ್ರಕೀರ್ತನೆ ಮಾಡುವ ಅಲ್ಲಾಹು ಪರಿಪಾವನನು."** [ಮುವತ್ತಾ ಮಾಲಿಕ್].

**ಪ್ರಶ್ನೆ 41. ಪರೀಕ್ಷಿಸಲ್ಪಟ್ಟವನನ್ನು ಕಂಡಾಗ ಏನು ಪ್ರಾರ್ಥಿಸಬೇಕು?**

**ಉತ್ತರ: (ಅಲ್‌ಹಮ್ದು ಲಿಲ್ಲಾಹಿಲ್ಲದೀ ಆಫಾನೀ ಮಿಮ್ಮಬ್ತಲಾಕ ಬಿಹೀ ವಫದ್ದಲನೀ ಅಲಾ ಕಸೀರಿನ್ ಮಿಮ್ಮನ್ ಖಲಕ ತಫ್ದೀಲಾ) "ಅಲ್ಲಾಹನಿಗೆ ಸ್ತುತಿ, ನಿನ್ನನ್ನು ಯಾವುದರಿಂದ ಅವನು ಪರೀಕ್ಷಿಸಿದನೋ ಅದರಿಂದ ಅವನು ನನ್ನನ್ನು ಪಾರು ಮಾಡಿದ್ದಾನೆ. ಮತ್ತು ಅವನು ಸೃಷ್ಟಿಸಿದ ಅನೇಕ ಸೃಷ್ಟಿಗಳಿಗಿಂತ ನನ್ನನ್ನು ಶ್ರೇಷ್ಠಗೊಳಿಸಿದ್ದಾನೆ."** [ತಿರ್ಮಿದಿ]

| ಪ್ರಶ್ನೆ 42. ತನ್ನಿಂದ ದೃಷ್ಟಿ ತಾಗಬಹುದು ಎಂದು ಭಯಪಡುವವನು ಏನು ಪ್ರಾರ್ಥಿಸಬೇಕು? |
|---|

**ಉತ್ತರ: ಹದೀಸಿನಲ್ಲಿ ಹೀಗಿದೆ: "ಒಬ್ಬ ವ್ಯಕ್ತಿ ತನ್ನಲ್ಲಿ, ತನ್ನ ಸಹೋದರನಲ್ಲಿ ಅಥವಾ ತನ್ನ ಆಸ್ತಿಯಲ್ಲಿ, ತನಗೆ ಅಚ್ಚರಿಯಾಗುವಂತದ್ದನ್ನು ಕಂಡರೆ ಬರಕತ್‌ಗಾಗಿ ಪ್ರಾರ್ಥಿಸಬೇಕು . ಏಕೆಂದರೆ ದೃಷ್ಟಿ ತಾಗುವುದು ಸತ್ಯವಾಗಿದೆ."** [ಅಹ್ಮದ್, ಇಬ್ನ್ ಮಾಜ ಹಾಗೂ ಇತರರು].

| ಪ್ರಶ್ನೆ 43. ಪ್ರವಾದಿ(ಸ) ರವರ ಮೇಲೆ ಸಲಾತ್ ಹೇಳುವುದು ಹೇಗೆ? |
|---|

**ಉತ್ತರ: (ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್, ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್ ) "ಓ ಅಲ್ಲಾಹ್! ನೀನು ಇಬ್ರಾಹೀಮ್‌ರವರ ಮೇಲೆ ಮತ್ತು ಅವರ ಕುಟುಂಬದ ಮೇಲೆ ಕೃಪೆ ವರ್ಷಿಸಿದಂತೆ ಮುಹಮ್ಮದ್‌ರವರ ಮೇಲೆ ಮತ್ತು ಅವರ ಕುಟುಂಬದ ಮೇಲೆ ಕೃಪೆ ವರ್ಷಿಸು . ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಪ್ರಶಂಸನೀಯನೂ ಆಗಿರುವೆ. ಓ ಅಲ್ಲಾಹ್! ನೀನು ಇಬ್ರಾಹೀಮ್‌ರವರ ಮೇಲೆ ಮತ್ತು ಅವರ ಕುಟುಂಬದ ಮೇಲೆ ಬರಕತ್ ಸುರಿಸಿದಂತೆ ಮುಹಮ್ಮದ್‌ರವರ ಮೇಲೆ ಮತ್ತು ಅವರ ಕುಟುಂಬದವರ ಮೇಲೆ ಬರಕತ್ ಸುರಿಸು. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಪ್ರಶಂಸನೀಯನೂ ಆಗಿರುವೆ."** (ಮುತ್ತಫಕುನ್ ಅಲೈಹಿ).

*******

# ಸಮ್ಮಿಶ್ರ ವಿಷಯಗಳ ವಿಭಾಗ

| ಪ್ರಶ್ನೆ 1. ಐದು ಉತ್ತರದಾಯಿತ್ವದ ನಿಯಮಗಳು ಯಾವುವು? |
|---|

ಉತ್ತರ:

1. ವಾಜಿಬ್ (ಕಡ್ಡಾಯ)

2. ಮುಸ್ತಹಬ್ಬ್ (ಅಪೇಕ್ಷಣೀಯ)

3. ಮುಹರ್‍ರಬಮ್(ನಿಷೇಧಿತ)

4. ಮಕ್ರೂಹ್ (ಅಸಹ್ಯಕರ)

5. ಮುಬಾಹ್ (ಸಮ್ಮತಾರ್ಹ)

**ಪ್ರಶ್ನೆ 2. ಈ ಐದು ನಿಯಮಗಳನ್ನು ವಿವರಿಸಿ.**

**ಉತ್ತರ:**1. **ವಾಜಿಬ್ (ಕಡ್ಡಾಯವಾಗಿ ಮಾಡಲೇಬೇಕಾದ ಕಾರ್ಯ):** ಉದಾಹರಣೆಗೆ ಐದು ವೇಳೆಯ ನಮಾಝ್, ರಮದಾನ್ ಉಪವಾಸ ಮತ್ತು ಮಾತಾಪಿತರಿಗೆ ಒಳಿತು ಮಾಡುವುದು.

- ವಾಜಿಬ್ ಕಾರ್ಯ ಮಾಡುವವನಿಗೆ ಪ್ರತಿಫಲವಿದೆ ಮತ್ತು ತೊರೆಯುವವನಿಗೆ ಶಿಕ್ಷೆಯಿದೆ.

2. **ಮುಸ್ತಹಬ್ಬ್ (ಕಡ್ಡಾಯವಲ್ಲದ ಅಪೇಕ್ಷಣೀಯ ಕಾರ್ಯ ):** ಉದಾಹರಣೆಗೆ, ರವಾತಿಬ್ ಸುನ್ನತ್ ನಮಾಝ್, ರಾತ್ರಿ ನಮಾಝ್, ಅನ್ನದಾನ ಮಾಡುವುದು, ಸಲಾಂ ಹೇಳುವುದು.

- ಮುಸ್ತಹಬ್ಬ್ ಕಾರ್ಯ ಮಾಡುವವನಿಗೆ ಪ್ರತಿಫಲವಿದೆ ಮತ್ತು ತೊರೆಯುವವನಿಗೆ ಶಿಕ್ಷೆಯಿಲ್ಲ.

ಪ್ರಮುಖ ಸೂಚನೆ:

ಒಂದು ಕಾರ್ಯವು ಸುನ್ನತ್ ಅಥವಾ ಮುಸ್ತಹಬ್ಬ್ ಎಂದು ತಿಳಿದರೆ ಮುಸಲ್ಮಾನನು (ಅದನ್ನು ತೊರೆಯದೆ) ಪ್ರವಾದಿ(ಸ) ರನ್ನು ಅನುಸರಿಸುತ್ತಾ ಅದನ್ನು ಮಾಡಲು ಆತುರಪಡಬೇಕು.

3. **ಮುಹರ್‍ರರಮ್ (ನಿಷೇಧಿತ ಕಾರ್ಯ):** ಉದಾಹರಣೆಗೆ, ಮದ್ಯಪಾನ ಮಾಡುವುದು, ಮಾತಾಪಿತರೊಡನೆ ಕೆಟ್ಟದಾಗಿ ವರ್ತಿಸುವುದು ಮತ್ತು ಕುಟುಂಬ ಸಂಬಂಧವನ್ನು ಕಡಿಯುವುದು.

- ಮುಹರ್‍ರರಮ್‌ಕಾರ್ಯ ಮಾಡುವವನಿಗೆ ಶಿಕ್ಷೆ ಮತ್ತು ತೊರೆಯುವವನಿಗೆ ಪ್ರತಿಫಲವಿದೆ.

4. **ಮಕ್ರೂಹ್ (ಅಸಹ್ಯಕರ ಕಾರ್ಯ):** ಉದಾಹರಣೆಗೆ, ಎಡಗೈಯಲ್ಲಿ ಕೊಡುವುದು ಮತ್ತು ಪಡೆಯುವುದು, ನಮಾಝ್‌ನಲ್ಲಿ ಬಟ್ಟೆ ಮಡಚುವುದು.

- ಮಕ್ರೂಹ್ ಕಾರ್ಯ ತೊರೆಯುವವನಿಗೆ ಪ್ರತಿಫಲವಿದೆ ಮತ್ತು ಮಾಡುವವನಿಗೆ ಶಿಕ್ಷೆಯಿಲ್ಲ.

5. **ಮುಬಾಹ್ (ಸಮ್ಮತಾರ್ಹ ಕಾರ್ಯ):** ಉದಾಹರಣೆಗೆ, ಸೇಬು ತಿನ್ನುವುದು, ಚಹಾ ಕುಡಿಯುವುದು. ಇದನ್ನು ಜಾಇಝ್ ಮತ್ತು ಹಲಾಲ್ ಎಂದು ಕೂಡ ಹೇಳಲಾಗುತ್ತದೆ.

- ಮುಬಾಹ್ ತೊರೆಯುವವನಿಗೆ ಪ್ರತಿಫಲವಿಲ್ಲ ಮತ್ತು ಮಾಡುವವನಿಗೆ ಶಿಕ್ಷೆಯಿಲ್ಲ.

**ಪ್ರಶ್ನೆ 3. ವ್ಯಾಪಾರ ಮತ್ತು ವ್ಯವಹಾರಗಳ ವಿಧಿಯೇನು?**

**ಉತ್ತರ:** ಮೂಲನಿಯಮದ ಪ್ರಕಾರ ಎಲ್ಲಾ ವ್ಯಾಪಾರ ಮತ್ತು ವ್ಯವಹಾರಗಳು ಸಮ್ಮತಾರ್ಹವಾಗಿವೆ; ಅಲ್ಲಾಹು ನಿಷೇಧಿಸಿದ ಕೆಲವು ವಿಧಗಳ ಹೊರತು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:﴿وَأَحَلَّ ٱللَّهُ ٱلۡبَيۡعَ وَحَرَّمَ ٱلرِّبَوٰاْ﴾ [البقرة: 275]

**"ಆದರೆ ಅಲ್ಲಾಹನು ವ್ಯಾಪಾರವನ್ನು ಅನುಮತಿಸಿದ್ದಾನೆ ಮತ್ತು ಬಡ್ಡಿಯನ್ನು ನಿಷೇಧಿಸಿದ್ದಾನೆ."** [ಸೂರ ಅಲ್-ಬಕರ:275].

**ಪ್ರಶ್ನೆ 4. ಕೆಲವು ನಿಷೇಧಿತ ವ್ಯಾಪಾರ ಮತ್ತು ವ್ಯವಹಾರಗಳನ್ನು ತಿಳಿಸಿ?**

**ಉತ್ತರ:**1. **ವಂಚನೆ:** ಸರಕುಗಳ ನ್ಯೂನತೆಯನ್ನು ಮರೆಮಾಚುವುದು ಇದರಲ್ಲಿ ಒಳಪಡುತ್ತದೆ.

ಅಬೂ ಹುರೈರ(ರ) ರಿಂದ ವರದಿ. **ಒಮ್ಮೆ ಪ್ರವಾದಿಯವರು(ಸ) ಆಹಾರ ಧಾನ್ಯದ ರಾಶಿಯ ಬಳಿಯಿಂದ ಹಾದುಹೋಗುತ್ತಿದ್ದಾಗ, ಅದರೊಳಗೆ ಕೈ ತೂರಿಸಿದರು . ಆಗ ಅವರ ಬೆರಳುಗಳು ಒದ್ದೆಯಾದವು. ಅವರು ಕೇಳಿದರು: "ಓ ಆಹಾರ ಧಾನ್ಯ ಮಾರುವವನೇ, ಇದೇನು?" ಆತ ಹೇಳಿದ: "ಓ ಅಲ್ಲಾಹನ ಸಂದೇಶವಾಹಕರೇ, ಮಳೆ ಬಂದು ಒದ್ದೆಯಾಗಿದೆ." ಅವರು ಹೇಳಿದರು:"ಜನರು ಕಾಣುವಂತೆ ಅದನ್ನು ನೀನು ರಾಶಿಯ ಮೇಲ್ಭಾಗದಲ್ಲಿ ಏಕೆ ಹಾಕಲಿಲ್ಲ ? ವಂಚನೆ ಮಾಡುವವನು ನಮ್ಮಲ್ಲಿ ಸೇರಿದವನಲ್ಲ."** [ಮುಸ್ಲಿಮ್].

2. **ಬಡ್ಡಿ:** ಉದಾಹರಣೆಗೆ, ಎರಡು ಸಾವಿರ ರೂಪಾಯಿ ಕೊಡುತ್ತೇನೆಂದು ಹೇಳಿ ಒಂದು ಸಾವಿರ ರೂಪಾಯಿ ಸಾಲ ಪಡೆಯುವುದು.

ಹೆಚ್ಚಾಗಿ ಕೊಡುವ ರೂಪಾಯಿಗಳು ನಿಷೇಧಿತ ಬಡ್ಡಿಯಾಗಿದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ :﴿وَأَحَلَّ ٱللَّهُ ٱلۡبَيۡعَ وَحَرَّمَ ٱلرِّبَوٰاْ﴾ **"ಆದರೆ ಅಲ್ಲಾಹನು ವ್ಯಾಪಾರವನ್ನು ಅನುಮತಿಸಿದ್ದಾನೆ ಮತ್ತು ಬಡ್ಡಿಯನ್ನು ನಿಷೇಧಿಸಿದ್ದಾನೆ."** [ಸೂರ ಅಲ್-ಬಕರ:275].

3. ಮೋಸ ಮತ್ತು ಅಜ್ಞಾನ : ಉದಾಹರಣೆಗೆ, ಕುರಿಯ ಕೆಚ್ಚಲಲ್ಲಿರುವ ಹಾಲನ್ನು ಮಾರಾಟ ಮಾಡುವುದು, ಅಥವಾ ನೀರಿನಲ್ಲಿರುವ ಮೀನುಗಳನ್ನು ಅವುಗಳನ್ನು ಹಿಡಿಯುವ ಮೊದಲೇ ಮಾರಾಟ ಮಾಡುವುದು.

ಹದೀಸಿನಲ್ಲಿ ಹೀಗಿದೆ: **"ಮೋಸದ ವ್ಯಾಪಾರವನ್ನು ಪ್ರವಾದಿಯವರು (ಸ) ನಿಷೇಧಿಸಿದ್ದಾರೆ."** [ಮುಸ್ಲಿಮ್].

**ಪ್ರಶ್ನೆ 5. ಅಲ್ಲಾಹು ನಿಮಗೆ ನೀಡಿದ ಕೆಲವು ಅನುಗ್ರಹಗಳನ್ನು ತಿಳಿಸಿ.**

**ಉತ್ತರ:** 1. ನಿನಗೆ ಅಲ್ಲಾಹನು ಇಸ್ಲಾಂ ಧರ್ಮವನ್ನು ದಯಪಾಲಿಸಿರುವ ಮತ್ತು ನೀನು ಸತ್ಯನಿಷೇಧಿಗಳಲ್ಲಿ ಇಲ್ಲದಿರುವ ಅನುಗ್ರಹ.

2. ನೀನು ಸುನ್ನತ್ ಪಾಲಿಸುವವನಾಗಿರುವ ಮತ್ತು ನೂತನವಾದಿಯಲ್ಲದಿರುವ ಅನುಗ್ರಹ.

3. ಕೇಳುವ, ನೋಡುವ, ನಡೆಯುವ ಮುಂತಾದ ಆರೋಗ್ಯದ ಅನುಗ್ರಹ.

4. ಆಹಾರ, ಪಾನೀಯ, ಬಟ್ಟೆ-ಬರೆ ಮುಂತಾದಗಳ ಅನುಗ್ರಹ.

ಅಲ್ಲಾಹು ನಿನಗೆ ನೀಡಿದ ಅನುಗ್ರಹಗಳು ಅಸಂಖ್ಯವಾಗಿದ್ದು ಅವುಗಳನ್ನು ಎಣಿಸಲು ಸಾಧ್ಯವಿಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ : ﴿وَإِن تَعُدُّواْ نِعۡمَةَ ٱللَّهِ لَا تُحۡصُوهَآۗ إِنَّ ٱللَّهَ لَغَفُورٞ رَّحِيمٞ﴾ **"ನೀವು ಅಲ್ಲಾಹನ ಅನುಗ್ರಹಗಳನ್ನು ಎಣಿಸುವುದಾದರೆ ಅವುಗಳನ್ನು ಎಣಿಕೆ ಮಾಡಲು ನಿಮ್ಮಿಂದ**

**ಸಾಧ್ಯವಾಗದು. ಖಂಡಿತವಾಗಿಯೂ ಅಲ್ಲಾಹು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಸೂರ ಅನ್ನಹ್ಲ್:18]

**ಪ್ರಶ್ನೆ 6. ಅನುಗ್ರಹಗಳಿಗೆ ಸಂಬಂಧಿಸಿದಂತೆ ನಮ್ಮ ಕರ್ತವ್ಯವೇನು? ನಾವು ಅವುಗಳಿಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕು?**

**ಉತ್ತರ:** ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸುವುದು ಕಡ್ಡಾಯವಾಗಿದೆ. ಕೃತಜ್ಞತೆ ಸಲ್ಲಿಸುವುದು ಎಂದರೆ ನಾಲಗೆಯ ಮೂಲಕ ಅಲ್ಲಾಹನನ್ನು ಸ್ತುತಿಸುವುದು ಮತ್ತು ಪ್ರಶಂಸಿಸುವುದು , ಅನುಗ್ರಹಗಳನ್ನು ಅಲ್ಲಾಹನಿಗೆ ಮಾತ್ರ ಸೇರಿಸಿ ಹೇಳುವುದು ಮತ್ತು ಆ ಅನುಗ್ರಹಗಳನ್ನು ಅಲ್ಲಾಹನಿಗೆ ಅವಿಧೇಯತೆ ತೋರುವ ವಿಧದಲ್ಲಿ ಬಳಸದೆ, ಅವನಿಗೆ ತೃಪ್ತಿಯಾಗುವ ವಿಧದಲ್ಲಿ ವಿನಿಯೋಗಿಸುವುದು.

**ಪ್ರಶ್ನೆ 7. ಮುಸ್ಲಿಮರ ಹಬ್ಬಗಳು ಯಾವುವು?**

**ಉತ್ತರ:** ಈದುಲ್ ಫಿತ್ರ್ (ರಂಜಾನ್) ಮತ್ತು ಈದುಲ್ ಅದ್‌ಹಾ (ಬಕ್ರೀದ್).

- ಅನಸ್(ರ) ರವರ ಹದೀಸಿನಲ್ಲಿ ಹೀಗಿದೆ: **ಪ್ರವಾದಿ(ಸ) ರವರು ಮದೀನಕ್ಕೆ ಬಂದಾಗ ಅಲ್ಲಿನ ಜನರು ವರ್ಷದ ಎರಡು ದಿನಗಳಲ್ಲಿ ಆಟವಾಡುವುದನ್ನು ಕಂಡರು. ಅವರು ಕೇಳಿದರು: "ಈ ಎರಡು ದಿನಗಳ ವಿಶೇಷತೆಯೇನು?" ಜನರು ಉತ್ತರಿಸಿದರು: "ನಾವು ಅಜ್ಞಾನಕಾಲದಿಂದಲೇ ಈ ಎರಡು ದಿನಗಳಲ್ಲಿ ಆಟವಾಡುತ್ತಿದ್ದೇವೆ ." ಆಗ ಪ್ರವಾದಿ(ಸ) ರವರು ಹೇಳಿದರು: "ನಿಶ್ಚಯವಾಗಿಯೂ ಅಲ್ಲಾಹು ನಿಮಗೆ ಈ ಎರಡು ದಿನಗಳ ಬದಲು ಬೇರೆ ಎರಡು ದಿನಗಳನ್ನು ನೀಡಿದ್ದಾನೆ: ಈದುಲ್ ಅದ್‌ಹಾ ಮತ್ತು ಈದುಲ್ ಫಿತ್ರ್."** [ಅಬೂದಾವೂದ್].

ಈ ಎರಡು ಹಬ್ಬಗಳ ಹೊರತಾದ ಹಬ್ಬಗಳೆಲ್ಲವೂ ಬಿದ್‌ಅತ್(ನವೀನಾಚಾರ) ಆಗಿವೆ.

**ಪ್ರಶ್ನೆ 8. ಶ್ರೇಷ್ಠ ತಿಂಗಳು ಯಾವುದು?**

**ಉತ್ತರ:** ರಮದಾನ್ ತಿಂಗಳು.

**ಪ್ರಶ್ನೆ 9. ಶ್ರೇಷ್ಠ ದಿನ ಯಾವುದು?**

**ಉತ್ತರ:** ಶುಕ್ರವಾರ.

**ಪ್ರಶ್ನೆ 10. ವರ್ಷದ ಅತಿಶ್ರೇಷ್ಠ ದಿನ ಯಾವುದು?**

**ಉತ್ತರ:** ಅರಫ ದಿನ.

**ಪ್ರಶ್ನೆ 11. ವರ್ಷದ ಅತಿಶ್ರೇಷ್ಠ ರಾತ್ರಿ ಯಾವುದು?**

**ಉತ್ತರ:** ಲೈಲತುಲ್ ಕದ್ರ್.

**ಪ್ರಶ್ನೆ 12. ಅನ್ಯ ಮಹಿಳೆಯನ್ನು ನೋಡಿದರೆ ಏನು ಮಾಡಬೇಕು?**

**ಉತ್ತರ:** ದೃಷ್ಟಿಗಳನ್ನು ತಗ್ಗಿಸಬೇಕು. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿قُل لِّلۡمُؤۡمِنِينَ يَغُضُّواْ مِنۡ أَبۡصَٰرِهِمۡ﴾

**"ಸತ್ಯವಿಶ್ವಾಸಿಗಳೊಡನೆ, ಅವರು ತಮ್ಮ ದೃಷ್ಟಿಗಳನ್ನು ತಗ್ಗಿಸಲು ಹೇಳಿರಿ."** [ಸೂರ ಅನ್ನೂರ್:30]

**ಪ್ರಶ್ನೆ 13. ಮನುಷ್ಯನ ಶತ್ರುಗಳು ಯಾರು?**

1. **ಕೆಡುಕಿಗೆ ಪ್ರೇರೇಪಿಸುವ ಮನಸ್ಸು :** ಅಂದರೆ ಮನುಷ್ಯನ ಮನಸ್ಸು ಮತ್ತು ಮೋಹವು ಸರ್ವಶಕ್ತನಾದ ಅಲ್ಲಾಹನಿಗೆ ಅವಿಧೇಯತೆ ತೋರಲು ಪ್ರೇರೇಪಿಸುವುದನ್ನು ಅನುಸರಿಸುವುದು. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:﴿إِنَّ ٱلنَّفۡسَ لَأَمَّارَةُۢ بِٱلسُّوٓءِ إِلَّا مَا رَحِمَ رَبِّيٓۚ إِنَّ رَبِّي غَفُورٞ رَّحِيمٞ﴾ **"ಖಂಡಿತವಾಗಿಯೂ ಮನಸ್ಸು ದುಷ್ಕರ್ಮವನ್ನು ಪ್ರೇರೇಪಿಸುತ್ತಲೇ ಇರುವಂತದ್ದಾಗಿದೆ . ನನ್ನ ರಬ್‌ಬ್‌ನ ಕರುಣೆಗೆ ಪಾತ್ರವಾದ ಮನಸ್ಸಿನ ಹೊರತು . ಖಂಡಿತವಾಗಿಯೂ ನನ್ನ ರಬ್ಬ್ ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಸೂರ ಯೂಸುಫ್:53]

2.ಶೈತಾನ್: ಶೈತಾನ್ ಮನುಷ್ಯನ ಶತ್ರು . ಮನುಷ್ಯನನ್ನು ದಾರಿ ತಪ್ಪಿಸುವುದು ಮತ್ತು ಕೆಡುಕುಗಳನ್ನು ಮಾಡುವಂತೆ ದುರ್ಬೋಧನೆ ಮಾಡಿ ನರಕವಾಸಿಯಾಗುವಂತೆ ಮಾಡುವುದು ಅವನ ಗುರಿಯಾಗಿದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:﴿وَلَا تَتَّبِعُواْ خُطُوَٰتِ ٱلشَّيۡطَٰنِۚ إِنَّهُۥ لَكُمۡ عَدُوّٞ مُّبِينٌ﴾

**"ಶೈತಾನನ ಹೆಜ್ಜೆಗಳನ್ನು ಅನುಸರಿಸಬೇಡಿ. ನಿಶ್ಚಯವಾಗಿಯೂ ಅವನು ನಿಮ್ಮ ಪ್ರತ್ಯಕ್ಷ ಶತ್ರುವಾಗಿದ್ದಾನೆ."** [ಸೂರ ಅಲ್-ಬಕರ:168].

3. ಕೆಟ್ಟ ಸಂಗಡಿಗರು: ಅಂದರೆ ಕೆಡುಕನ್ನು ಆದೇಶಿಸುವವರು ಮತ್ತು ಒಳಿತನ್ನು ವಿರೋಧಿಸುವವರು. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: ﴿ٱلۡأَخِلَّآءُ يَوۡمَئِذِۢ بَعۡضُهُمۡ لِبَعۡضٍ عَدُوٌّ إِلَّا ٱلۡمُتَّقِينَ﴾ “ಅವರು ಆತ್ಮೀಯ ಮಿತ್ರರು ಪರಸ್ಪರ ಶತ್ರುಗಳಾಗುವರು ; ಭಯಭಕ್ತಿಯಿಂದ ಜೀವಿಸುವವರ ಹೊರತು .” [ಸೂರ ಅಝ್ಝುಖ್ರುಫ್: 67]

## ಪ್ರಶ್ನೆ 14. ಪಶ್ಚಾತ್ತಾಪ ಎಂದರೇನು?

ಉತ್ತರ: ಪಶ್ಚಾತ್ತಾಪ ಎಂದರೆ ಅಲ್ಲಾಹನ ಆಜ್ಞೋಲ್ಲಂಘನೆಯನ್ನು ತೊರೆದು ಅವನ ವಿಧೇಯತೆಗೆ ಮರಳುವುದು.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: ﴿وَإِنِّي لَغَفَّارٌ لِّمَن تَابَ وَءَامَنَ وَعَمِلَ صَٰلِحٗا ثُمَّ ٱهۡتَدَىٰ﴾ “ಪಶ್ಚಾತ್ತಾಪಪಡುವವರು, ವಿಶ್ವಾಸವಿಡುವವರು ಮತ್ತು ಸತ್ಕರ್ಮಗಳನ್ನು ಮಾಡುವವರಿಗೆ ಹಾಗೂ ನಂತರ ಸನ್ಮಾರ್ಗದಲ್ಲಿ ನೆಲೆನಿಲ್ಲುವವರಿಗೆ ನಾನು ಅತ್ಯಂತ ಕ್ಷಮಿಸುವವನಾಗಿದ್ದೇನೆ. [ಸೂರ ತ್ವಾಹಾ:82].

## ಪ್ರಶ್ನೆ 15. ಸರಿಯಾದ ಪಶ್ಚಾತ್ತಾಪದ ಷರತ್ತುಗಳು ಯಾವುವು?

**ಉತ್ತರ:** 1. ಪಾಪವನ್ನು ತ್ಯಜಿಸುವುದು.

2. ಆಗಿ ಹೋದದ್ದಕ್ಕೆ ವಿಷಾದಿಸುವುದು.

3. ಅದನ್ನು ಮುಂದುವರಿಸುವುದಿಲ್ಲವೆಂದು ದೃಢ ನಿರ್ಧಾರ ತಳೆಯುವುದು.

4. ಜನರ ಹಕ್ಕುಗಳನ್ನು ಅವರಿಗೆ ಮರಳಿಸುವುದು.

**ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ**:

﴿وَٱلَّذِينَ إِذَا فَعَلُواْ فَٰحِشَةً أَوۡ ظَلَمُوٓاْ أَنفُسَهُمۡ ذَكَرُواْ ٱللَّهَ فَٱسۡتَغۡفَرُواْ لِذُنُوبِهِمۡ وَمَن يَغۡفِرُ ٱلذُّنُوبَ إِلَّا ٱللَّهُ وَلَمۡ يُصِرُّواْ عَلَىٰ مَا فَعَلُواْ وَهُمۡ يَعۡلَمُونَ﴾

“ಏನಾದರೂ ನೀಚಕೃತ್ಯವನ್ನು ಮಾಡಿದರೆ ಅಥವಾ ಸ್ವತಃ ತಮ್ಮೊಂದಿಗೇ ಅನ್ಯಾಯವೆಸಗಿದರೆ ಅಲ್ಲಾಹನನ್ನು ಸ್ಮರಿಸಿ ತಮ್ಮ ಪಾಪಗಳಿಗೆ ಕ್ಷಮೆ ಬೇಡುವವರಿಗೆ. ಅಲ್ಲಾಹನ ಹೊರತು ಪಾಪಗಳನ್ನು

**ಕ್ಷಮಿಸುವವನು ಇನ್ನಾರಿರುವನು? ತಿಳಿದವರಾಗಿದ್ದೂ ಸಹ ತಾವು ಮಾಡಿದ (ನೀಚ)ಕೃತ್ಯಗಳಲ್ಲಿ ಅವರು ಅಚಲರಾಗಿ ನಿಲ್ಲಲಾರರು."** [ಸೂರ ಆಲು ಇಮ್ರಾನ್:135].

**ಪ್ರಶ್ನೆ 16. ಪ್ರವಾದಿ ﷺ ರವರ ಮೇಲೆ ಸ್ವಲಾತ್ ಹೇಳುವುದು ಎಂದರೇನು?**

**ಉತ್ತರ:** ಸ್ವಲಾತ್ ಹೇಳುವುದು ಎಂದರೆ ಉಪರಿಲೋಕದಲ್ಲಿ ಅಲ್ಲಾಹು ತನ್ನ ಪ್ರವಾದಿಯ (ಸ) ಬಗ್ಗೆ ಪ್ರಶಂಸಿಸಲು ಪ್ರಾರ್ಥಿಸುವುದು.

**ಪ್ರಶ್ನೆ 17. ಸುಬ್‌ಹಾನಲ್ಲಾಹ್ ಎಂದರೇನು?**

**ಉತ್ತರ:** ಸುಬ್‌ಹಾನಲ್ಲಾಹ್ ಎಂದರೆ ಅಲ್ಲಾಹನನ್ನು ಎಲ್ಲಾ ರೀತಿಯ ಅಪೂರ್ಣತೆ, ನ್ಯೂನತೆ ಮತ್ತು ಕೆಡುಕುಗಳಿಂದ ಪರಿಶುದ್ಧಿಗೊಳಿಸುವುದು.

**ಪ್ರಶ್ನೆ 18. ಅಲ್‌ಹಮ್ದುಲಿಲ್ಲಾಹ್ ಎಂದರೇನು?**

**ಉತ್ತರ:** ಅಲ್‌ಹಮ್ದುಲಿಲ್ಲಾಹ್ ಎಂದರೆ ಅಲ್ಲಾಹನನ್ನು ಪ್ರಶಂಸಿಸುವುದು ಮತ್ತು ಪರಿಪೂರ್ಣತೆಯ ಗುಣಲಕ್ಷಣಗಳ ಮೂಲಕ ಅವನನ್ನು ಬಣ್ಣಿಸುವುದು.

**ಪ್ರಶ್ನೆ 19. ಅಲ್ಲಾಹು ಅಕ್ಬರ್ ಎಂದರೇನು?**

**ಉತ್ತರ:** ಅಲ್ಲಾಹು ಅಕ್ಬರ್ ಎಂದರೆ ಅಲ್ಲಾಹು ಎಲ್ಲಾ ವಸ್ತುಗಳಿಗಿಂತ ದೊಡ್ಡವನು, ಶ್ರೇಷ್ಠನು ಮತ್ತು ಶಕ್ತಿವಂತನು ಎಂದು ಹೇಳುವುದು.

**ಪ್ರಶ್ನೆ 20. ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್ ಎಂದರೇನು?**

**ಉತ್ತರ:** ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್ ಎಂದರೆ ಅಲ್ಲಾಹನ ಶಕ್ತಿ -ಸಾಮರ್ಥ್ಯವಿಲ್ಲದೆ ಮನುಷ್ಯನಿಗೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಹೊರಳುವ ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ.

**ಪ್ರಶ್ನೆ 21. ಅಸ್ತಗ್ಫಿರುಲ್ಲಾಹ್ ಎಂದರೇನು?**

**ಉತ್ತರ:** ಅಸ್ತಗ್ಫಿರುಲ್ಲಾಹ್ ಎಂದರೆ ದಾಸನು ಅಲ್ಲಾಹನೊಡನೆ ತನ್ನ ಪಾಪಗಳನ್ನು ಅಳಿಸಲು ಮತ್ತು ನ್ಯೂನತೆಗಳನ್ನು ಮರೆಮಾಚಲು ಬೇಡುವುದು.

*******

# ಸಮಾಪ್ತಿ

**ಅಂತಿಮವಾಗಿ:**

ಮಕ್ಕಳು ಸರಿಯಾದ ಮಾತು , ಕರ್ಮ ಮತ್ತು ನಂಬಿಕೆಯೊಡನೆ ಬೆಳೆಯಲು ತಂದೆ-ತಾಯಿಗಳು ಈ ಪ್ರಶ್ನೆಗಳನ್ನು ಮಕ್ಕಳಿಗೆ ವಿವರಿಸಿಕೊಡಬೇಕು. ಮಕ್ಕಳಿಗೆ ಆಹಾರ ಮತ್ತು ಬಟ್ಟೆ - ಬರೆಗಳನ್ನು ನೀಡುವುದಕ್ಕಿಂತಲೂ ಈ ತರಬೇತಿಯು ಹೆಚ್ಚು ಮುಖ್ಯವಾಗಿದೆ.

﴿يَٰٓأَيُّهَا ٱلَّذِينَ ءَامَنُواْ قُوٓاْ أَنفُسَكُمۡ وَأَهۡلِيكُمۡ نَارٗا وَقُودُهَا ٱلنَّاسُ وَٱلۡحِجَارَةُ عَلَيۡهَا مَلَٰٓئِكَةٌ غِلَاظٞ شِدَادٞ لَّا يَعۡصُونَ ٱللَّهَ مَآ أَمَرَهُمۡ وَيَفۡعَلُونَ مَا يُؤۡمَرُونَ٦﴾

**"ಓ ಸತ್ಯವಿಶ್ವಾಸಿಗಳೇ ! ಮನುಷ್ಯರನ್ನು ಮತ್ತು ಕಲ್ಲುಗಳನ್ನು ಇಂಧನವಾಗಿ ಬಳಸುವ ನರಕಾಗ್ನಿಯಿಂದ ಸ್ವತಃ ನಿಮ್ಮನ್ನೂ, ನಿಮ್ಮ ಕುಟುಂಬದವರನ್ನೂ ರಕ್ಷಿಸಿರಿ . ಅದರ ಮೇಲ್ನೋಟ ವಹಿಸಲು ಕಠೋರ ಸ್ವಭಾವದವರೂ , ಅತಿ ಬಲಿಷ್ಠರೂ ಆಗಿರುವ ಮಲಕ್‌ಗಳಿರುವರು . ಅಲ್ಲಾಹು ಅವರೊಂದಿಗೆ ಆಜ್ಞಾಪಿಸಿದ ಯಾವುದೇ ವಿಷಯವನ್ನೂ ಅವರು ಧಿಕ್ಕರಿಸಲಾರರು . ಅವರೊಂದಿಗೆ ಆಜ್ಞಾಪಿಸಲಾಗುವುದನ್ನೇ ಅವರು ಪಾಲಿಸುವರು."** [ಸೂರ ಅತ್ತಹ್ರೀಮ್:6].

ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು :**"ಪುರುಷನು ತನ್ನ ಕುಟುಂಬದ ಮೇಲೆ ಹೊಣೆಗಾರಿಕೆಯುಳ್ಳವನಾಗಿದ್ದಾನೆ. ಅವನ ಹೊಣೆಗಾರಿಕೆಯ ಬಗ್ಗೆ ಅವನಲ್ಲಿ ಪ್ರಶ್ನಿಸಲಾಗುವುದು. ಮಹಿಳೆ ತನ್ನ ಗಂಡನ ಮನೆಯವರ ಮೇಲೆ ಹೊಣೆಗಾರಿಕೆಯುಳ್ಳವಳಾಗಿದ್ದಾಳೆ. ಅವಳ ಹೊಣೆಗಾರಿಕೆಯ ಬಗ್ಗೆ ಅವಳಲ್ಲಿ ಪ್ರಶ್ನಿಸಲಾಗುವುದು."** [ಬುಖಾರಿ ಮತ್ತು ಮುಸ್ಲಿಂ]

ನಮ್ಮ ಪ್ರವಾದಿ ಮುಹಮ್ಮದ್ ﷺ ರವರ ಮೇಲೆ , ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ.

# ಪೀಠಿಕೆ

## ಅಕೀದ ವಿಭಾಗ

ಪ್ರಶ್ನೆ 1. ನಿನ್ನ ರಬ್ಬ್ ಯಾರು? ....................................................................5

ಪ್ರಶ್ನೆ 2. ನಿನ್ನ ಧರ್ಮ ಯಾವುದು? ............................................................5

ಪ್ರಶ್ನೆ 3. ನಿನ್ನ ಪ್ರವಾದಿ ಯಾರು? .............................................................6

ಪ್ರಶ್ನೆ 4. ಕಲಿಮತು-ತೌಹೀದ್ ಅನ್ನು ಮತ್ತು ಅದರ ಅರ್ಥವನ್ನು ತಿಳಿಸಿ? ............................6

ಪ್ರಶ್ನೆ 5. ಸರ್ವಶಕ್ತನಾದ ಅಲ್ಲಾಹು ಎಲ್ಲಿದ್ದಾನೆ? .......................................................6

ಪ್ರಶ್ನೆ 6. ಮುಹಮ್ಮದ್ ﷺ ಅಲ್ಲಾಹನ ಸಂದೇಶವಾಹಕರು ಎಂಬ ಸಾಕ್ಷ್ಯದ ಅರ್ಥವೇನು? ...7

ಪ್ರಶ್ನೆ 7. ಸರ್ವಶಕ್ತನಾದ ಅಲ್ಲಾಹು ನಮ್ಮನ್ನು ಏಕೆ ಸೃಷ್ಟಿಸಿದನು? ..................................8

ಪ್ರಶ್ನೆ 8. ಆರಾಧನೆ ಎಂದರೇನು? ..............................................................8

ಪ್ರಶ್ನೆ 9. ನಮ್ಮ ಅತಿದೊಡ್ಡ ಕರ್ತವ್ಯ ಯಾವುದು? ....................................................8

ಪ್ರಶ್ನೆ 10. ತೌಹೀದಿನ ವಿಧಗಳು ಯಾವುವು? ..........................................................9

ಪ್ರಶ್ನೆ 11. ಅತಿ ದೊಡ್ಡ ಪಾಪ ಯಾವುದು? ............................................................9

ಪ್ರಶ್ನೆ 12. ಶಿರ್ಕ್ ಮತ್ತು ಅದರ ವಿಧಗಳನ್ನು ತಿಳಿಸಿ. ..................................................10

ಪ್ರಶ್ನೆ 13. ಸರ್ವಶಕ್ತನಾದ ಅಲ್ಲಾಹನನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಅಗೋಚರ ಜ್ಞಾನವಿದೆಯೇ? ..........................................................................10

ಪ್ರಶ್ನೆ 14. ಈಮಾನಿನ ಸ್ತಂಭಗಳು ಎಷ್ಟು? ............................................................11

ಪ್ರಶ್ನೆ 15. ಈಮಾನಿನ ಸ್ತಂಭಗಳನ್ನು ವಿವರಿಸಿ. .....................................................11

ಪ್ರಶ್ನೆ 16. ಕುರ್ಆನ್ ಎಂದರೇನು? ...........................................................15

ಪ್ರಶ್ನೆ 17. ಸುನ್ನತ್ ಎಂದರೇನು? ....................................................................15

ಪ್ರಶ್ನೆ 18. ಬಿದ್‌ಅತ್ (ನೂತನವಾದ) ಎಂದರೇನು? ನಾವು ಅದನ್ನು ಸ್ವೀಕರಿಸಬಹುದೇ? ....15

ಪ್ರಶ್ನೆ 19. ವಲಾ ( ನಿಷ್ಠೆ) ಮತ್ತು ಬರಾ (ನಿರಾಕರಣೆ) ದ ವಿಶ್ವಾಸವನ್ನು ವಿವರಿಸಿ? ...........16

ಪ್ರಶ್ನೆ 20. ಅಲ್ಲಾಹು ಇಸ್ಲಾಮ್ ಅಲ್ಲದ ಧರ್ಮವನ್ನು ಸ್ವೀಕರಿಸುತ್ತಾನೆಯೇ? ..................... 17

ಪ್ರಶ್ನೆ 21. ಸತ್ಯನಿಷೇಧವು ಮಾತು, ಕ್ರಿಯೆ ಮತ್ತು ನಂಬಿಕೆಯಲ್ಲಿ ಸಂಭವಿಸುತ್ತದೆ . ಇದಕ್ಕೆ ಉದಾಹರಣೆ ನೀಡಿ. ..........................................................................................17

ಪ್ರಶ್ನೆ 22. ಕಪಟವಿಶ್ವಾಸ ಎಂದರೇನು? ಅದರ ವಿಧಗಳು ಯಾವುವು? ...........................18

ಪ್ರಶ್ನೆ 23. ಪ್ರವಾದಿಗಳಲ್ಲಿ ಮತ್ತು ಸಂದೇಶವಾಹಕರಲ್ಲಿ ಕೊನೆಯವರು ಯಾರು? ...............19

ಪ್ರಶ್ನೆ 24. ಮುಅಜಿಝು (ಪವಾಡ) ಎಂದರೇನು? ..................................................19

ಪ್ರಶ್ನೆ 25. ಸಹಾಬಿಗಳು (ಸಹಚರರು) ಎಂದರೆ ಯಾರು? ನಾನು ಅವರನ್ನು ಪ್ರೀತಿಸಬೇಕೇ?19

ಪ್ರಶ್ನೆ 26. ಉಮ್ಮಹಾತುಲ್ ಮೂಮಿನೀನ್ (ಸತ್ಯವಿಶ್ವಾಸಿಗಳ ಮಾತೆಯರು) ಎಂದರೆ ಯಾರು? ............................................................................................20

ಪ್ರಶ್ನೆ 27. ಪ್ರವಾದಿ ﷺ ಕುಟುಂಬಕ್ಕೆ ನಮ್ಮ ಮೇಲಿರುವ ಹಕ್ಕುಗಳು ಯಾವುವು? ..........20

ಪ್ರಶ್ನೆ 28. ಮುಸ್ಲಿಮ್ ಆಡಳಿತಗಾರರೊಂದಿಗೆ ನಮಗಿರುವ ಕರ್ತವ್ಯಗಳೇನು? ................21

ಪ್ರಶ್ನೆ 29. ಸತ್ಯವಿಶ್ವಾಸಿಗಳ ವಾಸಸ್ಥಾನ ಯಾವುದು? ............................................21

ಪ್ರಶ್ನೆ 30. ಸತ್ಯನಿಷೇಧಿಗಳ ವಾಸಸ್ಥಾನ ಯಾವುದು? ............................................21

ಪ್ರಶ್ನೆ 31. ಭಯ ಎಂದರೇನು? ನಿರೀಕ್ಷೆ ಎಂದರೇನು? ಪುರಾವೆ ಸಹಿತ ತಿಳಿಸಿ. ..............21

ಪ್ರಶ್ನೆ32. ಸರ್ವಶಕ್ತನಾದ ಅಲ್ಲಾಹನ ಕೆಲವು ಹೆಸರುಗಳು ಮತ್ತು ಗುಣಲಕ್ಷಣಗಳನ್ನು ಉಲ್ಲೇಖಿಸಿ.... 22

ಪ್ರಶ್ನೆ33. ಈ ಹೆಸರುಗಳನ್ನು ವಿವರಿಸಿ? ..............................................................22

ಪ್ರಶ್ನೆ 34. ಮುಸ್ಲಿಮ್ ವಿದ್ವಾಂಸರೊಂದಿಗೆ ನಮಗಿರುವ ಕರ್ತವ್ಯಗಳೇನು? ....................23

ಪ್ರಶ್ನೆ 35. ಅಲ್ಲಾಹನ ಔಲಿಯಾಗಳು (ಆಪ್ತಮಿತ್ರರು) ಎಂದರೆ ಯಾರು? ..........................24

ಪ್ರಶ್ನೆ 36. ಈಮಾನ್ ಎಂದರೆ ಮಾತು ಮತ್ತು ಕ್ರಿಯೆಯೇ? ..........................................24

ಪ್ರಶ್ನೆ 37. ಈಮಾನ್ ಹೆಚ್ಚು ಕಡಿಮೆಯಾಗುತ್ತದೆಯೇ? ................................................24

ಪ್ರಶ್ನೆ 38. ಇಹ್ಸಾನ್ ಎಂದರೇನು? .............................................................................25

ಪ್ರಶ್ನೆ 39. ಸರ್ವಶಕ್ತನಾದ ಅಲ್ಲಾಹನು ಕರ್ಮಗಳನ್ನು ಯಾವಾಗ ಸ್ವೀಕರಿಸುತ್ತಾನೆ? ...........25

ಪ್ರಶ್ನೆ 40. ಸರ್ವಶಕ್ತನಾದ ಅಲ್ಲಾಹನ ಮೇಲೆ ತವಕ್ಕುಲ್ (ಭರವಸೆ) ಮಾಡುವುದು ಎಂದರೇನು? ......25

ಪ್ರಶ್ನೆ 41. ಒಳ್ಳೆಯದನ್ನು ಆದೇಶಿಸುವುದು ಮತ್ತು ಕೆಟ್ಟದ್ದನ್ನು ವಿರೋಧಿಸುವುದು ಎಂದರೇನು? ..........26

ಪ್ರಶ್ನೆ 42. ಅಹ್ಲುಸ್ಸುನ್ನ ವಲ್-ಜಮಾಅ ಎಂದರೆ ಯಾರು? ..........................................26

## ಕರ್ಮಶಾಸ್ತ್ರ ವಿಭಾಗ

- ಪ್ರಶ್ನೆ 1. ಶುದ್ಧೀಕರಣ ಎಂದರೇನು? .............................................................26
- ಪ್ರಶ್ನೆ 2. ಹೊಲಸು ತಾಗಿದರೆ ಅದನ್ನು ಶುಚೀಕರಿಸುವುದು ಹೇಗೆ? ...........................27
- ಪ್ರಶ್ನೆ 3. ವುದೂವಿನ ಶ್ರೇಷ್ಠತೆಗಳನ್ನು ವಿವರಿಸಿ. ..................................................27
- ಪ್ರಶ್ನೆ4. ನೀವು ಹೇಗೆ ವುದೂ ಮಾಡುತ್ತೀರಿ? ........................................................28
- ಪ್ರಶ್ನೆ 5. ವುದೂವಿನ ಕಡ್ಡಾಯಗಳು ಎಂದರೇನು? ಅವು ಎಷ್ಟಿವೆ? .............................29
- ಪ್ರಶ್ನೆ 6. ವುದೂವಿನ ಸುನ್ನತ್‌ಗಳು ಎಂದರೇನು? ಅವು ಎಷ್ಟಿವೆ? ..............................29
- ಪ್ರಶ್ನೆ 7. ವುದೂವನ್ನು ಅಸಿಂಧುಗೊಳಿಸುವ ಕಾರ್ಯಗಳನ್ನು ತಿಳಿಸಿ? .........................30
- ಪ್ರಶ್ನೆ 8. ತಯಮ್ಮುಮ್ ಎಂದರೇನು? ...........................................................31
- ಪ್ರಶ್ನೆ 9. ತಯಮ್ಮುಮ್ ಮಾಡುವುದು ಹೇಗೆ? .....................................................31
- ಪ್ರಶ್ನೆ 10. ತಯಮ್ಮುಮ್ ಅನ್ನು ಅಸಿಂಧುಗೊಳಿಸುವ ಕಾರ್ಯಗಳು ಯಾವುವು? .........31
- ಪ್ರಶ್ನೆ 11. ಪಾದರಕ್ಷೆ ಮತ್ತು ಕಾಲ್ಚೀಲಗಳು ಎಂದರೇನು? ಅವುಗಳ ಮೇಲೆ ಸವರಬಹುದೇ? ......31
- ಪ್ರಶ್ನೆ 12. ಪಾದರಕ್ಷೆಗಳ ಮೇಲೆ ಸವರುವುದರ ಯುಕ್ತಿಯನ್ನು ತಿಳಿಸಿ? .......................31

- ಪ್ರಶ್ನೆ 13. ಪಾದರಕ್ಷೆಗಳ ಮೇಲೆ ಸವರುವುದು ಸಿಂಧುವಾಗಲು ಇರುವ ಷರತ್ತುಗಳು ಯಾವುವು?..32
- ಪ್ರಶ್ನೆ 14. ಪಾದರಕ್ಷೆಗಳ ಮೇಲೆ ಸವರುವುದು ಹೇಗೆ? ............................................32
- ಪ್ರಶ್ನೆ15. ಪಾದರಕ್ಷೆಗಳ ಮೇಲೆ ಸವರುವುದನ್ನು ಏನೆಲ್ಲಾ ಅಸಿಂಧುಗೊಳಿಸುತ್ತದೆ?............32
- ಪ್ರಶ್ನೆ 16. ನಮಾಝ್ ಎಂದರೇನು? ..............................................................33
- ಪ್ರಶ್ನೆ 17. ನಮಾಝ್‌ನ ವಿಧಿಯೇನು? ............................................................33
- ಪ್ರಶ್ನೆ 18. ನಮಾಝ್ ತೊರೆಯುವುದರ ವಿಧಿಯೇನು? ..........................................33
- ಪ್ರಶ್ನೆ 19. ಹಗಲು ಮತ್ತು ರಾತ್ರಿ ಒಬ್ಬ ಮುಸಲ್ಮಾನನಿಗೆ ಎಷ್ಟು ನಮಾಝ್‌ಗಳು ಕಡ್ಡಾಯವಾಗಿವೆ? ಪ್ರತಿ ನಮಾಝಿಗೆ ಎಷ್ಟು ರಕ್‌ಅತ್‌ಗಳಿವೆ? ...................................34
- ಪ್ರಶ್ನೆ 20. ನಮಾಝಿನ ಷರತ್ತುಗಳನ್ನು ತಿಳಿಸಿ? .....................................................34
- ಪ್ರಶ್ನೆ 21. ನಮಾಝಿಗೆ ಎಷ್ಟು ಸ್ತಂಭಗಳಿವೆ? .......................................................34
- ಪ್ರಶ್ನೆ 22. ನಮಾಝ್‌ನ ಕಡ್ಡಾಯ ಕಾರ್ಯಗಳನ್ನು ತಿಳಿಸಿ? .......................................36
- ಪ್ರಶ್ನೆ 23. ನಮಾಝ್‌ನ ಸುನ್ನತ್‌ಗಳು ಯಾವುವು? ................................................36
- ಪ್ರಶ್ನೆ 24. ನಮಾಝನ್ನು ಅಸಿಂಧುಗೊಳಿಸುವ ಕಾರ್ಯಗಳು ಯಾವುವು? .....................38
- ಪ್ರಶ್ನೆ 25. ಮುಸ್ಲಿಂ ಹೇಗೆ ನಮಾಝ್ ಮಾಡಬೇಕು? ..............................................39
- ಪ್ರಶ್ನೆ 26: ನಮಾಝ್ ನಿರ್ವಹಿಸಿದ ನಂತರ ಪಠಿಸಬೇಕಾದ ಪ್ರಾರ್ಥನೆಗಳು ಯಾವುವು?..................................................................................................44
- ಪ್ರಶ್ನೆ 27. ರವಾತಿಬ್ ಸುನ್ನತ್‌ಗಳು ಯಾವುವು? ಅವುಗಳ ಶ್ರೇಷ್ಠತೆಯೇನು? ..................46
- ಪ್ರಶ್ನೆ 28. ವಾರದ ಶ್ರೇಷ್ಠ ದಿನಗಳು ಯಾವುವು? ..................................................47
- ಪ್ರಶ್ನೆ 29. ಜುಮುಅ ನಮಾಝಿನ ವಿಧಿಯೇನು? ....................................................47
- ಪ್ರಶ್ನೆ 30. ಜುಮುಅ ನಮಾಝಿಗೆ ಎಷ್ಟು ರಕ್‌ಅತ್‌ಗಳಿವೆ? ........................................48
  - ಪ್ರಶ್ನೆ 31. ಜುಮುಅ ನಮಾಝನ್ನು ಬಿಟ್ಟುಬಿಡಲು ಅನುಮತಿ ಇದೆಯೇ? .................48
  - ಪ್ರಶ್ನೆ 32. ಜುಮುಅ ದಿನದ ಸುನ್ನತ್‌ಗಳನ್ನು ಉಲ್ಲೇಖಿಸಿ? ...................................48

- ಪ್ರಶ್ನೆ 33. ಜಮಾಅತ್ ನಮಾಝ್‌ನ ಶ್ರೇಷ್ಠತೆಯನ್ನು ಉಲ್ಲೇಖಿಸಿ? ......................48
- ಪ್ರಶ್ನೆ 34: ನಮಾಝ್‌ನಲ್ಲಿ ಭಯ-ಭಕ್ತಿಯಿರುವುದು ಎಂದರೇನು? .........................49
- ಪ್ರಶ್ನೆ 35. ಝಕಾತ್ ಎಂದರೇನು? ..............................................................49
- ಪ್ರಶ್ನೆ 36. ಐಚ್ಛಿಕ ದಾನ ಎಂದರೇನು? .........................................................49
- ಪ್ರಶ್ನೆ 37: ಉಪವಾಸ ಎಂದರೇನು? ..............................................................50
- ಪ್ರಶ್ನೆ 38. ರಮದಾನ್ ತಿಂಗಳ ಉಪವಾಸದ ಶ್ರೇಷ್ಠತೆಯನ್ನು ತಿಳಿಸಿ? .................50
- ಪ್ರಶ್ನೆ 39. ರಮದಾನ್ ಅಲ್ಲದ ಬೇರೆ ತಿಂಗಳುಗಳ ಉಪವಾಸದ ಶ್ರೇಷ್ಠತೆಯನ್ನು ತಿಳಿಸಿ? ....51
- ಪ್ರಶ್ನೆ 40. ಉಪವಾಸವನ್ನು ಅಸಿಂಧುಗೊಳಿಸುವ ಕಾರ್ಯಗಳನ್ನು ತಿಳಿಸಿ? ............51
- ಪ್ರಶ್ನೆ 41. ಉಪವಾಸದ ಸುನ್ನತ್‌ಗಳು ಯಾವುವು? ........................................51
- ಪ್ರಶ್ನೆ 42: ಹಜ್ಜ್ ಎಂದೇನು? ...............................................................52
- ಪ್ರಶ್ನೆ 43. ಹಜ್ಜ್‌ಗೆ ಎಷ್ಟು ಸ್ತಂಭಗಳಿವೆ? ......................................................52
- ಪ್ರಶ್ನೆ 44. ಹಜ್ಜ್‌ನ ಶ್ರೇಷ್ಠತೆಗಳನ್ನು ವಿವರಿಸಿ. ...............................................52
- ಪ್ರಶ್ನೆ 45. ಉಮ್ರಾ ಎಂದರೇನು? ..............................................................53
- ಪ್ರಶ್ನೆ 46. ಉಮ್ರಾದ ಸ್ತಂಭಗಳನ್ನು ವಿವರಿಸಿ? ..............................................53
- ಪ್ರಶ್ನೆ 47. ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಎಂದರೇನು? ................................53

## ಪ್ರವಾದಿಯವರ ಜೀವನಚರಿತ್ರೆ ವಿಭಾಗ

- ಪ್ರಶ್ನೆ 1. ನಮ್ಮ ಪ್ರವಾದಿ ಮುಹಮ್ಮದ್ ﷺ ರ ವಂಶ ಯಾವುದು? ...................54
- ಪ್ರಶ್ನೆ 2. ನಮ್ಮ ಪ್ರವಾದಿಯ ತಾಯಿಯ ಹೆಸರೇನು? .....................................54
- ಪ್ರಶ್ನೆ 3. ಅವರ ತಂದೆ ಯಾವಾಗ ಮರಣ ಹೊಂದಿದರು? ................................54
- ಪ್ರಶ್ನೆ 4. ಪ್ರವಾದಿ ﷺ ಯಾವಾಗ ಜನಿಸಿದರು? ........................................54
- ಪ್ರಶ್ನೆ 5. ಅವರು ಯಾವ ಪಟ್ಟಣದಲ್ಲಿ ಜನಿಸಿದರು? ........................................54

- ಪ್ರಶ್ನೆ6:ಅವರ ತಾಯಿಯಲ್ಲದೆ ಅವರಿಗೆ ಸ್ತನಪಾನ ಮತ್ತು ಪಾಲನೆ ಪೋಷಣೆ ಮಾಡಿದವರು ಯಾರು? ....54
- ಪ್ರಶ್ನೆ 7. ಅವರ ತಾಯಿ ಯಾವಾಗ ಮರಣ ಹೊಂದಿದರು? ....55
- ಪ್ರಶ್ನೆ 8. ಅವರ ಅಜ್ಜ ಅಬ್ದುಲ್ ಮುತ್ತಲಿಬ್‌ರ ಮರಣದ ನಂತರ ಅವರನ್ನು ಯಾರು ಪೋಷಿಸಿದರು? ....55
- ಪ್ರಶ್ನೆ 9. ಅವರು ತಮ್ಮ ಚಿಕ್ಕಪ್ಪನೊಂದಿಗೆ ಯಾವಾಗ ಸಿರಿಯಾಗೆ ಪ್ರಯಾಣ ಮಾಡಿದರು? ....55
- ಪ್ರಶ್ನೆ 10. ಅವರ ಎರಡನೇ ಪ್ರಯಾಣ ಯಾವಾಗ ಆಯಿತು? ....55
- ಪ್ರಶ್ನೆ 11. ಖುರೈಷರು ಕಾಬಾವನ್ನು ಯಾವಾಗ ಪುನರ್ ನಿರ್ಮಾಣ ರ್ಮಾಣ ಮಾಡಿದರು? ....55
- ಪ್ರಶ್ನೆ 12. ಅವರನ್ನು ಪ್ರವಾದಿಯಾಗಿ ನಿಯುಕ್ತಿಗೊಳಿಸುವಾಗ ಅವರ ವಯಸ್ಸು ಎಷ್ಟು ? ಅವರನ್ನು ಯಾರೆಡೆಗೆ ನಿಯುಕ್ತಿಗೊಳಿಸಲಾಯಿತು? ....56
- ಪ್ರಶ್ನೆ 13. ಮೊತ್ತಮೊದಲು ದಿವ್ಯವಾಣಿ ಪ್ರಾರಂಭವಾದದ್ದು ಹೇಗೆ? ....56
- ಪ್ರಶ್ನೆ 14. ದಿವ್ಯವಾಣಿ ಅವತೀರ್ಣದ ಮೊದಲು ಅವರ ಸ್ಥಿತಿ ಹೇಗಿತ್ತು? ಮೊತ್ತಮೊದಲು ಅವರಿಗೆ ದಿವ್ಯವಾಣಿ ಅವತೀರ್ಣವಾದದ್ದು ಯಾವಾಗ? ....56
- ಪ್ರಶ್ನೆ15.ಮೊತ್ತಮೊದಲುಅವತೀರ್ಣವಾದ ಕುರ್‌ಆನ್ ಸೂಕ್ತಿ ಯಾವುದು? ....56
- ಪ್ರಶ್ನೆ16. ಅವರ ಸಂದೇಶದಲ್ಲಿ ಮೊತ್ತಮೊದಲು ವಿಶ್ವಾಸವಿಟ್ಟದ್ದು ಯಾರು? ....57
- ಪ್ರಶ್ನೆ 17. ಅವರು ಇಸ್ಲಾಮಿನೆಡೆಗೆ ಹೇಗೆ ಆಮಂತ್ರಿಸಿದರು? ....57
- ಪ್ರಶ್ನೆ 18. ಬಹಿರಂಗವಾಗಿ ಮತಪ್ರಚಾರ ಮಾಡಲು ಆರಂಭಿಸಿದ ನಂತರ ಪ್ರವಾದಿ ﷺ ಮತ್ತು ಅವರ ಅನುಯಾಯಿಗಳ ಸ್ಥಿತಿ ಹೇಗಿತ್ತು? ....57
- ಪ್ರಶ್ನೆ19.ಪ್ರವಾದಿ ﷺರ ಪ್ರವಾದಿತ್ವದ ಹತ್ತನೇ ವರ್ಷದಲ್ಲಿ ಯಾರು ನಿಧನರಾದರು? ...58

- ಪ್ರಶ್ನೆ 20. ಇಸ್ರಾ (ರಾತ್ರಿಯ ಪ್ರಯಾಣ) ಮತ್ತು ಮಿ'ಅರಾಜ್ (ಆಕಾಶಯಾನ) ಯಾವಾಗ ಸಂಭವಿಸಿತು? ....................................................................................58
- ಪ್ರಶ್ನೆ 21. ಪ್ರವಾದಿ ﷺ ಮಕ್ಕಾದ ಹೊರಗಿನ ಜನರನ್ನು ಹೇಗೆ ಆಹ್ವಾನಿಸುತ್ತಿದ್ದರು? .....58
- ಪ್ರಶ್ನೆ22.ಪ್ರವಾದಿ ﷺ ಮಕ್ಕಾದಲ್ಲಿ ಮತಪ್ರಚಾರ ಮಾಡುತ್ತಾ ಎಷ್ಟು ವರ್ಷಗಳ ಕಾಲ ತಂಗಿದ್ದರು? ......................................................................................58
- ಪ್ರಶ್ನೆ 23: ಪ್ರವಾದಿ(ಸ) ಎಲ್ಲಿಗೆ ವಲಸೆ ಹೋದರು? ............................................59
- ಪ್ರಶ್ನೆ 24. ಅವರು ಮದೀನಾದಲ್ಲಿ ಎಷ್ಟು ಸಮಯ ಇದ್ದರು? ...................................59
- ಪ್ರಶ್ನೆ 25. ಮದೀನಾದಲ್ಲಿ ಅವರ ಮೇಲೆ ಕಡ್ಡಾಯಗೊಳಿಸಲಾದ ಇಸ್ಲಾಮಿನ ಕಾನೂನುಗಳು ಯಾವುವು? ......................................................................................59
- ಪ್ರಶ್ನೆ 26. ಪ್ರವಾದಿ ﷺ ರ ಪ್ರಮುಖ ಯುದ್ಧಗಳು ಯಾವುವು? ............................59
- ಪ್ರಶ್ನೆ 27. ಕೊನೆಯದಾಗಿ ಅವತೀರ್ಣವಾದ ಕುರ್‌ಆನಿನ ಸೂಕ್ತಿ ಯಾವುದು? .............59
- ಪ್ರಶ್ನೆ28: ಪ್ರವಾದಿ ﷺ ಯಾವಾಗ ನಿಧನರಾದರು? ಆಗ ಅವರ ವಯಸ್ಸು ಎಷ್ಟಾಗಿತ್ತು? 60
- ಪ್ರಶ್ನೆ 29: ಪ್ರವಾದಿ ﷺ ರ ಪತ್ನಿಯರನ್ನು ಹೆಸರಿಸಿ? ..........................................60
- ಪ್ರಶ್ನೆ30. ಪ್ರವಾದಿ ﷺ ರಿಗೆ ಎಷ್ಟು ಮಕ್ಕಳು? ..................................................60
- ಪ್ರಶ್ನೆ 31. ಪ್ರವಾದಿﷺ ರ ಕೆಲವು ಜನ್ಮಜಾತ ಗುಣಲಕ್ಷಣಗಳನ್ನು ಉಲ್ಲೇಖಿಸಿ? ........61
- ಪ್ರಶ್ನೆ32. ಪ್ರವಾದಿ ﷺ ತನ್ನ ಸಮುದಾಯವನ್ನು ಯಾವುದರ ಮೇಲೆ ಬಿಟ್ಟಗಲಿದರು? .61

**ತಫ್ಸೀರ್ (ಕುರ್‌ಆನ್ ವ್ಯಾಖ್ಯಾನ) ವಿಭಾಗ**

- ಪ್ರಶ್ನೆ 1. ಸೂರಃ ಅಲ್-ಫಾತಿಹಾವನ್ನು ಓದಿರಿ ಮತ್ತು ವಿವರಿಸಿರಿ? ..........,..........62
- ಪ್ರಶ್ನೆ 2. ಸೂರ ಅಝ್ಝುಲ್‌ಝುಲ ಓದಿ ಮತ್ತು ಅದನ್ನು ವಿವರಿಸಿ? ................,.......64
- ಪ್ರಶ್ನೆ 3. ಸೂರ ಅಲ್-ಆದಿಯಾತ್ ಓದಿ ಮತ್ತು ವಿವರಿಸಿ?.....................,.........66
- ಪ್ರಶ್ನೆ 4. ಸೂರ ಅಲ್-ಕಾರಿಅ ಅನ್ನು ಪಠಿಸಿ ಮತ್ತು ವಿವರಿಸಿ. ............................68
- ಪ್ರಶ್ನೆ 5. ಸೂರ ಅತ್ತಕಾಸುರ್ ಅನ್ನು ಪಠಿಸಿ ಮತ್ತು ವಿವರಿಸಿ……………………69

- ಪ್ರಶ್ನೆ 6. ಸೂರ ಅಲ್-ಅಸ್ರ್ ಅನ್ನು ಪಠಿಸಿ ಮತ್ತು ವಿವರಿಸಿ.........................71
- ಪ್ರಶ್ನೆ 7. ಸೂರ ಅಲ್-ಹುಮಝ ಅನ್ನು ಪಠಿಸಿ ಮತ್ತು ವಿವರಿಸಿ. .........................72
- ಪ್ರಶ್ನೆ 8. ಸೂರ ಅಲ್-ಫೀಲ್ ಅನ್ನು ಪಠಿಸಿ ಮತ್ತು ವಿವರಿಸಿ. ..............................73
- ಪ್ರಶ್ನೆ 9. ಸೂರ ಖುರೈಶ್ ಅನ್ನು ಪಠಿಸಿ ಮತ್ತು ವಿವರಿಸಿ..............................75
- ಪ್ರಶ್ನೆ 10. ಸೂರ ಅಲ್-ಮಾಊನ್ ಅನ್ನು ಪಠಿಸಿ ಮತ್ತು ವಿವರಿಸಿ. .....................76
- ಪ್ರಶ್ನೆ 11. ಸೂರ ಅಲ್-ಕೌಸರ್ ಅನ್ನು ಪಠಿಸಿ ಮತ್ತು ವಿವರಿಸಿ. .........................77
- ಪ್ರಶ್ನೆ 12. ಸೂರ ಅಲ್-ಕಾಫಿರೂನ್ ಅನ್ನು ಪಠಿಸಿ ಮತ್ತು ವಿವರಿಸಿ.................78
- ಪ್ರಶ್ನೆ 13. ಸೂರ ಅನ್ನಸ್ರ್ ಅನ್ನು ಪಠಿಸಿ ಮತ್ತು ವಿವರಿಸಿ...........................79
- ಪ್ರಶ್ನೆ 14. ಸೂರ ಅಲ್-ಮಸದ್ ಅನ್ನು ಪಠಿಸಿ ಮತ್ತು ವಿವರಿಸಿ...................80
- ಪ್ರಶ್ನೆ 15. ಸೂರ ಅಲ್-ಇಖ್ಲಾಸ್ ಅನ್ನು ಪಠಿಸಿ ಮತ್ತು ವಿವರಿಸಿ. ........................82
- ಪ್ರಶ್ನೆ 16. ಸೂರ ಅಲ್-ಫಲಕ್ ಅನ್ನು ಪಠಿಸಿ ಮತ್ತು ವಿವರಿಸಿ. ..........................82
- ಪ್ರಶ್ನೆ 17. ಸೂರ ಅನ್ನಾಸ್ ಅನ್ನು ಪಠಿಸಿ ಮತ್ತು ವಿವರಿಸಿ. ...............................83

**ಹದೀಸ್ ವಿಭಾಗ**

- ಪ್ರಶ್ನೆ 1. ಹದೀಸ್ ಅನ್ನು ಪೂರ್ಣಗೊಳಿಸಿ: "إنما الأعمال بالنيات..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........................................................85
- ಪ್ರಶ್ನೆ 2. "من أحدث في أمرنا هذا ..." ಎಂಬ ಹದೀಸ್ ಅನ್ನು ಪೂರ್ಣಗೊಳಿಸಿ ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..............................................85
- ಪ್ರಶ್ನೆ 3. ಹದೀಸ್ ಅನ್ನು ಪೂರ್ಣಗೊಳಿಸಿ (بينما نحن جلوس عند رسول الله ﷺ ...), ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? .....................................86
- ಪ್ರಶ್ನೆ 4. "أكمل المؤمنين إيماناً ......" ಎಂಬ ಹದೀಸ್ ಅನ್ನು ಪೂರ್ಣಗೊಳಿಸಿ ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..............................................88

- ಪ್ರಶ್ನೆ 5: ಹದೀಸ್ ಅನ್ನು ಪೂರ್ಣಗೊಳಿಸಿ: "من حلف بغير الله ..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........89
- ಪ್ರಶ್ನೆ6. ಹದೀಸ್ ಅನ್ನು ಪೂರ್ಣಗೊಳಿಸಿ: "لا يؤمن أحدكم حتى أكون أحب إليه ..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........89
- ಪ್ರಶ್ನೆ 7. ಹದೀಸ್ ಅನ್ನು ಪೂರ್ಣಗೊಳಿಸಿ: "لا يؤمن أحدكم حتى يحب لأخيه ... ..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........90
- ಪ್ರಶ್ನೆ 8. ಹದೀಸ್ ಅನ್ನು ಪೂರ್ಣಗೊಳಿಸಿ: "والذي نفسي بيده! ......" ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........90
- ಪ್ರಶ್ನೆ 9. "لا حول ولا قوة إلا بالله ......" ಎಂಬ ಹದೀಸ್ ಅನ್ನು ಪೂರ್ಣಗೊಳಿಸಿ ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........91
- ಪ್ರಶ್ನೆ 10. ಹದೀಸ್ ಅನ್ನು ಪೂರ್ಣಗೊಳಿಸಿ "ألا إن في الجسد مضغة..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........91
- ಪ್ರಶ್ನೆ 11. ಹದೀಸ್ ಅನ್ನು ಪೂರ್ಣಗೊಳಿಸಿ: "من كان آخر كلامه من الدنيا: لا إله إلا الله....." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........92
- ಪ್ರಶ್ನೆ 12. ಹದೀಸ್ ಅನ್ನು ಪೂರ್ಣಗೊಳಿಸಿ "ليس المؤمن بالطعان، ولا اللعان ..." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........92
- ಪ್ರಶ್ನೆ 13. ಹದೀಸ್ ಅನ್ನು ಪೂರ್ಣಗೊಳಿಸಿ "من حسن إسلام المرء ...." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........93
- ಪ್ರಶ್ನೆ 14. ಹದೀಸ್ ಅನ್ನು ಪೂರ್ಣಗೊಳಿಸಿ: "من قرأ حرفاً من كتاب الله....." ಮತ್ತು ಅದರ ಕೆಲವು ಪ್ರಯೋಜನಗಳನ್ನು ತಿಳಿಸಿ? ..........94

## ಇಸ್ಲಾಮೀ ಶಿಷ್ಟಾಚಾರದ ವಿಭಾಗ

- ಪ್ರಶ್ನೆ 1. ಸರ್ವಶಕ್ತನಾದ ಅಲ್ಲಾಹನೊಂದಿಗಿನ ಶಿಷ್ಟಾಚಾರಗಳು ಯಾವುವು? ..........94

- ಪ್ರಶ್ನೆ 2. ಪ್ರವಾದಿ ﷺ ರೊಂದಿಗಿನ ಶಿಷ್ಟಾಚಾರಗಳು ಯಾವುವು? ....................95
- ಪ್ರಶ್ನೆ 3. ಮಾತಾಪಿತರೊಂದಿಗಿನ ಶಿಷ್ಟಾಚಾರಗಳು ಯಾವುವು? ..........................95
- ಪ್ರಶ್ನೆ 4. ಕುಟುಂಬ ಸಂಬಂಧ ಕಾಪಾಡುವುದು ಹೇಗೆ? .....................................96
- ಪ್ರಶ್ನೆ 5. ನಾನು ನನ್ನ ಇಸ್ಲಾಮೀ ಸಹೋದರರು ಮತ್ತು ಸ್ನೇಹಿತರೊಂದಿಗೆ ಹೇಗೆ ವರ್ತಿಸಬೇಕು? ...................................................96
- ಪ್ರಶ್ನೆ 6. ನೆರೆಹೊರೆಯವರೊಂದಿಗಿನ ಶಿಷ್ಟಾಚಾರಗಳು ಯಾವುವು? ......................97
- ಪ್ರಶ್ನೆ 7. ಅತಿಥಿ ಮತ್ತು ಆತಿಥ್ಯದ ಶಿಷ್ಟಾಚಾರಗಳು ಯಾವುವು? ...........................98
- ಪ್ರಶ್ನೆ 8: ರೋಗಿ ಮತ್ತು ರೋಗಿ ಸಂದರ್ಶನದ ಶಿಷ್ಟಾಚಾರಗಳನ್ನು ತಿಳಿಸಿ? ...........98
- ಪ್ರಶ್ನೆ 9. ಜ್ಞಾನಾರ್ಜನೆಯ ಶಿಷ್ಟಾಚಾರಗಳು ಯಾವುವು? ..................................99
- ಪ್ರಶ್ನೆ 10. ಸಭೆಯ ಶಿಷ್ಟಾಚಾರಗಳು ಯಾವುವು? ..........................................100
- ಪ್ರಶ್ನೆ 11: ನಿದ್ದೆಯ ಶಿಷ್ಟಾಚಾರಗಳನ್ನು ತಿಳಿಸಿ? ............................................100
- ಪ್ರಶ್ನೆ 12. ಆಹಾರ ಸೇವನೆಯ ಶಿಷ್ಟಾಚಾರಗಳು ಯಾವುವು? .............................101
- ಪ್ರಶ್ನೆ 13: ವಸ್ತ್ರಧಾರಣೆಯ ಶಿಷ್ಟಾಚಾರಗಳು ಯಾವುವು? .................................102
- ಪ್ರಶ್ನೆ 14. ಸವಾರಿ ಮಾಡುವುದರ ಶಿಷ್ಟಾಚಾರಗಳನ್ನು ತಿಳಿಸಿ?..........................103
- ಪ್ರಶ್ನೆ 15. ರಸ್ತೆಯ ಶಿಷ್ಟಾಚಾರಗಳನ್ನು ತಿಳಿಸಿ? ............................................103
- ಪ್ರಶ್ನೆ 16. ಮನೆಯನ್ನು ಪ್ರವೇಶಿಸುವ ಮತ್ತು ಮನೆಯಿಂದ ಹೊರಡುವ ಶಿಷ್ಟಾಚಾರಗಳು ಯಾವುವು? ....................................................................104
- ಪ್ರಶ್ನೆ 17. ಮಲಮೂತ್ರ ವಿಸರ್ಜನೆಯ ಶಿಷ್ಟಾಚಾರಗಳನ್ನು ತಿಳಿಸಿ? ..................105
- ಪ್ರಶ್ನೆ 18. ಮಸೀದಿಯ ಶಿಷ್ಟಾಚಾರಗಳನ್ನು ತಿಳಿಸಿ? .......................................106
- ಪ್ರಶ್ನೆ 19. ಸಲಾಮ್ ಹೇಳುವ ಶಿಷ್ಟಾಚಾರಗಳನ್ನು ತಿಳಿಸಿ? ..............................106
- ಪ್ರಶ್ನೆ 20. ಅನುಮತಿ ಕೇಳುವ ಶಿಷ್ಟಾಚಾರಗಳನ್ನು ತಿಳಿಸಿ? .............................107

ಪ್ರಶ್ನೆ 21: ಪ್ರಾಣಿಗಳಿಗೆ ದಯೆ ತೋರುವ ಶಿಷ್ಟಾಚಾರಗಳನ್ನು ತಿಳಿಸಿ. ....................107

ಪ್ರಶ್ನೆ 22. ಕ್ರೀಡೆಯ ಶಿಷ್ಟಾಚಾರಗಳನ್ನು ತಿಳಿಸಿ. ....................................................108

ಪ್ರಶ್ನೆ 23: ಹಾಸ್ಯದ ಕೆಲವು ಶಿಷ್ಟಾಚಾರಗಳನ್ನು ತಿಳಿಸಿ. ........................................108

ಪ್ರಶ್ನೆ 24. ಸೀನುವುದರ ಶಿಷ್ಟಾಚಾರಗಳನ್ನು ತಿಳಿಸಿ. ..............................................109

ಪ್ರಶ್ನೆ 25: ಆಕಳಿಕೆಯ ಶಿಷ್ಟಾಚಾರಗಳು ಯಾವುವು? ...........................................109

ಪ್ರಶ್ನೆ 26: ಕುರ್‌ಆನ್ ಪಠಣದ ಶಿಷ್ಟಾಚಾರಗಳನ್ನು ತಿಳಿಸಿ. .....................................109

## ಗುಣನಡತೆಯ ವಿಭಾಗ

ಪ್ರಶ್ನೆ 1. ಉತ್ತಮ ಗುಣನಡತೆಯ ಶ್ರೇಷ್ಠತೆಯನ್ನು ವಿವರಿಸಿ? ...................................110

ಪ್ರಶ್ನೆ 2. ನಾವೇಕೆ ಇಸ್ಲಾಮಿ ಗುಣನಡತೆಗಳನ್ನು ಅಳವಡಿಸಿಕೊಳ್ಳಬೇಕು? ..................110

ಪ್ರಶ್ನೆ 3. ನಾವು ಗುಣನಡತೆಗಳನ್ನು ಎಲ್ಲಿಂದ ಪಡೆಯಬೇಕು? .................................110

ಪ್ರಶ್ನೆ 4. ಇಹ್ಸಾನ್(ಉತ್ತಮ ವರ್ತನೆ) ಎಂದರೇನು ಮತ್ತು ಅದರ ರೂಪಗಳು ಯಾವುವು?111

ಪ್ರಶ್ನೆ 5. ಇಹ್ಸಾನ್‌ಗೆ (ಉತ್ತಮ ವರ್ತನೆಗೆ) ವಿರುದ್ಧವಾದುದು ಯಾವುದು? .................112

ಪ್ರಶ್ನೆ 6: ಅಮಾನತ್‌ನ (ನಂಬಿಕಾರ್ಹತೆಯ) ವಿಧಗಳು ಮತ್ತು ರೂಪಗಳು ಯಾವುವು? ..112

ಪ್ರಶ್ನೆ 7. ಅಮಾನತ್‌ಗೆ (ನಂಬಿಕಾರ್ಹತೆಗೆ) ವಿರುದ್ಧವಾದುದು ಯಾವುದು? .................113

ಪ್ರಶ್ನೆ 8. ಸತ್ಯವಂತಿಕೆಯ ಗುಣ ಯಾವುದು? .....................................................113

ಪ್ರಶ್ನೆ 9. ಸತ್ಯಕ್ಕೆ ವಿರುದ್ಧವಾದುದು ಯಾವುದು? ...............................................113

ಪ್ರಶ್ನೆ 10: ತಾಳ್ಮೆಯ ವಿಧಗಳನ್ನು ತಿಳಿಸಿ. ......................................................114

ಪ್ರಶ್ನೆ 11. ತಾಳ್ಮೆಗೆ ವಿರುದ್ಧವಾದುದು ಯಾವುದು? ..........................................114

ಪ್ರಶ್ನೆ 12. ಸಹಕಾರದ ಗುಣವನ್ನು ವಿವರಿಸಿ. ...................................................115

ಪ್ರಶ್ನೆ 13. ಲಜ್ಜೆಯ ಗುಣದ ವಿಧಗಳು ಯಾವುವು? ...........................................116

ಪ್ರಶ್ನೆ 14. ದಯಾಗುಣದ ರೂಪಗಳನ್ನು ತಿಳಿಸಿ. ...............................................117

ಪ್ರಶ್ನೆ 15. ಪ್ರೀತಿಸುವ ಗುಣದ ವಿಧಗಳು ಯಾವುವು? ..........................................117

ಪ್ರಶ್ನೆ 16. ಪ್ರಸನ್ನತೆ ಎಂದರೇನು? ..........................................................118

ಪ್ರಶ್ನೆ 17. ಅಸೂಯೆ ಎಂದರೇನು? ..........................................................118

ಪ್ರಶ್ನೆ 18. ಅಪಹಾಸ್ಯ ಎಂದರೇನು? ..........................................................119

ಪ್ರಶ್ನೆ 19. ವಿನಯ ಎಂದರೇನು? ..........................................................119

ಪ್ರಶ್ನೆ 20. ನಿಷೇಧಿತ ಅಹಂಕಾರದ ವಿಧಗಳು ಯಾವುವು? .....................................120

ಪ್ರಶ್ನೆ 21. ನಿಷೇಧಿತ ವಂಚನೆಯ ಕೆಲವು ವಿಧಗಳು ಯಾವುವು? ..............................121

ಪ್ರಶ್ನೆ 22. ಪರದೂಷಣೆ ಎಂದರೇನು? ..........................................................121

ಪ್ರಶ್ನೆ 23. ಚಾಡಿ ಮಾತು ಎಂದರೇನು? ..........................................................122

ಪ್ರಶ್ನೆ 24. ಆಲಸ್ಯ ಎಂದರೇನು? ..........................................................122

ಪ್ರಶ್ನೆ 25: ಕೋಪದ ವಿಧಗಳನ್ನು ತಿಳಿಸಿ. ..........................................................123

ಪ್ರಶ್ನೆ 26. ಗೂಢಚರ್ಯೆ ಎಂದರೇನು? ..........................................................123

ಪ್ರಶ್ನೆ 27. ದುರ್ವ್ಯಯ ಎಂದರೇನು? ಜಿಪುಣತನ ಎಂದರೇನು? ಉದಾರತೆ ಎಂದರೇನು?..124

ಪ್ರಶ್ನೆ 28. ಹೇಡಿತನ ಎಂದರೇನು? ಶೌರ್ಯ ಎಂದರೇನು? ....................................124

ಪ್ರಶ್ನೆ 29. ಕೆಲವು ನಿಷಿದ್ಧ ಮಾತುಗಳು ಯಾವುವು? ...............................................125

ಪ್ರಶ್ನೆ 30. ಮುಸಲ್ಮಾನನು ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಗುವ ಅಂಶಗಳು ಯಾವುವು? ..........................................................125

## ಪ್ರಾರ್ಥನೆ ಮತ್ತು ದಿಕ್ರ್‌ಗಳ ವಿಭಾಗ

ಪ್ರಶ್ನೆ 1. ದಿಕ್ರ್‌ನ ಶ್ರೇಷ್ಠತೆಯನ್ನು ತಿಳಿಸಿ? ..........................................................126

ಪ್ರಶ್ನೆ 2. ದಿಕ್ರ್‌ನ ಕೆಲವು ಪ್ರಯೋಜನಗಳನ್ನು ತಿಳಿಸಿ? .......................................126

ಪ್ರಶ್ನೆ 3. ಅತ್ಯುತ್ತಮ ದಿಕ್ರ್ ಯಾವುದು? ....................................................126

ಪ್ರಶ್ನೆ 4. ನಿದ್ದೆಯಿಂದ ಎದ್ದೇಳುವಾಗ ಏನು ಹೇಳಬೇಕು? .......................................126

ಪ್ರಶ್ನೆ 5. ಉಡುಪು ಧರಿಸುವಾಗ ಏನು ಹೇಳಬೇಕು? ............................................127

ಪ್ರಶ್ನೆ 6. ಉಡುಪು ಕಳಚುವಾಗ ಏನು ಹೇಳಬೇಕು? .............................................127

ಪ್ರಶ್ನೆ 7. ಹೊಸ ಉಡುಪು ಧರಿಸುವಾಗ ಏನು ಪ್ರಾರ್ಥಿಸಬೇಕು? ...............................127

ಪ್ರಶ್ನೆ 8. ಇತರರು ಹೊಸ ಉಡುಪು ಧರಿಸಿದ್ದನ್ನು ಕಾಣುವಾಗ ಏನು ಪ್ರಾರ್ಥಿಸಬೇಕು? ....127

ಪ್ರಶ್ನೆ 9. ಶೌಚಾಲಯವನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು? ........................127

ಪ್ರಶ್ನೆ 10. ಶೌಚಾಲಯದಿಂದ ಹೊರಬರುವಾಗ ಏನು ಪ್ರಾರ್ಥಿಸಬೇಕು? .....................128

ಪ್ರಶ್ನೆ 11. ವುದೂ ಮಾಡುವ ಮೊದಲು ಏನು ಹೇಳಬೇಕು? ....................................128

ಪ್ರಶ್ನೆ 12. ವುದೂ ಪೂರ್ಣಗೊಳಿಸಿದ ನಂತರದ ಏನು ಪ್ರಾರ್ಥಿಸಬೇಕು? ...................128

ಪ್ರಶ್ನೆ 13. ಮನೆಯಿಂದ ಹೊರಡುವಾಗ ಏನು ಪ್ರಾರ್ಥಿಸಬೇಕು? ...............................128

ಪ್ರಶ್ನೆ 14. ಮನೆಯನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು? ..............................128

ಪ್ರಶ್ನೆ 15. ಮಸೀದಿಯನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು? ..........................129

ಪ್ರಶ್ನೆ 16. ಮಸೀದಿಯಿಂದ ಹೊರಡುವಾಗ ಏನು ಪ್ರಾರ್ಥಿಸಬೇಕು? ...........................129

ಪ್ರಶ್ನೆ 17. ಅಝಾನ್ ಕೇಳುವಾಗ ಏನು ಹೇಳಬೇಕು? ...........................................129

ಪ್ರಶ್ನೆ 18. ಅಝಾನ್ ನಂತರ ಏನು ಹೇಳಬೇಕು? ................................................129

ಪ್ರಶ್ನೆ 19. ಬೆಳಿಗ್ಗೆ ಮತ್ತು ಸಂಜೆ ಯಾವ ದಿಕ್ರ್‌ಗಳನ್ನು ಹೇಳಬೇಕು? ........................130

ಪ್ರಶ್ನೆ 20. ಮಲಗುವಾಗ ಏನು ಹೇಳಬೇಕು? .....................................................132

ಪ್ರಶ್ನೆ 21. ಆಹಾರ ಸೇವಿಸುವ ಮೊದಲು ಏನು ಹೇಳಬೇಕು? ....................................132

ಪ್ರಶ್ನೆ 22. ಆಹಾರ ಸೇವಿಸಿದ ಬಳಿಕ ಏನು ಹೇಳುತ್ತೀರಿ? .........................................132

ಪ್ರಶ್ನೆ 23. ಆಹಾರ ನೀಡಿದ ಆತಿಥೇಯನಿಗೆ ಅತಿಥಿ ಏನು ಪ್ರಾರ್ಥಿಸಬೇಕು? ....................133

ಪ್ರಶ್ನೆ 24. ಸೀನಿದಾಗ ಏನು ಹೇಳಬೇಕು? ..........................................................133

ಪ್ರಶ್ನೆ 25. ಸಭೆ ಮುಗಿದು ಎದ್ದೇಳುವಾಗ ಹೇಳುವ ಕಫ್ಫಾರತುಲ್ ಮಜ್ಲಿಸ್ ನ ಪ್ರಾರ್ಥನೆ ಏನು? ......133

ಪ್ರಶ್ನೆ 26. ಸವಾರಿ ಮಾಡುವಾಗ ಹೇಳುವ ಪ್ರಾರ್ಥನೆ ಯಾವುದು? ..............................133

ಪ್ರಶ್ನೆ 27: ಪ್ರಯಾಣದ ಪ್ರಾರ್ಥನೆ ಯಾವುದು? ......................................................134

ಪ್ರಶ್ನೆ 28: ನಿವಾಸಿಗಾಗಿ ಪ್ರಯಾಣಿಕನು ಹೇಗೆ ಪ್ರಾರ್ಥಿಸಬೇಕು? ..................................135

ಪ್ರಶ್ನೆ 29: ಪ್ರಯಾಣಿಕನನ್ನು ಬೀಳ್ಕೊಡುವಾಗ ನಿವಾಸಿ ಏನು ಪ್ರಾರ್ಥಿಸಬೇಕು? .............135

ಪ್ರಶ್ನೆ 30: ಮಾರುಕಟ್ಟೆಯನ್ನು ಪ್ರವೇಶಿಸುವಾಗ ಏನು ಪ್ರಾರ್ಥಿಸಬೇಕು? .........................135

ಪ್ರಶ್ನೆ 31. ಕೋಪ ಬರುವಾಗ ಹೇಳುವ ಪ್ರಾರ್ಥನೆ ಯಾವುದು? ..................................136

ಪ್ರಶ್ನೆ 32. ಯಾರಾದರೂ ಉಪಕಾರ ಮಾಡಿದರೆ ಏನು ಹೇಳಬೇಕು? ............................136

ಪ್ರಶ್ನೆ 33. ವಾಹನ ಮುಗ್ಗರಿಸಿದರೆ ಏನು ಪ್ರಾರ್ಥಿಸಬೇಕು? ........................................136

ಪ್ರಶ್ನೆ 34. ಏನಾದರೂ ಒಳ್ಳೆಯದು ಸಂಭವಿಸಿದರೆ ಏನು ಹೇಳಬೇಕು? .........................136

ಪ್ರಶ್ನೆ 35. ಏನಾದರೂ ಕೆಟ್ಟದು ಸಂಭವಿಸಿದರೆ ಏನು ಹೇಳಬೇಕು? ..............................136

ಪ್ರಶ್ನೆ 36. ಸಲಾಂ ಹೇಳುವುದು ಮತ್ತು ಅದಕ್ಕೆ ಉತ್ತರಿಸುವುದು ಹೇಗೆ? ........................136

ಪ್ರಶ್ನೆ 37. ಮಳೆ ಸುರಿಯುವಾಗ ಏನು ಪ್ರಾರ್ಥಿಸಬೇಕು? .........................................137

ಪ್ರಶ್ನೆ 38. ಮಳೆ ಸುರಿಯುವುದು ನಿಂತರೆ ಏನು ಪ್ರಾರ್ಥಿಸಬೇಕು? ...............................137

ಪ್ರಶ್ನೆ 40. ಗುಡುಗಿನ ಶಬ್ಧವನ್ನು ಕೇಳುವಾಗ ಏನು ಪ್ರಾರ್ಥಿಸಬೇಕು? ...........................137

ಪ್ರಶ್ನೆ 41. ಪರೀಕ್ಷಿಸಲ್ಪಟ್ಟವನನ್ನು ಕಂಡಾಗ ಏನು ಪ್ರಾರ್ಥಿಸಬೇಕು? .....................137

ಪ್ರಶ್ನೆ 42. ತನ್ನಿಂದ ದೃಷ್ಟಿ ತಾಗಬಹುದು ಎಂದು ಭಯಪಡುವವನು ಏನು ಪ್ರಾರ್ಥಿಸಬೇಕು? 138

ಪ್ರಶ್ನೆ 43. ಪ್ರವಾದಿ(ಸ) ರವರ ಮೇಲೆ ಸಲಾತ್ ಹೇಳುವುದು ಹೇಗೆ? ....................138

## ಸಮ್ಮಿಶ್ರ ವಿಷಯಗಳ ವಿಭಾಗ

ಪ್ರಶ್ನೆ 1. ಐದು ಉತ್ತರದಾಯಿತ್ವದ ನಿಯಮಗಳು ಯಾವುವು? ..........................138

ಪ್ರಶ್ನೆ 2. ಈ ಐದು ನಿಯಮಗಳನ್ನು ವಿವರಿಸಿ. ..............................................139

ಪ್ರಶ್ನೆ 3. ವ್ಯಾಪಾರ ಮತ್ತು ವ್ಯವಹಾರಗಳ ವಿಧಿಯೇನು? .................................140

ಪ್ರಶ್ನೆ 4. ಕೆಲವು ನಿಷೇಧಿತ ವ್ಯಾಪಾರ ಮತ್ತು ವ್ಯವಹಾರಗಳನ್ನು ತಿಳಿಸಿ? ...........140

ಪ್ರಶ್ನೆ 5. ಅಲ್ಲಾಹು ನಿಮಗೆ ನೀಡಿದ ಕೆಲವು ಅನುಗ್ರಹಗಳನ್ನು ತಿಳಿಸಿ. ................141

ಪ್ರಶ್ನೆ 6. ಅನುಗ್ರಹಗಳಿಗೆ ಸಂಬಂಧಿಸಿದಂತೆ ನಮ್ಮ ಕರ್ತವ್ಯವೇನು ? ನಾವು ಅವುಗಳಿಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕು? ...........................................................................142

ಪ್ರಶ್ನೆ 7. ಮುಸ್ಲಿಮರ ಹಬ್ಬಗಳು ಯಾವುವು? ..............................................142

ಪ್ರಶ್ನೆ 8. ಶ್ರೇಷ್ಠ ತಿಂಗಳು ಯಾವುದು? ......................................................142

ಪ್ರಶ್ನೆ 9. ಶ್ರೇಷ್ಠ ದಿನ ಯಾವುದು? ...........................................................142

ಪ್ರಶ್ನೆ 10. ವರ್ಷದ ಅತಿಶ್ರೇಷ್ಠ ದಿನ ಯಾವುದು? .........................................143

ಪ್ರಶ್ನೆ 11. ವರ್ಷದ ಅತಿಶ್ರೇಷ್ಠ ರಾತ್ರಿ ಯಾವುದು? .......................................143

ಪ್ರಶ್ನೆ 12. ಅನ್ಯ ಮಹಿಳೆಯನ್ನು ನೋಡಿದರೆ ಏನು ಮಾಡಬೇಕು? ......................143

ಪ್ರಶ್ನೆ 13. ಮನುಷ್ಯನ ಶತ್ರುಗಳು ಯಾರು? .................................................143

ಪ್ರಶ್ನೆ 14. ಪಶ್ಚಾತ್ತಾಪ ಎಂದರೇನು? .........................................................144

ಪ್ರಶ್ನೆ 15. ಸರಿಯಾದ ಪಶ್ಚಾತ್ತಾಪದ ಷರತ್ತುಗಳು ಯಾವುವು? ................................143

ಪ್ರಶ್ನೆ 16. ಪ್ರವಾದಿ ﷺ ರವರ ಮೇಲೆ ಸ್ವಲಾತ್ ಹೇಳುವುದು ಎಂದರೇನು? .............145

ಪ್ರಶ್ನೆ 17. ಸುಬ್‌ಹಾನಲ್ಲಾಹ್ ಎಂದರೇನು? ......................................................145

ಪ್ರಶ್ನೆ 18. ಅಲ್‌ಹಮ್ದುಲಿಲ್ಲಾಹ್ ಎಂದರೇನು? ...................................................145

ಪ್ರಶ್ನೆ 19. ಅಲ್ಲಾಹು ಅಕ್ಬರ್ ಎಂದರೇನು? ....................................................145

ಪ್ರಶ್ನೆ 20. ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್ ಎಂದರೇನು? ............................145

ಪ್ರಶ್ನೆ 21. ಅಸ್ತಗ್ಫಿರುಲ್ಲಾಹ್ ಎಂದರೇನು? ....................................................145

ಸಮಾಪ್ತಿ ....................................................................................................146